ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 13 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 176 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಆರ್‌ಎಸ್‌ಎಸ್ ಶತಮಾನೋತ್ಸವ

ಸ್ವಯಂ ಸೇವಕರಿಂದ ಭಾರೀ ಪಥ ಸಂಚಲನ

ಮೈಸೂರು, ಅ.12(ವಿವಿಹೆಚ್)– ಆರ್‌ಎಸ್‌ಎಸ್ ಶತಮಾನೋತ್ಸವ ಹಾಗೂ ವಿಜಯದಶಮಿ ನಿಮಿತ್ತ 'ಸಂಘದ ಮಂತ್ರವ ಜಪಿಸಿ ನಿರಂತರ ಧ್ಯೇಯದ ಪಥದಲ್ಲಿ ಸಾಗುವೆವು' ಘೋಷ ವಾಕ್ಯದಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮೈಸೂರು ಮಹಾ ನಗರ ವತಿಯಿಂದ ಭಾನುವಾರ ಮೈಸೂರಿನ ಗೋಕುಲಂನ 3ನೇ ಹಂತದ ಮೈಸೂರು ಒನ್ ನಾಗರಿಕ ಕೇಂದ್ರ ಮೈದಾನದಿಂದ ಶಿಸ್ತು ಸಂಯಮದ ಪಥಸಂಚಲನ ನಡೆಸಲಾಯಿತು.

ಎಡಗಡೆ ಜೇಬು ಇರುವ ಪೂರ್ಣತೋಳಿನ ಬಿಳಿ ಅಂಗಿ, ಕಂದುಬಣ್ಣದ ಪ್ಯಾಂಟ್, ಸಂಘದ ಬೆಲ್ಟ್, ಟೋಪಿ, ಕಪ್ಪು ಬಣ್ಣದ ಬೂಟು ಧರಿಸಿ, ಪ್ರಮುಖ ಬಡಾವಣೆಗಳಲ್ಲಿ 1200ಕ್ಕೂ ಅಧಿಕ



ಗೋಕುಲಂ 3ನೇ ಹಂತದ ಮೈಸೂರು ಒನ್ ನಾಗರಿಕ ಸೇವಾ ಕೇಂದ್ರ ಮೈದಾನದಲ್ಲಿ ನೆರೆದಿದ್ದ ಸಾವಿರಾರು ಮಂದಿ ಗಣವೇಷಧಾರಿ ಸ್ವಯಂ ಸೇವಕರು

ಗಣವೇಷಧಾರಿ ಸ್ವಯಂ ಸೇವಕರು ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದರು. 61 ಜನರನ್ನೊಳಗೊಂಡ 20 ತಂಡಗಳು ಎರಡು ಪಥಸಂಚಲನ ಮಾರ್ಗದಲ್ಲಿ ಗೋಕುಲಂ 3 ನೇ ಹಂತದ ಮೈಸೂರು ಒನ್ ನಾಗರಿಕ ಸೇವಾ ಕೇಂದ್ರ ಮೈದಾನದಿಂದ ಹೊರಟು 2.7 ಕಿಮೀ ದೂರ ಕ್ರಮಿಸಿ ಮತ್ತೆ ಮೈದಾನಕ್ಕೆ ವಾಪಸ್ಸಾದರು.

ಇದಕ್ಕೂ ಮೊದಲು ನೆರೆದಿದ್ದ ಕಾರ್ಯಕರ್ತರು 'ಎಲ್ಲಾ ಭೇದ ಮರೆತು ಬನ್ನಿರಿ ನಾವು ಸಮಾನ....' ಹಾಡು ಹಾಡಿದರು. ಇದಾದ ಬಳಿಕ 'ದೇವರಿಗಿಲ್ಲ ಜಾತಿ ಭೇದ ಭಕುತರಿಗಂತೂ ಇಲ್ಲ...' ಶ್ಲೋಕ ಪಠಿಸಿದರು. ಅಂತಿಮವಾಗಿ ಎಲ್ಲರೂ ಒಟ್ಟಾಗಿ 'ಸದಾ ವತ್ಸಲೇ...' ಆರ್‌ಎಸ್‌ಎಸ್ ಗೀತೆ ಹಾಡಿದ ಬಳಿಕ ■ 6ನೇ ಪುಟಕ್ಕೆ

ರಾಜ್ಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಚಿವ ಪ್ರಿಯಾಂಕ್ ಖರ್ಗೆ ಪತ್ರ

ಬೆಂಗಳೂರು, ಅ.12– ರಾಜ್ಯದಾದ್ಯಂತ ಸರ್ಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ಆವರಣದಲ್ಲಿ ಆರ್‌ಎಸ್‌ಎಸ್‌ನ ಎಲ್ಲಾ ಚಟುವಟಿಕೆಗಳನ್ನು ನಿಷೇಧಿಸಬೇಕು. ಇಂತಹ ಕ್ರಮಗಳು ಭಾರತದ ಏಕತೆ ಮತ್ತು ಸಂವಿಧಾನದ ಸ್ಫೂರ್ತಿಗೆ ವಿರುದ್ಧವಾಗಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಅ.4 ರಂದು ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಹಾಗೂ ಸಾರ್ವಜನಿಕ ಮೈದಾನಗಳಲ್ಲಿ ಶಾಖೆಗಳನ್ನು ನಡೆಸುತ್ತಿದೆ. ಅಲ್ಲಿ ಘೋಷಣೆಗಳನ್ನು ಕೂಗಲಾಗುತ್ತದೆ. ಮಕ್ಕಳು ಮತ್ತು ಯುವಕರ ಮನಸ್ಸಿನಲ್ಲಿ ನಕಾರಾತ್ಮಕ ವಿಚಾರಗಳನ್ನು ತುಂಬಲಾಗುತ್ತದೆ ಎಂದು ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಕಚೇರಿ ಭಾನುವಾರ ಮಾಧ್ಯಮಗಳೊಂದಿಗೆ ಈ ಪತ್ರವನ್ನು ಹಂಚಿಕೊಂಡಿದ್ದು, ಆರ್‌ಎಸ್‌ಎಸ್‌ನ ನಂಬಿಕೆ ವ್ಯವಸ್ಥೆಯು ಭಾರತದ ಏಕತೆ ಮತ್ತು ಜಾತ್ಯಾತೀತ ಚೌಕಟ್ಟಿನ ಆದರ್ಶಗಳಿಗೆ ವಿರುದ್ಧವಾಗಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಜನರಲ್ಲಿ ದ್ವೇಷವನ್ನು ಬಿತ್ತುವ ವಿಭಜಕ ಶಕ್ತಿಗಳು ತಲೆ ಎತ್ತಿದಾಗ, ಸಮಗ್ರತೆ, ಸಮಾನತೆ ಮತ್ತು ಏಕತೆಯ ಮೂಲ ತತ್ವಗಳ ಮೇಲೆ ಸ್ಥಾಪಿತವಾದ ನಮ್ಮ ಸಂವಿಧಾನವು ಅಂತಹ ಅಂಶಗಳನ್ನು ನಿಗ್ರಹಿಸಲು ಮತ್ತು ರಾಷ್ಟ್ರದ ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿಯಲು ನಮಗೆ ಅಧಿಕಾರವನ್ನು ನೀಡುತ್ತದೆ ಎಂದು ಸಚಿವರು ಬರೆದಿದ್ದಾರೆ. ಪೊಲೀಸರ ಅನುಮತಿ




ಪ್ರಿಯಾಂಕ್ ಖರ್ಗೆ

ಪಡೆಯದೆ, ಕೋಲುಗಳನ್ನು ಹಿಡಿದು ಆಕ್ರಮಣಕಾರಿ ಪ್ರದರ್ಶನಗಳನ್ನು ನಡೆಸಲಾಗುತ್ತಿದೆ. ■ 6ನೇ ಪುಟಕ್ಕೆ

ಪ್ರಿಯಾಂಕ್ ಮೂರ್ಖತನ ಪ್ರದರ್ಶನ

ಬೆಂಗಳೂರು, ಅ.12– ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರಿಯಾಂಕ್ ಖರ್ಗೆಯವರು ಆರ್‌ಎಸ್‌ಎಸ್ ಚಟುವಟಿಕೆ ನಿಷೇಧದ ಕುರಿತು ಇಷ್ಟೊಂದು ಬೇಜವಾಬ್ದಾರಿಯಿಂದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ ಎಂದರೆ, ಇದು ಅವರ ಮೂರ್ಖತನದ ಪ್ರದರ್ಶನ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಹಿನ್ನೆಲೆ, ಕಾರ್ಯ ಚಟುವಟಿಕೆ ಕುರಿತು ಮಾಹಿತಿ ಕೊರತೆ ಇರುವವರು ಕೇವಲ ತಮ್ಮ ಪ್ರಚಾರಕ್ಕಾಗಿ ಚಟದಿಂದ ಮಾತ ನಾಡುವವರು ಇಂತಹ ಹೇಳಿಕೆ ಕೊಡಲು ಸಾಧ್ಯ ಎಂದು ವಾಗ್ದಾಳಿ ನಡೆಸಿದ್ದಾರೆ. ಹಿಂದೆ ಎರಡು ಮೂರು ಬಾರಿ ಇದೇ ರೀತಿ ಆರ್‌ಎಸ್‌ಎಸ್ ಅನ್ನು ಕಾಂಗ್ರೆಸ್ ಪಕ್ಷ ನಿಷೇಧಿಸಿತ್ತು. ಅದೇ ಕಾಂಗ್ರೆಸ್ ಪಕ್ಷವು ನಿಷೇಧವನ್ನು ಹಿಂದಕ್ಕೆ ಪಡೆದ ಉದಾಹರಣೆ ■ 6ನೇ ಪುಟಕ್ಕೆ

ಪ್ರಿಯಾಂಕ್ ಖರ್ಗೆ ಬೌದ್ಧಿಕ ದಾರಿದ್ರ್ಯತನ ತೋರಿಸುತ್ತದೆ

ಬೆಂಗಳೂರು, ಅ.12– ಜಗತ್ತಿನ ಅತ್ಯಂತ ದೊಡ್ಡ ಸ್ವಯಂಸೇವಕರ ಪಡೆ ಹೊಂದಿರುವ ಆರ್‌ಎಸ್‌ಎಸ್‌ನ ನಿಷೇಧಕ್ಕೆ ಸಚಿವರು ಕರೆ ಕೊಟ್ಟಿರುವುದು ಅವರ ಬೌದ್ಧಿಕ ದಾರಿದ್ರ್ಯತನ ತೋರಿಸುತ್ತದೆ ಎಂದು ಬಿಜೆಪಿ ಉಚ್ಛಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಯತ್ನಾಳ್, ಸಂಘವನ್ನು ನಿಷೇಧ ಮಾಡಲು ಯಾರಿಂದಲೂ ಸಾಧ್ಯವಾಗಿಲ್ಲ. ವಿರೋಧಿಗಳು ಪ್ರೀತಿಸುವ, ಗೌರವಿಸುವ ಜಗತ್ತಿನ ಏಕೈಕ ಸಂಘಟನೆಯೇ ಆರ್‌ಎಸ್‌ಎಸ್. ರಾಜಕೀಯ ಪ್ರೇರಿತ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟು ಸ್ವಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಪ್ರಿಯಾಂಕ್ ಖರ್ಗೆ ಅವರು ಶ್ರಮಿಸಲಿ. ಅಷ್ಟಕ್ಕೂ, ನಿಷೇಧಗೊಳಿಸಬೇಕಾಗಿದ್ದರೆ ಕೂಡಲೇ ಎಸ್‌ಡಿಪಿಐ ನಂತ ದೇಶ ವಿರೋಧಿ ಸಂಘಟನೆಗಳನ್ನು ನಿಷೇದ ಮಾಡಲಿ. ■ 6ನೇ ಪುಟಕ್ಕೆ

ವಿಷ ಉಗುಳಿ ಕೆಲವರು ಇಹಲೋಕ ತ್ಯಜಿಸಿದ್ದಾರೆ, ತಮ್ಮದು ಯಾವ ಪಾಡೋ...

ಬೆಂಗಳೂರು, ಅ.12– ಸರ್ಕಾರದ ಸ್ಥಳಗಳಲ್ಲಿ ಆರ್‌ಎಸ್‌ಎಸ್‌ನ ಎಲ್ಲ ಚಟುವಟಿಕೆಗಳನ್ನು ನಿಷೇಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿರುವುದು ವಿವಾದದ ಕಿಡಿ ಹೊತ್ತಿಸಿದೆ. ಈ ಕುರಿತು ಬಿಜೆಪಿ ನಾಯಕ ಸಿ.ಟಿ. ರವಿ, ಪ್ರಿಯಾಂಕ್ ಖರ್ಗೆ ಬಗ್ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.



ಎಕ್ಸ್ ಪೋಸ್ಟ್ ಮಾಡಿರುವ ಅವರು, ಜೀವನ ಪೂರ್ತಿ ಹಾವಿನಂತೆ ಸಂಘದ ಮೇಲೆ ವಿಷಕಾರುತ್ತಾ ಇದ್ದ ಕೆಲವರು ಹೊಟ್ಟೆ ಒಳಗೆ ಹುಣ್ಣಾಗಿ ಇಹಲೋಕವನ್ನೇ ತ್ಯಜಿಸಿದ್ದಾರೆ. ತಮ್ಮದು ಯಾವ ಪಾಡೋ ಕಾದು ನೋಡೋಣ.. ಎಂದು ತಿವಿದಿದ್ದಾರೆ. ಪ್ರಿಯಾಂಕ್ ಖರ್ಗೆ ಅವರೇ, ಯಾಕಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಬೇಕು ಹೇಳಿ. ಮಕ್ಕಳಲ್ಲಿ ರಾಷ್ಟ್ರಭಕ್ತಿಯ ■ 6ನೇ ಪುಟಕ್ಕೆ

ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದ ವೇದಿಕೆಯಲ್ಲೇ ಹೈಡ್ರಾಮಾ

ಆರ್‌ಎಸ್‌ಎಸ್ ಸಮವಸ್ತ್ರದಲ್ಲಿ ಬಿಜೆಪಿ ಶಾಸಕ ಮುನಿರತ್ನ ಧರಣಿ

ಬೆಂಗಳೂರು, ಅ.12– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿದ್ದ ವೇದಿಕೆಯಲ್ಲೇ ಹೈಡ್ರಾಮಾ ನಡೆದಿದ್ದು, ಬಿಜೆಪಿ ಶಾಸಕ ಮುನಿರತ್ನ ಆರ್‌ಎಸ್‌ಎಸ್ ಸಮವಸ್ತ್ರದಲ್ಲಿ ಪ್ರತಿಭಟನೆ ನಡೆಸಿರುವ ಘಟನೆ ವರದಿಯಾಗಿದೆ.

'ಬೆಂಗಳೂರು ನಡಿಗೆ' ಕಾರ್ಯಕ್ರಮದ ಪ್ರಯುಕ್ತ ಡಿಸಿಎಂ ಡಿ.ಕೆ. ಶಿವಕುಮಾರ್ ಭಾನುವಾರ ಮತ್ತಿಕೆರೆಯ ಜೆಪಿ ಪಾರ್ಕ್‌ನಲ್ಲಿ ಜನರೊಂದಿಗೆ ಸಂವಾದ ನಡೆಸಿದರು. ಈ ವೇಳೆ ಹೈಡ್ರಾಮಾ ನಡೆದಿದ್ದು, ಆರ್‌ಎಸ್‌ಎಸ್ ಡ್ರೆಸ್, ಟೋಪಿ ಧರಿಸಿ ಜೆಪಿ ಪಾರ್ಕ್‌ಗೆ ಬಂದ ಬಿಜೆಪಿ ಶಾಸಕ ಮುನಿರತ್ನ ಧರಣಿ ನಡೆಸಿದ್ದಾರೆ.

ವೇದಿಕೆಗೆ ಬಂದ ಮುನಿರತ್ನ ಅವರನ್ನು ಡಿಕೆ ಶಿವಕುಮಾರ್ ನಿರ್ಲಕ್ಷ್ಯಿಸಿದರು.



ವೇದಿಕೆಯಲ್ಲಿ ಡಿ.ಕೆ.ಶಿವಕುಮಾರ್ ಜೊತೆ ಶಾಸಕ ಮುನಿರತ್ನ ವಾಗ್ವಾದ.

ಡಿಕೆಶಿ ವೇದಿಕೆಯಲ್ಲಿ ಕುಳಿತಾಗಲೂ ಶಾಸಕ ಮುನಿರತ್ನ ಕೆಳಗೆ ಜನರ ಮಧ್ಯೆ ಕುರ್ಚಿಯಲ್ಲಿ ಕುಳಿತರು. ಆಗ ಡಿಸಿಎಂ 'ಹೇಯ್, ಕರಿ ಟೋಪಿ ಎಂಎಲ್‌ಎ ಬಾರಯ್ಯ' ಎಂದು ಕರೆದರು. ಆದರೆ, ಅದಕ್ಕೆ ಒಪ್ಪದ ಮುನಿರತ್ನ 'ನಾನು ಜನರ ಮಧ್ಯದಲ್ಲೇ ಕೂರುತ್ತೇನೆ' ಎಂದು ಹೇಳಿದರು.

ಆಹ್ವಾನವಿಲ್ಲ, ಫೋಟೋ ಕೂಡ ಇಲ್ಲ: ಇದಾದ ನಂತರ ಇದ್ದಕ್ಕಿದ್ದಂತೆ ಎದ್ದು ನಿಂತು ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಮುನಿರತ್ನ ಪ್ರತಿಭಟನೆ ನಡೆಸಿದರು. ಬೆಂಗಳೂರು ನಡಿಗೆ ಸರ್ಕಾರದ ಕಾರ್ಯಕ್ರಮವಾದರೂ ಶಾಸಕನಾದ ನನಗೆ ಆಹ್ವಾನ ನೀಡದೆ ಅಗೌರವ ತೋರಿದ್ದಾರೆ ಎಂದು ಆರೋಪಿಸಿದರು. ಈ ಕಾರ್ಯಕ್ರಮದಲ್ಲೆಲ್ಲೂ ಶಾಸಕನ ಒಂದು ಫೋಟೋ ಕೂಡ ಹಾಕಿಲ್ಲ, ನನಗೆ ಆಹ್ವಾನ ನೀಡಿಲ್ಲ ಎಂದು ಮುನಿರತ್ನ ಆಕ್ರೋಶ ವ್ಯಕ್ತಪಡಿಸಿದರು. ■ 6ನೇ ಪುಟಕ್ಕೆ

'ಬ್ಲೂ ಸ್ಟಾರ್ ಆಪರೇಷನ್' ಕಾರ್ಯಾಚರಣೆ ತಪ್ಪಿಗೆ ಇಂದಿರಾಗಾಂಧಿ ಪ್ರಾಣ ತೆತ್ತರು

ಕಾಂಗ್ರೆಸ್ ಹಿರಿಯ ನಾಯಕ ಪಿ.ಚಿದಂಬರಂ

ನವದೆಹಲಿ, ಅ.12– 1984ರಲ್ಲಿ ಅಮೃತಸರದ ಸ್ವರ್ಣ ಮಂದಿರದಿಂದ ಉಗ್ರರನ್ನು ಹೊರದಬ್ಬಲು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಸೂಚನೆಯ ಮೇರೆಗೆ ನಡೆಸಲಾದ 'ಆಪರೇಷನ್ ಬ್ಲೂ ಸ್ಟಾರ್' ತಪ್ಪು ಮಾರ್ಗವಾಗಿತ್ತು ಮತ್ತು ಕಾಂಗ್ರೆಸ್ ನಾಯಕಿ ಆ ತಪ್ಪಿಗೆ ತಮ್ಮ ಜೀವವನ್ನೇ ತೆತ್ತರು ಎಂದು ಕಾಂಗ್ರೆಸ್ ಹಿರಿಯ ನಾಯಕ, ಮಾಜಿ ಕೇಂದ್ರ ಸಚಿವ ಪಿ.ಚಿದಂಬರಂ ಹೇಳಿದ್ದಾರೆ.



ಇಂದಿರಾ ಗಾಂಧಿ

ಶನಿವಾರ ಹಿಮಾಚಲ ಪ್ರದೇಶದ ಕಸೌಲಿಯಲ್ಲಿ ನಡೆದ ಖುಷ್ವಂತ್ ಸಿಂಗ್ ಸಾಹಿತ್ಯ ಉತ್ಸವದಲ್ಲಿ ಪತ್ರಕರ್ತ ಹರಿಂದರ್ ಬವೇಜಾ ಅವರ 'ದೇ ವಿಲ್ ಶೂಟ್ ಯು, ಮೇಡಂ' ಪುಸ್ತಕದ ಕುರಿತು ಚರ್ಚೆಯನ್ನು ನಡೆಸುತ್ತಿದ್ದಾಗ ಕೇಂದ್ರದ ಮಾಜಿ ಗೃಹ ಮತ್ತು ■ 6ನೇ ಪುಟಕ್ಕೆ



ಪಿ.ಚಿದಂಬರಂ

ಯಾರ ಒತ್ತಡಕ್ಕೆ ಒಳಗಾಗಿ ಕಾಂಗ್ರೆಸ್ ಮರ್ಯಾದೆ ತೆಗೆಯುತ್ತಿದ್ದೀರಾ

ಚಿದಂಬರಂ ವಿರುದ್ಧ ಹೈಕಮಾಂಡ್ ಗರಂ

ನವದೆಹಲಿ, ಅ.12– ಇಂದಿರಾ ಗಾಂಧಿ ಸರ್ಕಾರ ಆಪರೇಷನ್ ಬ್ಲೂ ಸ್ಟಾರ್ ಅನ್ನು ನಿರ್ವಹಿಸಿದ ರೀತಿ ಬಗ್ಗೆ ಪಕ್ಷದ ಹಿರಿಯ ನಾಯಕ ಮತ್ತು ಮಾಜಿ ಕೇಂದ್ರ ಗೃಹ ಸಚಿವ ಪಿ. ಚಿದಂಬರಂ ಅವರ ಹೇಳಿಕೆಯಿಂದ ಕಾಂಗ್ರೆಸ್ ನಾಯಕತ್ವ ಅಸಮಾಧಾನಗೊಂಡಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಚಿದಂಬರಂ ಅವರ ಇತ್ತೀಚಿನ ಹೇಳಿಕೆಗಳನ್ನು ಪಕ್ಷದ ಸಹೋದ್ಯೋಗಿ ರಶೀದ್ ಅಲ್ವಿ ಟೀಕಿಸಿದ್ದಾರೆ ಮತ್ತು ಅವರ ವಿರುದ್ಧದ ಕ್ರಿಮಿನಲ್ ಪ್ರಕರಣದಿಂದಾಗಿ ಚಿದಂಬರಂ ಯಾವುದೇ ಒತ್ತಡದಲ್ಲಿದ್ದಾರೆಯೇ ಎಂದು ಅಲ್ವಿ ಪ್ರಶ್ನಿಸಿದ್ದಾರೆ.

ಚಿದಂಬರಂ ವಿರುದ್ಧ ಕಾಂಗ್ರೆಸ್, ಹೈಕಮಾಂಡ್‌ನಿಂದ ಹಿಡಿದು ಪಕ್ಷದ ಸಾಮಾನ್ಯ ಕಾರ್ಯಕರ್ತನವರೆಗೆ, ಅಸಮಾಧಾನ ಭುಗಿಲೆದ್ದಿದೆ. ಕಾಂಗ್ರೆಸ್‌ನಿಂದ ಎಲ್ಲವನ್ನೂ ಪಡೆದ ಹಿರಿಯ ನಾಯಕನೊಬ್ಬ ಬುದ್ಧಿವಂತಿಕೆಯಿಂದ ಮಾತನಾಡಬೇಕು. ಪಕ್ಷವನ್ನು ಮುಜುಗರಕ್ಕೀಡುಮಾಡುವ ಹೇಳಿಕೆಗಳನ್ನು ಪದೇ ಪದೇ ನೀಡುವುದು ಸರಿಯಲ್ಲ ■ 6ನೇ ಪುಟಕ್ಕೆ

ಫಾಸ್ಟ್‌ಫುಡ್‌ನ ಕುದಿಯುವ ಎಣ್ಣೆ ಮೈಮೇಲೆ ಚೆಲ್ಲಿ ಮಗು ದುರ್ಮರಣ

- ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ಹೃದಯ ವಿದ್ರಾವಕ ಘಟನೆ
- ಫುಟ್‌ಪಾತ್‌ನಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತಿರುವ ತಿಂಡಿ ತಿನಿಸು ಗಾಡಿಗಳು
- ಪಾದಚಾರಿಗಳು ಓಡಾಡಲು ಜಾಗವೇ ಇಲ್ಲ
- ಸುರಕ್ಷತಾ ಕ್ರಮ, ಶುಚಿತ್ವ ಕಾಪಾಡುತ್ತಿಲ್ಲ
- ಕಣ್ಮುಚ್ಚಿ ಕುಳಿತಿರುವ ನಗರ ಪಾಲಿಕೆ ಅಧಿಕಾರಿಗಳು, ಪೊಲೀಸರು

ಮೈಸೂರು, ಅ.12(ಆರ್‌ಕೆ, ಬಿಎಲ್‌ಯು)– ಸೈಡ್ ಸ್ಟ್ಯಾಂಡ್ ಜಾರಿದ್ದರಿಂದ ಬೈಕ್‌ನ ಹ್ಯಾಂಡಲ್ ಫಾಸ್ಟ್‌ಫುಡ್‌ನ ಬಾಣಲಿಗೆ ತಾಕಿದ ಪರಿಣಾಮ ಕುದಿಯುವ ಎಣ್ಣೆ ನಾಲ್ಕು ವರ್ಷದ ಮಗುವಿನ ಮೇಲೆ ಚೆಲ್ಲಿ ದುರ್ಮರಣಕ್ಕೀಡಾದ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರಿನ ಗಾಂಧಿನಗರದ ನಿವಾಸಿ ಲಕ್ಷ್ಮಣ್ ಅವರ ಪುತ್ರ ಅನ್ವಿಶ್(4) ಮೃತ ಬಾಲಕ. ಈತ ಸುಟ್ಟ ಗಾಯಗಳಿಂದ ಎರಡು ದಿನ ಆಸ್ಪತ್ರೆಯಲ್ಲಿ ನರಳಾಡಿ ಅ.4ರಂದು ಕೊನೆಯುಸಿರೆಳೆದಿದ್ದು, ಈ ದುರ್ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಏನೂ ಅರಿಯದ ಪುಟ್ಟ ಮಗುವಿನ ಬಲಿಗೆ ಜಡ್ಡುಗಟ್ಟಿದ ವ್ಯವಸ್ಥೆಯ ದಿವ್ಯ ನಿರ್ಲಕ್ಷ್ಯವೇ ಪ್ರಮುಖ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಅನ್ವಿಶ್

ದುರ್ಘಟನೆ ವಿವರ: ಅ.2ರಂದು ಬೆಳಗ್ಗೆ ಮನೆಗೆ ತಿಂಡಿ ತರಲೆಂದು ಲಕ್ಷ್ಮಣ್ ಅವರು ಎನ್.ಆರ್.ಮೊಹಲ್ಲಾದ ಮಾರುತಿ ಸರ್ಕಲ್ ಬಳಿಯ ಸೆಂಟ್ ಮೇರಿಸ್ ರಸ್ತೆಗೆ ಬೈಕ್‌ನಲ್ಲಿ ಹೋಗಿದ್ದರು. ಈ ವೇಳೆ ನಾಲ್ಕು ವರ್ಷದ ಪುತ್ರ ಅನ್ವಿತ್ ಕೂಡ ಜೊತೆಯಲ್ಲಿ ಹೋಗಿದ್ದ. ಫುಟ್‌ಪಾತ್‌ನಲ್ಲಿದ್ದ ಭಾಗ್ಯಲಕ್ಷ್ಮಿ ಟಿಫಾನಿಸ್ ಹೆಸರಿನ ಫಾಸ್ಟ್‌ಫುಡ್ ಬಳಿಯೇ ಬೈಕ್ ನಿಲ್ಲಿಸಿ, ಮಗುವನ್ನು ಪೆಟ್ರೋಲ್ ಟ್ಯಾಂಕ್ ಮೇಲೆ ಕೂರಿಸಿ ಲಕ್ಷ್ಮಣ್ ತಿಂಡಿ ಕಟ್ಟಿಸಿಕೊಳ್ಳಲು ತೆರಳಿದ್ದರು. ಇದೇ ವೇಳೆ ಕುದಿಯುವ ಎಣ್ಣೆಯಲ್ಲಿ ಪೂರಿ ಬೇಯಿಸಲಾಗುತ್ತಿತ್ತು. ದುರದೃಷ್ಟವಶಾತ್ ಬೈಕ್‌ನ ಸೈಡ್ ಸ್ಟ್ಯಾಂಡ್ ಜಾರಿದ್ದರಿಂದ ಅದರ ಹ್ಯಾಂಡಲ್ ಬಾಣಲಿಗೆ ಬಡಿದು, ನೆಲಕ್ಕುರುಳಿದೆ. ಬೈಕ್ ಮೇಲಿದ್ದ ಮಗುವೂ ಕೆಳಗೆ ಬಿದ್ದಿದೆ. ಇದೇ ವೇಳೆ ಬಾಣಲಿಯಲ್ಲಿದ್ದ ಕುದಿಯುವ ಎಣ್ಣೆ ಮಗುವಿನ ಮೈಮೇಲೆ ಚೆಲ್ಲಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ■ 6ನೇ ಪುಟಕ್ಕೆ

> ಕುದಿಯುವ ಎಣ್ಣೆ ಬಿದ್ದು ಪುಟ್ಟ ಮಗು ಸಾವಿಗೀಡಾದ ಘಟನೆ ಅತ್ಯಂತ ದುಃಖಕರ. ಈಗಲಾದರೂ ಪಾಠ ಕಲಿತು, ಕನಿಷ್ಠ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ವ್ಯಾಪಾರಸ್ಥರು ಗ್ಯಾಸ್ ಸಿಲಿಂಡರ್ ಮತ್ತು ಸ್ಟೌವ್‌ಗಳನ್ನು ಸೂಕ್ತ ಸ್ಥಳದಲ್ಲಿಡಬೇಕು. ಇವುಗಳಿಂದ ಗ್ರಾಹಕರೂ ಅಂತರ ಕಾಯ್ದುಕೊಳ್ಳಬೇಕು. ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ಆಗಾಗ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ಸುರಕ್ಷತಾ ಕ್ರಮ ಕೈಗೊಳ್ಳುವ ಸಂಬಂಧ ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸಬೇಕು. ನಿಯಮ ಪಾಲಿಸದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.
>
> –ನಾರಾಯಣ ವಿ.ಹೆಗ್ಡೆ,
> ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ

ಮೈಸೂರು ಮಹಾನಗರ ಪಾಲಿಕೆ ವೈಫಲ್ಯ

ಫಾಸ್ಟ್‌ಫುಡ್ ಸೇರಿದಂತೆ ಇತರೆ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಬಹುತೇಕ ವ್ಯಾಪಾರಸ್ಥರು ಶುಚಿತ್ವ ಕಾಪಾಡುತ್ತಿಲ್ಲ. ರಸ್ತೆ ಬದಿಯಲ್ಲೇ ಬಾಣಲಿಯಿಟ್ಟು ಕುದಿಯುವ ಎಣ್ಣೆಯಲ್ಲಿ ಪೂರಿ, ವಡೆ, ಬೋಂಡಾ, ಬಜ್ಜಿ ಕರಿಯುತ್ತಾರೆ. ದೊಡ್ಡ ಸ್ಟವ್‌ಗಳ ಮೇಲೆ ಹಗಲವಾದ ತವಾ ಇಟ್ಟು ದೋಸೆ, ಚಪಾತಿ, ಪರೋಟ ಬೇಯಿಸುತ್ತಾರೆ. ಈ ವೇಳೆ ಯಾವುದೇ ಸುರಕ್ಷತಾ ಕ್ರಮ ವಹಿಸುವುದಿಲ್ಲ. ಈ ಬಗ್ಗೆ ಪಾಲಿಕೆಯ ಯಾವ ಅಧಿಕಾರಿಗಳೂ ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತಿಲ್ಲ. ಇನ್ನು ಫಾಸ್ಟ್‌ಫುಡ್‌ನ ಆಹಾರದ ಗುಣಮಟ್ಟ, ಅದಕ್ಕೆ ಬಳಸುವ ವಸ್ತುಗಳ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ. ಪತ್ರಿಕೆಗಳಲ್ಲಿ ವರದಿ ಪ್ರಕಟವಾದಾಗ ಕಾಟಾಚಾರಕ್ಕೆ ಕೆಲ ಗಾಡಿಗಳನ್ನು ತೆರವುಗೊಳಿಸುತ್ತಾರೆ. ಮತ್ತೆ ಯಾರದ್ದೋ ಪ್ರಭಾವದಿಂದ ಕೆಲ ದಿನಗಳಲ್ಲೇ ಅದೇ ಸ್ಥಳದಲ್ಲಿ ವ್ಯಾಪಾರ ಪುನಾರಂಭಿಸುತ್ತಾರೆ. ಇದು ನಗರ ಪಾಲಿಕೆ ವೈಫಲ್ಯವಲ್ಲದೆ ಮತ್ತೇನು ಎಂದು ಜನ ಆಕ್ರೋಶದಿಂದ ಪ್ರಶ್ನಿಸುತ್ತಿದ್ದಾರೆ.

ನಾಳೆಯಿಂದ ಅಂತಾರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನ



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನದ ಪೋಸ್ಟರ್ ಬಿಡುಗಡೆ.

"ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕರಿಸಿ 70 ವರ್ಷವಾದುದರಿಂದ ಇಡೀ ದೇಶಕ್ಕೆ ಮಾದರಿಯಾಗುಂತೆ ಬೌದ್ಧ ಮಹಾಸಮ್ಮೇಳನ ಆಯೋಜಿಸಲಾಗಿದೆ. ಭಾರತ ಮಾತ್ರವಲ್ಲದೇ ವಿದೇಶಗಳ ಬಿಕ್ಕುಗಳು ಭಾಗವಹಸಲಿದ್ದಾರೆ. ಮಹಾಮೈತ್ರಿಗಾಗಿ ಬುದ್ಧ ಧಮ್ಮಾವಲಂಬಿಗಳು ಭಾಗವಹಿಸುತ್ತಿದ್ದಾರೆ.
–ಬೋದಿರತ್ನ ಬಂತೇಜಿ, ನಳಂದ ಬುದ್ಧವಿಹಾರ, ಟಿ.ನರಸೀಪುರ

ಮೈಸೂರು,ಅ.12(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕರಿಸಿ 70 ವರ್ಷಸಂದ ಹಿನ್ನೆಲೆಯಲ್ಲಿ ಮಾನವ ಮೈತ್ರಿಯ ಪಯಣ ಆಶಯದೊಂದಿಗೆ ಅ. 14 ಮತ್ತು 15ರಂದು ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತಾರಾಷ್ಟ್ರೀಯ ಬೌದ್ಧಮಹಾ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಗಾಂಧಿ ನಗರದ ಉರಿಲಿಂಗಿಪೆದ್ದಿ ಮಠದ ಪೀಠಾಧಿಪತಿ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಬಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು, ರಾಜ್ಯ ಅಂಬೇಡ್ಕರ್‌ವಾದಿ ಸಂಘಟನೆಗಳು, ವಿಶ್ವಮೈತ್ರಿ ಬುದ್ಧ ವಿಹಾರದ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳ ಬೌದ್ಧ ಮಹಾ ಸಮ್ಮೇಳನ ಆಯೋಜಿಸಲಾಗಿದೆ. ಈ ಸಮ್ಮೇಳನದಲ್ಲಿ 30 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಎರಡು ದಿನ ನಡೆಯುವ ಈ ಬೌದ್ಧ ಸಮ್ಮೇಳನ ಅಂಬೇಡ್ಕರ್ ಅವರು ಕಂಡ ಕನಸ್ಸನ್ನು ಈಡೇರಿಸಲು ಮತ್ತು ಎಲ್ಲಾ ಸಮಾಜದ, ಧರ್ಮದ, ವರ್ಗಗಳ ಜನರನ್ನು ಒಳಗೊಂಡ ಕಾರ್ಯಕ್ರಮವಾಗಿದೆ. ಯಾರ ವಿರುದ್ಧ ಅಥವಾ ಯಾರನ್ನೂ ಟೀಕಿಸಲು ಸಮ್ಮೇಳನ ಮಾಡುತ್ತಿಲ್ಲ. ಬೌದ್ಧ ಧಮ್ಮ ಪುನರುತ್ಥಾನಕ್ಕಾಗಿ ಈ ಸಮ್ಮೇಳನ ಆಯೋಜಿಸಿದ್ದೇವೆ ಎಂದು ಹೇಳಿದರು.

ನಾಲ್ಕು ವೇದಿಕೆಗಳಲ್ಲಿ ನಡೆಯುವ ಗೋಷ್ಠಿಗಳಲ್ಲಿ ಖ್ಯಾತ ಸಾಹಿತಿಗಳು ಮತ್ತು ಹೋರಾಟಗಾರರಾದ ಕಾಂಚಾ ಈಳಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಪ್ರೊ.ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ್, ಪ್ರೊ.ಅಪ್ಪಗೆರೆ ಸೋಮಶೇಖರ್, ಕೆ.ದೀಪಕ್, ನಾಗಸಿದ್ಧಾರ್ಥ ಹೊಲೆಯಾರ್, ಹೆಚ್.ಎಸ್.ಅನುಪಮಾ, ಅಶೋಕ್, ಪ್ರೊ.ಸೋಸಲೆ ಚಿನ್ನಸ್ವಾಮಿ, ಮಲ್ಲಿಕಾರ್ಜುನ ಕನಕಪುರ, ಸೋಸಲೆ ಗಂಗಾಧರ್, ಅಮೃತ ಅತ್ರಾಡಿ, ವಡ್ಡಗೆರೆ ನಾಗರಾಜಯ್ಯ, ಡಾ.ವಿಠ್ಠಲ್ ವಗ್ಗನ್, ಪ್ರೊ.ಸೋಮಶೇಖರ್, ಡಾ.ಎಚ್.ಟಿ. ಪೋತೆ, ಪ್ರಕಾಶ್ ರಾಜ್, ತಲಕಾಡು ರಂಗೇಗೌಡ, ಹರ್ಷ ಕುಮಾರ್ ಕುಗ್ವೆ, ಡಾ.ಕೃಷ್ಣಮೂರ್ತಿ ಚಮರಂ, ಡಾ.ಶಿವಕುಮಾರ, ಜಯದೇವಿ ತಾಯಿ ಲಿಗಾಡೆ, ಚೇತನ್ ಅಹಿಂಸಾ, ಪ್ರೊ.ಹರಿರಾಮ್, ಡಾ.ಜಿ.ಶ್ರೀನಿವಾಸ್, ಡಾ.ಹ.ರಾ. ಮಹೇಶ್, ಡಾ.ನಟರಾಜ್ ಬೂದಾಳ್, ಧರಣಿದೇವಿ ಮಾಲಗತ್ತಿ ಹಾಗೂ ಇನ್ನಿತರರು ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿ ವಿಚಾರ ಮಂಡಿಸಲಿದ್ದಾರೆ ಎಂದರು.

ಅ.15ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗೃಹ ಸಚಿವ ಡಾ.ಜಿ. ಪರಮೇಶ್ವರ, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಕೆ.ಹೆಚ್.ಮುನಿಯಪ್ಪ, ಸತೀಶ ಜಾರಕಿಹೊಳಿ, ಪ್ರಿಯಾಂಕ ಖರ್ಗೆ, ಕೆ.ವೆಂಕಟೇಶ್ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ. ವಸ್ತುಪ್ರದರ್ಶನ, ಪುಸ್ತಕ ಮೇಳ ಇರಲಿದೆ. ವಿದ್ಯಾರ್ಥಿಗಳಿಗೆ ಪ್ರಬಂಧ, ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ನಾಡಿನ ಖ್ಯಾತ ಗಾಯಕರು, ರಂಗಕರ್ಮಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ. ರಾತ್ರಿ ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ಎಲ್ಲ ಗಣ್ಯರಿಗೂ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಶೌಚಾಲಯಕ್ಕೆ ಆದ್ಯತೆ ಕೊಡಲಾಗಿದೆ. ಮಳೆ ಬಂದರೆ ಸೋರದಂತೆ ಜರ್ಮನ್ ಟೆಂಟ್ ಹಾಕಲಾಗಿದೆ. ಎರಡೂ ದಿನಗಳ ನಿರಂತರವಾಗಿ ಆಹಾರ ವಿತರಣೆ ಮಾಡಲಾಗುತ್ತದೆ ಎಂದು ವಿವರಿಸಿದರು.

ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಮಾತನಾಡಿ, ಜಾತಿ ವ್ಯವಸ್ಥೆ, ಅಸಮಾನತೆ ಕೊನೆಗಾಣಬೇಕಾದರೆ ಎಲ್ಲರೂ ಬುದ್ಧ ಮಾರ್ಗದಲ್ಲಿ ಸಾಗಬೇಕು. ಬುದ್ಧರು ತೋರಿದ ಮಾನವೀಯ ಮಾರ್ಗದಲ್ಲಿ ನಡೆಯಬೇಕು. ಮೈಸೂರಿನ ಸಮ್ಮೇಳನವು ರಾಜ್ಯಕ್ಕೆ ಪ್ರೇರೇಪಣೆ ಕೊಡುತ್ತದೆ. ಗೋಷ್ಠಿಯಲ್ಲಿ ಬೌದ್ಧ ಬಿಕ್ಕು ಕಲ್ಯಾಣ ಸಿರಿ ಬಂತೇಜಿ, ಮಾತೇಗೌತಮಿ, ಮುಖಂಡರಾದ ಸಿದ್ದರಾಜು, ಮಹೇಶ್, ಬಿಲ್ಲಯ್ಯ ಬಸವರಾಜು, ಸೋಮಯ್ಯ, ಸಿದ್ದರಾಜು ಮುಂತಾದವರು ಉಪಸ್ಥಿತರಿದ್ದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ರಾಷ್ಟ್ರೀಯ ಯೋಗ ಸ್ಪರ್ಧೆ

ಪಶ್ಚಿಮ ಬಂಗಾಳ ತಂಡಕ್ಕೆ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಪಟ್ಟ



ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ಯೋಗ ಸ್ಪರ್ಧೆಯಲ್ಲಿ ಪಶ್ಚಿಮಬಂಗಾಳ ತಂಡ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಪಟ್ಟ ಪಡೆಯಿತು.

ಮೈಸೂರು,ಅ.12(ಜಿಎ)–ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಡೆದ ರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಪಶ್ಚಿಮ ಬಂಗಾಳ ತಂಡವು ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಪಟ್ಟ ತನ್ನದಾಗಿಸಿಕೊಂಡಿದೆ.

ಯೋಗ ಫೆಡರೇಷನ್ ಆಫ್ ಇಂಡಿಯಾ ಸಂಸ್ಥೆ 50ನೇ ಸುವರ್ಣ ಸಂಭ್ರಮ ಹಾಗೂ ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘ, ಗ್ಲೋಬಲ್ ಯೋಗ ಫೋರಮ್, ಮೈಸೂರು ಜಿಲ್ಲಾ ಯೋಗ ಕ್ರೀಡಾ ಫೌಂಡೇಷನ್ ಹಾಗೂ ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳ ಸಹಯೋಗದಲ್ಲಿ ಗುರುವಾರ ಆರಂಭವಾದ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ಗೆ ವಿವಿಧ ರಾಜ್ಯಗಳಿಂದ ತಂಡಗಳು ಭಾಗವಹಿಸಿತ್ತು. ಇದರಲ್ಲಿ ಪಶ್ಚಿಮ ಬಂಗಾಳ ತಂಡವು ಚಾಂಪಿಯನ್‌ಶಿಪ್ ಆಗಿ ಹೊರ ಹೊಮ್ಮಿದೆ.

3 ದಿನ ನಡೆದ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಮಹಾರಾಷ್ಟ್ರ, ತಮಿಳುನಾಡು, ಒಡಿಸ್ಸಾ, ಅಸ್ಸಾಂ, ಬಿಹಾರ್, ಕೇರಳ, ಆಂಧ್ರಪ್ರದೇಶ, ಕರ್ನಾಟಕ ಸೇರಿದಂತೆ 25 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ 800ಕ್ಕೂ ಹೆಚ್ಚು ಯೋಗ ಪಟುಗಳು ಪಾಲ್ಗೊಂಡಿದ್ದರು. 145 ಆಕರ್ಷಕ ಯೋಗ, ಜೋಡಿ ಯೋಗ, ರಿದಮಿಕ್ ಯೋಗ ಮತ್ತು ಫ್ರೀ ಫ್ಲೋ ಯೋಗ ಸ್ಪರ್ಧೆಗಳು ನಡೆಯಿತು. 175 ರಾಷ್ಟ್ರೀಯ ಯೋಗ ನಿರ್ಣಾಯಕರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದರು.

ಚಾಂಪಿಯನ್‌ಶಿಪ್ ಪಟ್ಟವನ್ನು ಪಶ್ಚಿಮ ಬಂಗಾಳ ಪಡೆದುಕೊಂಡರೆ, ಮೊದಲ ಸಮಗ್ರ ರನ್ನರ್ ಅಪ್ ಅನ್ನು ಕೇರಳ, ಕರ್ನಾಟಕ ಮತ್ತು ಹರಿಯಾಣ ಎರಡನೇ ಸಮಗ್ರ ರನ್ನರ್ ಅಪ್ ಅನ್ನು ಒಟ್ಟಿಗೆ ಹಂಚಿಕೊಂಡವು. ಚಾಂಪಿಯನ್‌ಶಿಪ್, ರನ್ನರ್ ಅಪ್ ಗೆದ್ದ ತಂಡಗಳಿಗೆ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ ಟ್ರೋಫಿ ವಿತರಿಸಿದರು.

ನಂತರ ಆಶೀರ್ವಚನ ನೀಡಿದ ಅವರು, ಯೋಗದ ಮೂಲಕ ಮಾತ್ರ ಸಂಸ್ಕೃತ, ಸಂಸ್ಕೃತಿ ಮತ್ತು ದೇಶವನ್ನು ರಕ್ಷಿಸಬಹುದು. ಆದ್ದರಿಂದ, ಯೋಗವನ್ನು ಉತ್ತೇಜಿಸುವಲ್ಲಿ ನಿಮ್ಮೆಲ್ಲರಿಗೂ ಇನ್ನೂ ಹೆಚ್ಚಿನ ಶಕ್ತಿ ಸಿಗಲಿ ಎಂದರು.

ಯೋಗವು ಪ್ರದರ್ಶನವಲ್ಲ. ಆದರೆ ಕೆಲವೊಮ್ಮೆ ನಮಗೆ ಸ್ಪರ್ಧೆಯ ಅಗತ್ಯವಿರುತ್ತದೆ. ಸ್ಪರ್ಧೆ ಇರಬೇಕು. ಆ ಮೂಲಕವೇ ನಾವು ಎಲ್ಲಿದ್ದೇವೆ ಮತ್ತು ಎಲ್ಲಿಗೆ ತಲುಪಬೇಕು ಎಂದು ನಮಗೆ ತಿಳಿಯುತ್ತದೆ. ಯೋಗ ಭಾಗವಹಿಸುವಿಕೆ ಗೆಲ್ಲುವುದು. ಭಾಗವಹಿಸುವಿಕೆ ಸ್ವಯಂ ಗೆಲ್ಲುವುದು. ಆದ್ದರಿಂದ ನೀವೆಲ್ಲರೂ ಗೆದ್ದಿದ್ದೀರಿ ಎಂದರು.

ಯೋಗವನ್ನು ನಗುವಿನೊಂದಿಗೆ ಸಂಯೋಜಿಸಿದಾಗ ಅದು ಹಾಸ್ಯ ಯೋಗವಾಗುತ್ತದೆ. ನಾಟ್ಯದೊಂದಿಗೆ ಸಂಯೋಜಿಸಿದಾಗ, ಅದು ನಾಟ್ಯ ಯೋಗವಾಗುತ್ತದೆ. ಸಂಗೀತದೊಂದಿಗೆ ಸಂಯೋಜಿಸಿದಾಗ, ಅದು ನಾದ ಯೋಗವಾಗುತ್ತದೆ. ನಾವು ಯೋಗವನ್ನು ಈ ರೀತಿ ಸಂಯೋಜಿಸಿದಾಗ ಜೀವನವೇ ಯೋಗವಾಗುತ್ತದೆ. ನಿಮ್ಮೆಲ್ಲರ ಜೀವನವು ಯೋಗವಾಗಲಿ ಮತ್ತು ಭಗವಾನ್ ದತ್ತ ಪ್ರಭು ಮತ್ತು ಗುರುದೇವ್ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಶೀರ್ವಾದ ಯಾವಾಗಲೂ ನಿಮ್ಮ ಮೇಲೆ ಇರಲಿ ಎಂದು ಆಶೀರ್ವಾದ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಫೆಡರೇಷನ್ ಆಫ್ ಇಂಡಿಯಾದ ಮುಖ್ಯಸ್ಥ ಅಶೋಕ್‌ಕುಮಾರ್ ಅಗರವಾಲ್, ಸಿಇಒ ಇಂದು ಅಗರ್ವಾಲ್, ಅಧ್ಯಕ್ಷ ಡಾ.ಅನಿರುದ್ಧ್ ಗುಪ್ತಾ, ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಧರ್ಮೇಂದ್ರ, ವಿವಿಧ ಯೋಗ ಸಂಸ್ಥೆಗಳ ಪದಾಧಿಕಾರಿಗಳಾದ ಶ್ರೀಹರಿ, ಡಾ.ಗುರುರಾಜ್, ಕೆ.ಪ್ರಭು, ಪ್ರೊ.ಎಂ.ಜಿ.ಅಮರನಾಥ್, ಡಾ.ಪಿ.ಎನ್. ಗಣೇಶ್‌ಕುಮಾರ್, ಎ.ನಟರಾಜು, ಉಪಸ್ಥಿತರಿದ್ದರು.

ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭಾ



ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ 27ನೇ ವರ್ಷದ ಮಹಾಸಭಾ ಕಾರ್ಯಕ್ರಮ ನಡೆಯಿತು.

ಮೈಸೂರು,ಅ.12(ಎಂಕೆ)–ದೇಶ ಕಟ್ಟುವ ನಿಟ್ಟಿನಲ್ಲಿ ವೈಯಕ್ತಿಕ ಕೊಡುಗೆ ಅತ್ಯಗತ್ಯವಾಗಿದೆ ಎಂದು ಮಂಡ್ಯ ಸೆಸ್ಕಾಂ ಅಧೀಕ್ಷಕ ಇಂಜಿನಿಯರ್ ಬಿ.ಸೋಮಶೇಖರ್ ಹೇಳಿದರು.

ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ಹಿರಿಯ ವಿದ್ಯಾರ್ಥಿಗಳ ಸಂಘದ 27ನೇ ವರ್ಷದ ಮಹಾಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ ಪಡೆದ ಸಂಸ್ಥೆಗಳ ಅಭಿವೃದ್ಧಿಗೆ ಹಿರಿಯ ವಿದ್ಯಾರ್ಥಿಗಳು ಕೊಡುಗೆ ನೀಡುವ ಮೂಲಕ ದೇಶ ಕಟ್ಟುವಲ್ಲಿ ತಮ್ಮದೆ ಕೊಡುಗೆ ನೀಡಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉದ್ಯಮಿ ಹೆಚ್.ಆರ್.ಕೇಶವ್, ಸಾಧನೆ ಮಾಡಬೇಕಾದರೆ ಮೊದಲು ಕಲಿಕೆಯತ್ತ ಗಮನಹರಿಸಬೇಕು. ಈ ನಿಟ್ಟಿನಲ್ಲಿ ಕಷ್ಟ ಪಟ್ಟು ಸಾಧಕರಾಗಿರುವ ಹಿರಿಯ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುಗೆ ನೀಡುವ ಮೂಲಕ ಮುಂದಿನ ತಲೆಮಾರಿಗೆ ಗುಣಮಟ್ಟದ ಕಲಿಕೆ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಇದೇ ವೇಳೆ 70 ವರ್ಷ ಮೇಲ್ಪಟ್ಟ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಬಾಲಚಂದ್ರ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ಸರ್ಕಾರಿ ಸಿಪಿಸಿ ಕಾಲೇಜು ಪ್ರಾಂಶುಪಾಲ ಡಾ.ಎಸ್.ವಿ.ದೊಡ್ಡಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎನ್.ಎಸ್.ಬಸವರಾಜು, ಉಪಾಧ್ಯಕ್ಷ ಪಿ.ಮಲೆಮಾದಪ್ಪ, ಖಜಾಂಚಿ ಕೆ.ಜಿ. ಕೀರ್ತಿನಾರಾಯಣಸ್ವಾಮಿ, ಜಂಟಿ ಕಾರ್ಯದರ್ಶಿ ಚಂದ್ರಗುಪ್ತ ವಿ.ಜೈನ್, ಸಂಘಟನಾ ಕಾರ್ಯದರ್ಶಿ ಆರ್.ಪುರಂದರದಾಸ್, ಸಲಹೆಗಾರ ಎಲ್.ಚಂದ್ರಶೇಖರ್, ಸದಸ್ಯರಾದ ಅರಸ್‌ಕುಮಾರ್, ಗಂಗಾಧರ್ ಮತ್ತಿತರರಿದ್ದರು.

ಮತಗಳ್ಳತನ: ಸಹಿ ಸಂಗ್ರಹ ಜಾಗೃತಿ ಅಭಿಯಾನ



ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ ಕಾಂಗ್ರೆಸ್‌ನಿಂದ ಭಾನುವಾರ ಮತಗಳ್ಳತನ ಕುರಿತು ಸಾರ್ವಜನಿಕ ಸಹಿ ಸಂಗ್ರಹ ಜಾಗೃತಿ ಅಭಿಯಾನ ನಡೆಯಿತು.

ಮೈಸೂರು, ಅ.12(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ದೇವರಾಜ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮತಗಳ್ಳತನ ಕುರಿತು ಸಾರ್ವಜನಿಕ ಸಹಿ ಸಂಗ್ರಹ ಜಾಗೃತಿ ಅಭಿಯಾನ ನಡೆಸಲಾಯಿತು.

ನಗರದ ಚಿಕ್ಕಗಡಿಯಾರ ಆವರಣದಲ್ಲಿ ಶಾಸಕ ಕೆ.ಹರೀಶ್‌ಗೌಡ ಸಹಿ ಮಾಡುವ ಮೂಲಕ ಮತಗಳ್ಳತನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಮತಗಳ್ಳತನ ನಡೆಸುತ್ತಿದೆ ಎಂದು ಆರೋಪಿಸಿದರಲ್ಲದೆ ಇದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಬಿಜೆಪಿಯವರು ಯಾವ ರೀತಿ ಮತಗಳ್ಳತನ ನಡೆಸುತ್ತಿದ್ದಾರೆ. ಯಾವ ರೀತಿ ಮತದಾರರನ್ನು ವಂಚಿಸುತ್ತಿದ್ದಾರೆ ಎಂಬುದನ್ನು ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ತೆರಳಿ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಬಿಎಲ್‌ಎ–2ಗಳನ್ನು ನಿಯೋಜಿಸುವ ಅಗತ್ಯವಿದ್ದು, ನಗರಪಾಲಿಕೆ ಚುನಾವಣೆಗೂ ಮುನ್ನವೇ ಎಲ್ಲಾ ವಾರ್ಡ್‌ಗಳಲ್ಲಿಯೂ ಮತಗಳ್ಳತನದ ಜಾಗೃತಿ ಕಾರ್ಯ ನಡೆಸಬೇಕು ಎಂದು ಹೇಳಿದರು.

ನಗರಪಾಲಿಕೆ ವತಿಯಿಂದ ಈಗಾಗಲೇ ಬೂತ್ ಮಟ್ಟದಲ್ಲಿ ಮತದಾರರ ಪರಿಶೀಲನೆ ಆರಂಭವಾಗಿದೆ. ಆದ್ದರಿಂದ ಪಕ್ಷದ ವತಿಯಿಂದಲೂ ಒಂದೊಂದು ಬೂತ್‌ಗಳಿಗೂ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ನೇಮಕ ಮಾಡಿ, ಮತದಾರರ ಪರಿಶೀಲನೆ ಮಾಡುವ ಮೂಲಕ ಮತಗಳ್ಳತನ ನಡೆಯದಂತೆ ಎಚ್ಚರಿಕೆ ವಹಿಸಬೇಕಿದೆ. ಇದರಿಂದ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಅಭಿಯಾನದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪಮೇಯರ್ ಪುಷ್ಪಾವಲ್ಲಿ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಡಿ.ನಾಗರಾಜು, ನಾಗಭೂಷಣ್, ಗೋಪಿ, ಬಾಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯು.ಎಸ್ ರಮೇಶ್ ರಾಯಪ್ಪ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ಎಸ್.ಆರ್.ರವಿಕುಮಾರ್, ತನುಜಾ ಮಹೇಶ್, ನಂದಕುಮಾರ್, ರಾಣಿ, ನಂಜುಂಡಿ, ಕುಮಾರ್, ರಮೇಶ್, ಯೂತ್ ಕಾಂಗ್ರೆಸ್‌ನ ನಿಶಾಂತ್ ಪಟೇಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೇಮಗಂಗಾರ ಗಜಲ್‌ಗಳು ಪಠ್ಯಪುಸ್ತಕಕ್ಕೆ ಸೇರ್ಪಡೆ



ಎ.ಹೇಮಗಂಗಾ

ಮೈಸೂರು: ಮೈಸೂರಿನ ಸಂಘಟಕಿ ಹಾಗೂ ಗಜಲ್ ರಚನೆಕಾರರಾದ ಎ.ಹೇಮಗಂಗಾ ಅವರ ಎರಡು ಗಜಲ್‌ಗಳು ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಬಿ.ಎ. ದ್ವಿತೀಯ ವರ್ಷಕ್ಕೆ ಮತ್ತು ಸೊಲ್ಲಾಪುರದ ಪುಣ್ಯ ಶ್ಲೋಕ ಅಹಿಲ್ಯಾಬಾಯಿ ಹೋಳ್ಕರ್ ವಿವಿಯ ಗಜಲ್ ವಿಷಯದಲ್ಲಿ ಬಿ.ಕಾಂ., ಬಿಬಿಎಂನ 3ನೇ ಸೆಮಿಸ್ಟರ್ ಪದವಿ ವಿದ್ಯಾರ್ಥಿಗಳಿಗೆ 2025–26ನೇ ಸಾಲಿನಿಂದ ಪಠ್ಯವಾಗಿ ಆಯ್ಕೆಯಾಗಿವೆ ಎಂದು 'ಗಜಲ್‌ಧಾರೆ' ಪಠ್ಯಪುಸ್ತಕದ ಪ್ರಧಾನ ಸಂಪಾದಕರಾದ ಡಾ.ಸಿದ್ಧರಾಮ ಹೊನ್ಕಲ್ ಮತ್ತು ಶಿವಾಜಿ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸ ಮಂಡಳಿದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೇತನಸಹಿತ ಋತುಚಕ್ರ ರಜೆ ಸ್ವಾಗತಾರ್ಹ

ಮೈಸೂರು,ಅ.12–ಮಹಿಳಾ ಉದ್ಯೋಗಿಗಳಿಗೆ ತಿಂಗಳಿಗೊಮ್ಮೆ ವೇತನಸಹಿತ ಒಂದು ದಿನದ ಋತುಚಕ್ರ ರಜೆ ನೀಡುವ ರಾಜ್ಯ ಸರಕಾರದ ನಿರ್ಧಾರವನ್ನು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್ ಸ್ವಾಗತಿಸಿದ್ದಾರೆ.

ರಾಜ್ಯ ಸರಕಾರಿ ಇಲಾಖೆ, ಖಾಸಗಿ ಕಚೇರಿ, ಗಾರ್ಮೆಂಟ್ಸ್ ಸೇರಿದಂತೆ ಸರಕಾರಿ, ಅನುದಾನಿತ ಮತ್ತು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ತಿಂಗಳಿಗೊಮ್ಮೆ ಋತುಚಕ್ರ ರಜೆ ನೀಡಲು ಸಂಪುಟದಲ್ಲಿ ನಿರ್ಧರಿಸಿರುವುದು ಮಹಿಳಾ ಸಬಲೀಕರಣ ಮತ್ತು ಮಾನವೀಯ ನೆಲೆಯಲ್ಲಿ ಸ್ವಾಗತಾರ್ಹ. ಇದರಿಂದ ಮಹಿಳೆಯರಲ್ಲಿ ಆತ್ಮಸ್ಥೈರ್ಯ ಇನ್ನಷ್ಟು ಹೆಚ್ಚಲಿದೆ. ಸರಕಾರವಾಗಲೀ, ಸಮಾಜವಾಗಲಿ ಮಹಿಳೆಯರ ಆರೋಗ್ಯ, ಸಮಾನತೆ ಮತ್ತು ಸಬಲೀಕರಣದ ಬಗ್ಗೆ ತೋರುವ ಕಾಳಜಿ, ಜವಾಬ್ದಾರಿಯ ಪ್ರತೀಕವಾಗಿದ್ದು, ಇದನ್ನು ಇಡೀ ಮಹಿಳಾ ಸಮುದಾಯವು ಗೌರವಯುತ ಭಾವನೆಯಿಂದ ಸ್ವಾಗತಿಸಲಿದೆ. ಸರಕಾರದ ಈ ನಿರ್ಧಾರವು ಕೇವಲ ಆದೇಶಕ್ಕೆ ಸೀಮಿತವಾಗದೆ, ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ಜಾರಿ ಆಗಬೇಕು ಎಂದರು

ಬಿಎಸ್‌ಎಫ್ ವಾಯುಘಟಕಕ್ಕೆ ಮಹಿಳಾ ಎಂಜಿನಿಯರ್ ನೇಮಕ

ನವದೆಹಲಿ, ಅ.12– ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ವಾಯು ಘಟಕವು ತನ್ನ 50 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ವಿಮಾನ ಎಂಜಿನಿಯರ್ ಅನ್ನು ನೇಮಕ ಮಾಡಿಕೊಂಡಿದೆ. ಇನ್ಸ್‌ಪೆಕ್ಟರ್ ಭಾವನಾ ಚೌಧರಿ ಹಾಗೂ ನಾಲ್ವರು ಪುರುಷ ಅಧೀನ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಬಿಎಸ್‌ಎಫ್ ಮಹಾನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ಅವರು ನೂತನ ಅಧಿಕಾರಿಗಳಿಗೆ ಫ್ಲೈಯಿಂಗ್ ಬ್ಯಾಡ್ಜ್‌ಗಳನ್ನು ಪ್ರದಾನ ಮಾಡಿದರು. ಐವರು ಅಧೀನ ಅಧಿಕಾರಿಗಳು ಇತ್ತೀಚೆಗೆ ಎರಡು ತಿಂಗಳ ತರಬೇತಿಯನ್ನು ಪೂರ್ಣಗೊಳಿಸಿದರು. ಪಂಜಾಬ್ ಮತ್ತು ಇತರ ರಾಜ್ಯಗಳಲ್ಲಿ ಇತ್ತೀಚೆಗೆ ಉಂಟಾದ ಪ್ರವಾಹದ ಸಂದರ್ಭದಲ್ಲಿ ಇವರು ಕಾರ್ಯಾಚರಣೆ ನಡೆಸಿದ್ದರಿಂದ ತರಬೇತಿಯು ಇನ್ನಷ್ಟು ಉತ್ತಮವಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ಬಿಎಸ್‌ಎಫ್ ವಾಯು ಘಟಕವು ತನ್ನ ಎಮ್‌ಐ–17 ಹೆಲಿಕಾಪ್ಟರ್ ಫ್ಲೀಟ್‌ನಲ್ಲಿ ಎಂಜಿನಿಯರ್‌ಗಳ ಕೊರತೆಯನ್ನು ಎದುರಿಸುತ್ತಿದೆ ಎನ್ನಲಾಗಿದೆ. ಗೃಹ ಸಚಿವಾಲಯದ ವಾಯುಯಾನ ಘಟಕವನ್ನು ನಿರ್ವಹಿಸುವ ಕಾರ್ಯವನ್ನು ಬಿಎಸ್‌ಎಫ್‌ಗೆ 1969ರಲ್ಲಿ ವಹಿಸಲಾಯಿತು.

ನಿಧನ



ಕೆ.ಪಿ.ಪ್ರಭಾ

ಮೈಸೂರು, ಅ.12–ಮೈಸೂರಿನ ಕುವೆಂಪುನಗರ ನಿವಾಸಿ, ನಿವೃತ್ತ ಕೆಎಎಸ್ ಅಧಿಕಾರಿ, ಚೆಸ್ಕಾಂ ಎಂಡಿಯಾಗಿದ್ದ ಡಾ.ಪಿ.ಬೋರೇಗೌಡರ ಪತ್ನಿ ಕೆ.ಪಿ.ಪ್ರಭಾ ಅವರು ಅ.12ರಂದು ನಿಧನರಾದರು. ಮೃತರು ಪತಿ ಡಾ.ಪಿ.ಬೋರೇಗೌಡ, ಮಕ್ಕಳಾದ ಕೆ.ಬಿ.ಪ್ರಬೋಧ್, ಕೆ.ಬಿ.ಪ್ರದ್ಯುಮ್ನ, ಸೊಸೆಯಂದಿರಾದ ಶ್ವೇತ, ಜಯಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಅ.13) ಬೆಳಗ್ಗೆ 11 ಗಂಟೆಗೆ ಮೈಸೂರಿನ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.10.2025 ಸೋಮವಾರ, ಮಳೆ ನಕ್ಷತ್ರ: ಚಿತ್ತ 11.10.2025ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೂಲವ್ಯಾದಿ/ಪೈಲ್ಸ್, ಮಧುಮೇಹ ತೊಂದರೆ, ಲಕ್ವ/ಪ್ಯಾರಾಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಸಮಾಜ ಕಾರ್ಯ ಅಧ್ಯಯನ ವಿಭಾಗ ಮತ್ತು ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು:** ಬೆಳಗ್ಗೆ 11ರಿಂದ ಮಹಾತ್ಮ ಗಾಂಧಿ ಅವರ 156ನೇ ಜಯಂತಿ ಅಂಗವಾಗಿ ವಿಶೇಷ ಉಪನ್ಯಾಸ, ವಿಷಯ: 'ರಾಷ್ಟ್ರ ನಿರ್ಮಾಣದಲ್ಲಿ ಅಸ್ಪೃಶ್ಯತಾ ನಿವಾರಣೆಯ ಹೊಣೆಗಾರಿಕೆ: ಗಾಂಧೀಜಿ ಚಿಂತನೆ, ಪ್ರಯೋಗ ಮತ್ತು ಪ್ರಸ್ತುತತೆ', ಉದ್ಘಾಟನೆ ಮತ್ತು ಉಪನ್ಯಾಸ: ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಜಿ.ಬಿ. ಶಿವರಾಜು, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಉಪಸ್ಥಿತಿ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಬೆಳಗ್ಗೆ 10.30ರಿಂದ ಮೈಸೂರು ವಿವಿ ಲಲಿತಕಲೆಗಳ ಕಾಲೇಜು ವಿದ್ಯಾರ್ಥಿಗಳಿಂದ ಗಾಂಧಿ ಭಜನ್ಸ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸ ಗಂಗೋತ್ರಿ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಲೇಖಕಿಯರ ಸಂಘ, ವಿಜಯನಗರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಲೇಡಿಸ್ ಅಸೋಸಿಯೇಷನ್:** ಸರಸ್ವತಿ ಸಮ್ಮಾನ್ ಹಾಗೂ ಪದ್ಮಶ್ರೀ ಪುರಸ್ಕೃತರಾದ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರಿಗೆ ನುಡಿನಮನ ಶ್ರದ್ಧಾಂಜಲಿ, ನುಡಿನಮನ ಸಲ್ಲಿಸುವವರು: ಮಡ್ಡೀಕೆರೆ ಗೋಪಾಲ್, ಡಾ. ಸಿ.ಪಿ. ಕೃಷ್ಣಕುಮಾರ್, ಡಾ. ಲತಾ ರಾಜಶೇಖರ್, ಡಾ. ಪ್ರಧಾನ ಗುರುದತ್, ಡಾ. ಪದ್ಮಾ ಶೇಖರ್, ಡಾ. ವಿಜಯಾ ಹರನ್, ಡಾ. ಕೆ. ರಘುರಾಂ ವಾಜಪೇಯಿ, ಉದಯಕುಮಾರ್, ಸಂಸ್ಕೃತಿ ಸುಬ್ರಹ್ಮಣ್ಯ, ಮಲ್ಲಿಗೆ ವೀರೇಶ್, ಸುಮತಿ ಸುಬ್ರಹ್ಮಣ್ಯ, ಡಾ. ವೈ.ಡಿ. ರಾಜಣ್ಣ, ಎಂ. ಚಂದ್ರಶೇಖರ್, ಡಾ. ಜಯಪ್ಪ ಹೊನ್ನಾಳಿ, ಮೂಗೂರು ನಂಜುಂಡಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ, ಸಂಜೆ 4 ಗಂಟೆಗೆ.

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್:** ಡಾ. ಡಿವಿಜಿ ಅವರ ಮಂಕುತಿಮ್ಮನ ಕಗ್ಗ ಮುಕ್ತಕ ಕೃತಿ ಆಧಾರಿತ ಎರಡು ವಿಶೇಷ ಉಪನ್ಯಾಸಗಳು, ಡಾ. ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಜಿ.ಎಸ್. ನಟೇಶ್ ಅವರಿಂದ, ಸ್ಥಳ: ಸಂಗೀತ ಕಲಾನಿಧಿ ಶ್ರೀ ಕೆ.ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ ಕಟ್ಟಡ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು ಪ್ರಸ್ತುತಿ: ಡಾ.ಟಿ.ಶಿವಕುಮಾರ್ 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸದಾಶಿವ ಪಾಟೀಲ್, ಡಾ.ಪಿ.ಎಸ್.ಮುರಳೀಧರ್ ವ್ಯಾಖ್ಯಾನ –ಡಾ.ಬೋರೇಗೌಡ ಚಿಕ್ಕಮರಳಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 7.45 ಹಾಸನಾಂಬೆ ದಿನ ವಿಶೇಷ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ ಹಾಸನ, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ.ಪ್ರಭು ಅವರು ನಡೆಸಿದ್ದ ಸಂವಾದದ ಮೂರನೇ ಭಾಗ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಸವಿತ ನರಸಿಂಹನ್–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05–ವನಿತಾ ವಿಹಾರ, 12.35–ದೇವರನಾಮ–ಬಿ.ಆರ್.ಗೀತಾ, 12.45–ನಮ್ಮ ಆರೋಗ್ಯ–ವರ್ಲ್ಡ್ ಮೆನೊಪಾಸ್ ಡೇ ಸಂದರ್ಭದಲ್ಲಿ ಮೆನೊಪಾಸ್ ಅಥವಾ ಋತುಬಂಧ ಕುರಿತು ತಿಳಿಸಿಕೊಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸೀನಿಯರ್ ಕನ್ಸಲ್ಟಂಟ್ ಗೈನಕಾಲಜಿಸ್ಟ್ ಡಾ.ಸವಿತಾ ರಾಥೋಡ್ ನಾಯಕ್. ಇವರೊಂದಿಗೆ ಭಾಗವಹಿಸುತ್ತಾರೆ: ಡಾ.ಕುಲದೀಪ್.ಎನ್ 1.00–ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಜಯಂತಿ.ವಿ.ಭಟ್, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಿ.ಬಾಲಕೃಷ್ಣ–ವೀಣಾವಾದನ, 4.00 ಮಹಿಳಾರಂಗ–ಡಾಕ್ಟರ್ ಸಮಯ–ಮಹಿಳಾ ಆರೋಗ್ಯ ಕಾರ್ಯಕ್ರಮ, ವಿಷಯ–ಮಹಿಳೆಯರಲ್ಲಿ ಚರ್ಮದ ಸಮಸ್ಯೆ, ಪ್ರಸ್ತುತಿ–ದಿಗ್ವಿಜಯ್.ಬಿ, 4.30–ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮುಸುಕಿನ ಜೋಳ ಹಾಗೂ ಸಿಹಿ ಜೋಳದ ಬೇಸಾಯ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಅಖಿಲ ಭಾರತ ಜೋಳದ ಸುಸಂಘಟಿತ ಸಂಶೋಧನಾ ಯೋಜನೆಯ ವಿಜ್ಞಾನಿ ಡಾ.ಜಿ.ಸೋಮು ಮತ್ತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00–ಮೈಸೂರಿನಲ್ಲಿ ನಡೆಯುತ್ತಿರುವ ಮೈಸೂರು ಸಂಗೀತ ಸುಗಂಧ ಹಬ್ಬದ ಸಮಾರೋಪ ಸಮಾರಂಭದ ಬಾನುಲಿ ವರದಿ., 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎ.ವಿ. ಪ್ರಕಾಶ್–ವೇಣುವಾದನ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30 ಸವಿನೆನಪು

ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರದ ಕ್ರೀಡೆಗಳ

ಮಾನ್ಯತಾ ಪಟ್ಟಿಗೆ ಕರಾಟೆ ಸೇರ್ಪಡಿಸುವುದು ಶತಸಿದ್ಧ

ಪ್ರಾಧಿಕಾರದ ನೂತನ ಉಪಾಧ್ಯಕ್ಷ ಅರುಣ್ ಮಾಚಯ್ಯ ಘೋಷಣೆ



ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರಕ್ಕೆ ನೂತನವಾಗಿ ಉಪಾಧ್ಯಕ್ಷರಾಗಿ ನೇಮಕವಾಗಿರುವ ಅರುಣ್ ಮಾಚಯ್ಯ ಅವರನ್ನು ಶಾಸಕ ಜಿ.ಟಿ.ದೇವೇಗೌಡರು ಅಭಿನಂದಿಸಿದರು.

ಮೈಸೂರು,ಅ.12(ಪಿಎಂ)– ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರದ ಕ್ರೀಡೆಗಳ ಮಾನ್ಯತಾ ಪಟ್ಟಿಗೆ ಕರಾಟೆ ಸೇರ್ಪಡಿಸುವುದು ಶತಸಿದ್ಧ ಎಂದು ಪ್ರಾಧಿಕಾರದ ನೂತನ ಉಪಾಧ್ಯಕ್ಷ ಅರುಣ್ ಮಾಚಯ್ಯ ಘೋಷಿಸಿದರು.

ಮೈಸೂರು ವಿವಿಯ ಸ್ಪೋರ್ಟ್ಸ್ ಪೆವಿಲಿಯನ್ ಆವರಣದ ಯೋಗ ಮಂದಿರದಲ್ಲಿ ಮೈಸೂರು ಕರಾಟೆ ಅಸೋಸಿಯೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ (ಪ್ರಾಧಿಕಾರಕ್ಕೆ ನೂತನವಾಗಿ ಉಪಾಧ್ಯಕ್ಷರಾಗಿ ನೇಮಕವಾಗಿರುವ ಪ್ರಯುಕ್ತ ನಡೆದ ಸಮಾರಂಭ) ಮಾತನಾಡಿದ ಅವರು, ಪ್ರಾಧಿಕಾರದ ಮಾನ್ಯತೆಗೆ ಕರಾಟೆ ಎಲ್ಲಾ ರೀತಿಯಲ್ಲಿ ಅರ್ಹವಾಗಿದೆ ಎಂದರು.

ಪ್ರಾಧಿಕಾರದಲ್ಲಿ ಈಗ ಕರಾಟೆಗೆ ಮಾನ್ಯತೆ ಇಲ್ಲವಾಗಿದೆ. ಪ್ರಾಧಿಕಾರಕ್ಕೆ ಕರಾಟೆ ಸೇರಿಸಬಾರದೆಂಬ ದೊಡ್ಡ ಹುನ್ನಾರವೇ ನಡೆಯುತ್ತಿದೆ. ಇದೆಲ್ಲವೂ ಹಿರಿಯ ಕರಾಟೆ ಪಟುಗಳಿಗೆ ಗೊತ್ತಿರುವುದೇ ಆಗಿದೆ. ಅದೇ ರೀತಿಯಲ್ಲಿ ಖೇಲೋ ಇಂಡಿಯಾ ಕ್ರೀಡಾ ಪಟ್ಟಿಯಲ್ಲಿ ಸಹ ಕರಾಟೆ ಎಂಬ ಕ್ರೀಡೆ ಇರಬಾರದೆಂಬ ಸಂಚು ನಡೆಯಿತು. ಯಾವುದೇ ಅಧಿಕಾರ ಇಲ್ಲವಾದರೂ ನಮ್ಮದೇ ಶೈಲಿಯಲ್ಲಿ ಹೋರಾಟ ಮಾಡಿ ಆ ಹುನ್ನಾರ ಹಿಮ್ಮೆಟ್ಟಿಸಿದೆವು. ಆ ಮೂಲಕ ಖೇಲೋ ಇಂಡಿಯಾದಲ್ಲಿ ಕರಾಟೆ ಸೇರ್ಪಡೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ತಿಳಿಸಿದರು.

ಪ್ರಾಧಿಕಾರದಲ್ಲಿ ಕರಾಟೆಗೆ ಮಾನ್ಯತೆ ಕೊಡಿಸುವ ಸಂಬಂಧ ಸರ್ಕಾರದ ಕಾರ್ಯದರ್ಶಿ ಅವರೊಂದಿಗೆ ಮಾತನಾಡಿದ್ದೇನೆ. ಕರಾಟೆ ಸಂಬಂಧ ಆಗಿರುವ ಸಾಧನೆಗಳನ್ನು ವಿವರಿಸಿದ್ದೇನೆ. ಚಿನ್ನದ ಪದಕ ಗಳಿಸಿದ ಪಟುಗಳ ಬಗ್ಗೆ ಸಹ ವಿವರ ನೀಡಿದ್ದೇನೆ. ಮಾನ್ಯತೆ ಸಂಬಂಧ ಸದ್ಯದಲ್ಲಿ ಕಡತಗಳು ಒಳಗೊಂಡಂತೆ ಎಲ್ಲಾ ವಿವರ ಸಲ್ಲಿಸಲಾಗುವುದು. ಆ ಮೂಲಕ ಕರಾಟೆಯನ್ನು ಪ್ರಾಧಿಕಾರದ ಮಾನ್ಯತಾ ಪಟ್ಟಿಗೆ ಸೇರ್ಪಡೆ ಮಾಡಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ರಾಜ್ಯದ 31 ಜಿಲ್ಲೆಗಳಲ್ಲಿಯೂ ತನ್ನದೇ ಆದ ಅಸೋಸಿಯೇಷನ್ ಹೊಂದಿದ್ದರೆ ಅದು ಕರಾಟೆ ಮಾತ್ರ, ಬೇರೆ ಯಾವುದೇ ಕ್ರೀಡೆ ಹೀಗೆ ಎಲ್ಲಾ 31 ಜಿಲ್ಲೆಗಳಲ್ಲಿ ಅಸೋಸಿಯೇಷನ್ ಹೊಂದಿಲ್ಲ. ಹೊಸ ಜಿಲ್ಲೆಯಾದ ವಿಜಯನಗರದಲ್ಲಿ ಕೂಡ ಕರಾಟೆ ಅಸೋಸಿಯೇಷನ್ ಸ್ಥಾಪಿಸಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕರಾಟೆ ಪಟುಗಳು ಇದ್ದಾರೆ. ಕರಾಟೆ ಪಟುಗಳಲ್ಲಿ ಮಾತ್ರವೇ ಪರಿಣಾಮಕಾರಿ ಸಂಘಟನೆ ಇದ್ದು, ಬೇರೆ ಕ್ರೀಡೆಗಳಲ್ಲಿ ಅಂತಹ ಸಂಘಟನೆಯೇ ಇಲ್ಲವಾಗಿದೆ. ಹಾಕಿಗೆ ಸಂಬಂಧಿಸಿದಂತೆ ನಮ್ಮ ಕೊಡಗಿನಲ್ಲೇ ಮೂರು ಅಸೋಸಿಯೇನಷ್ ಗಳಿವೆ. ಈ ಮೂರು ಅಸೋಸಿಯೇಷನ್ ಗಳಲ್ಲಿ ಸಹ ಒಲಂಪಿಕ್‌ಗೆ ಸ್ಪರ್ಧೆ ಮಾಡಿದ ಕ್ರೀಡಾಪಟುಗಳು ಇದ್ದಾರೆ. ನೀವೆಲ್ಲರೂ ಒಂದೇ ಅಸೋಸಿಯೇಷನ್ ಅಡಿಯಲ್ಲೇ ಇರಬೇಕು. ಇಲ್ಲವಾದರೆ ಭವಿಷ್ಯವಿಲ್ಲವೆಂದು ಅವರಿಗೆ ಮನವರಿಕೆ ಮಾಡಿದ್ದೇನೆ ಎಂದರು.

ಮೊನ್ನೆ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಸಭೆ ಯಶಸ್ವಿಯಾಗಿ ನಡೆಯಿತು. ಸ್ಪೋರ್ಟ್ಸ್ ಹಾಸ್ಟೆಲ್‌ಗಳಲ್ಲಿ ತರಬೇತಿ ನೀಡುವುದು ಸೇರಿದಂತೆ ಬಹಳಷ್ಟು ಕೆಲಸಗಳು ಇದ್ದು, ಈ ಎಲ್ಲವನ್ನೂ ಮಾಡಲು ನಿಮ್ಮೆಲ್ಲರ ಸಹಕಾರದ ನಿರೀಕ್ಷೆಯಲ್ಲಿದ್ದೇನೆ. ಕಂಠೀರವ ಸ್ಟೇಡಿಯಂನಲ್ಲಿ ಪ್ರಾಧಿಕಾರಕ್ಕೆ ಪ್ರತ್ಯೇಕ ಕಟ್ಟಡದ ವ್ಯವಸ್ಥೆ ಮಾಡಲಾಗಿದೆ. ಸುಸಜ್ಜಿತವಾಗಿ ಮೂರು ಕೊಠಡಿ ನಿಗದಿ ಮಾಡಿದ್ದು, ಕರಾಟೆಗೂ ಸಹ ಇದೇ ಸ್ಟೇಡಿಯಂನಲ್ಲಿ ಒಂದು ಸುಸಜ್ಜಿತವಾದ ಕಚೇರಿಯನ್ನು ಸಹ ನಾನು ಖಂಡಿತವಾಗಿ ಒದಗಿಸಿಕೊಡುತ್ತೇನೆ. ಮೈಸೂರು ಕರಾಟೆ ಅಸೋಸಿಯೇಷನ್‌ನಿಂದ ಆಹ್ವಾನಿಸಿ ಆತ್ಮೀಯವಾಗಿ ಸನ್ಮಾನಿಸಿದ್ದೀರಿ. ನಿಮ್ಮೆಲ್ಲರ ಸಹಕಾರದ ಫಲವಾಗಿ ಇಂತಹ ಸ್ಥಾನ ಅಲಂಕರಿಸಿದ್ದೇನೆ ಎಂದು ಕೃತಜ್ಞತಾ ಭಾವ ವ್ಯಕ್ತಪಡಿಸಿದರು.

ಕರಾಟೆ ಸೇರಿದಂತೆ ಎಲ್ಲಾ ಕ್ರೀಡೆಗಳಲ್ಲಿ ಅರುಣ್ ಮಾಚಯ್ಯ ಪರಿಣತಿ ಪಡೆದು ಅತ್ಯಂತ ಎತ್ತರಕ್ಕೆ ಬೆಳೆದಿದ್ದಾರೆ. ಅರುಣ್ ಮಾಚಯ್ಯ ಅವರ ಮೇಲೆ ನನಗೆ ಅತ್ಯಂತ ಪ್ರೀತಿ, ಅಭಿಮಾನ ಇದೆ. ಹಾಗಾಗಿ ಅವರಿಗೆ ಅಭಿನಂದಿಸಿಯೇ ಹೋಗಬೇಕೆಂದು ಅನೇಕ ಕಾರ್ಯದೊತ್ತಡದ ನಡುವೆಯೂ ಸಮಾರಂಭಕ್ಕೆ ಆಗಮಿಸಿದ್ದೇನೆ. ನಿಮ್ಮೆಲ್ಲರ ಬೆಂಬಲ ಅವರಿಗೆ ಸದಾ ಕಾಲ ಇರಲಿ. ಪ್ರಾಧಿಕಾರದ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಅವರಿಗೆ ಕರಾಟೆಪಟುಗಳು ಸೇರಿದಂತೆ ಎಲ್ಲಾ ಕ್ರೀಡಾಪಟುಗಳಿಗೆ ಹೆಚ್ಚು ಅನುಕೂಲ ಮಾಡಿಕೊಡುವ ಕಳಕಳಿ ಇದೆ.

-ಜಿ.ಟಿ.ದೇವೇಗೌಡರು, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಶಾಸಕ ಜಿ.ಟಿ.ದೇವೇಗೌಡರು ಸಮಾರಂಭ ಉದ್ಘಾಟಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಅಸೋಸಿಯೇಷನ್ ಅಧ್ಯಕ್ಷ ಎಸ್.ಸುನಿಲ್ ಕುಮಾರ್, ಕಾರ್ಯದರ್ಶಿ ಭಾರತಿ ಆನಂದ್, ಉಪಾಧ್ಯಕ್ಷ ಶಂಕರ್, ಜಂಟಿ ಕಾರ್ಯದರ್ಶಿ ಚಿದಾನಂದ್, ನಿರ್ದೇಶಕರಾದ ಸೋಸಲೆ ಸಿದ್ದರಾಜು, ಮಹದೇವಸ್ವಾಮಿ, ನಾಗರಾಜ್ ಮತ್ತಿತರರು ಹಾಜರಿದ್ದರು.

ಮುಂದುವರೆದ ಪೊಲೀಸರ ವಿಶೇಷ ಕಾರ್ಯಾಚರಣೆ

- ರೌಡಿ ಶೀಟರ್ ಜೈಲಿಗೆ
- 282 ಮಂದಿ ವಿಚಾರಣೆ
- ಸಂಚಾರ ಉಲ್ಲಂಘನೆಯ 64 ಪ್ರಕರಣ ದಾಖಲು



ಮೈಸೂರಿನಲ್ಲಿ ಭಾನುವಾರ ರಾತ್ರಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು.

ಮೈಸೂರು, ಅ.12– ಮೈಸೂರು ಪೊಲೀಸರು ವ್ಯಾಪಕ ಕಾರ್ಯಾಚರಣೆ ಮೂಲಕ ರೌಡಿಗಳ ಹೆಡೆಮುರಿಕಟ್ಟುವುದರ ಜೊತೆಗೆ ಕಾನೂನು ಬಾಹಿರ ಚಟುವಟಿಕೆಗಳ ತಡೆಯುವಲ್ಲಿ ಸಕ್ರಿಯರಾಗಿದ್ದಾರೆ.

ನಗರದ ವಸ್ತು ಪ್ರದರ್ಶನದ ಬಳಿ ವ್ಯಕ್ತಿಯ ಹತ್ಯೆ ಹಾಗೂ ಬಾಲಕಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿದ ಘಟನೆ ನಡೆದ ಹಿನ್ನೆಲೆಯಲ್ಲಿ ರೌಡಿ ಪ್ರತಿಬಂಧಕ ದಳ ವಿಶೇಷ ಕಾರ್ಯಾಚರಣೆ ಆರಂಭಿಸಿದೆ. ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನಿರ್ದೇಶನ, ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರ್‌ರಾಜ್ ನೇತೃತ್ವದಲ್ಲಿ ಪೊಲೀಸರು ವ್ಯಾಪಕ ತಪಾಸಣೆ ನಡೆಸುತ್ತಿದ್ದಾರೆ.

ಭಾನುವಾರ ರಾತ್ರಿ 8ರಿಂದ 11 ಗಂಟೆವರೆಗೆ ಇಟ್ಟಿಗೆಗೂಡು, ಮಾತೃಮಂಡಲಿ ವೃತ್ತ, ಗೌಸಿಯಾನಗರ, ಸುಣ್ಣದಕೇರಿ, ಕೆ.ಎಂ.ಹಳ್ಳಿ, ಪಡುವಾರಹಳ್ಳಿ ಮತ್ತಿತರ ಪ್ರದೇಶಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಸುಮಾರು 282 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ 455 ಮಂದಿ ವಿರುದ್ಧ ಪೆಟ್ಟಿ ಕೇಸ್ ದಾಖಲಿಸಿ, ಎಚ್ಚರಿಕೆ ನೀಡಿದ್ದಾರೆ. 126 ಮತ್ತು 129 ಬಿಎನ್‌ಎಸ್‌ಎಸ್ ಅಡಿಯಲ್ಲಿ 4 ಹಾಗೂ 269 ಕೋಪ್ಟಾ ಪ್ರಕರಣ ದಾಖಲಿಸಿದ್ದಾರೆ.

ಲಷ್ಕರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಸಲಾದ ರೌಡಿ ಪೆರೇಡ್‌ನಲ್ಲಿ ಪ್ರಭು ಅಲಿಯಾಸ್ ದೈವ ಎಂಬಾತನನ್ನು ಬಂಧಿಸಿ, ಜೈಲಿಗಟ್ಟಿದ್ದಾರೆ. ಇದರೊಂದಿಗೆ ಹೆಲ್ಮೆಟ್ ರಹಿತ ಚಾಲನೆ, ದೋಷಯುಕ್ತ ನಂಬರ್ ಪ್ಲೇಟ್, ವ್ಹೀಲಿಂಗ್ ಇನ್ನಿತರ ಸಂಚಾರ ನಿಯಮ ಉಲ್ಲಂಘನೆಯಡಿ 64 ಪ್ರಕರಣ ದಾಖಲಿಸಲಾಗಿದೆ.

ವಸ್ತು ಪ್ರದರ್ಶನದ ಬಳಿ ಅ.7ರಂದು ಕಾರಿನಲ್ಲಿ ತೆರಳುತ್ತಿದ್ದ ಕ್ಯಾತಮಾರನಹಳ್ಳಿ ವೆಂಕಟೇಶ್ ಮೇಲೆ ಗುಂಪೊಂದು ದಾಳಿ ಮಾಡಿ ಬರ್ಬರವಾಗಿ ಹತ್ಯೆ ಮಾಡಿದ ಹಿನ್ನೆಲೆಯಲ್ಲಿ ಪೊಲೀಸರು ಕೆಲ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಿದ್ದರು. ಆದರೆ ಮರುದಿನ ರಾತ್ರಿ ಕಾಮುಕನೊಬ್ಬ ಗುಲ್ಬರ್ಗಾದಿಂದ ಬಲೂನ್ ಮಾರಾಟ ಮಾಡಲೆಂದು ಬಂದಿದ್ದ ಕುಟುಂಬವೊಂದರ ಬಾಲಕಿಯನ್ನು ಹೊತ್ತೊಯ್ದು ಅತ್ಯಾಚಾರವೆಸಗಿ ಮನಸೋಇಚ್ಛೆ ಚುಚ್ಚಿ ಹತ್ಯೆ ಮಾಡಿದ್ದ. ನಂತರದಲ್ಲಿ ಪೊಲೀಸರು ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಂಡಿದ್ದರು. ನಿನ್ನೆಯಷ್ಟೇ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಿಗಳ ಸಭೆ ನಡೆಸಿ, ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಿದ್ದರು.

ಸಾಮಾಜಿಕ ಮೌಲ್ಯಗಳು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿ



ಮೈಸೂರಿನ ಸರಸ್ವತಿಪುರಂನಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಗಾಂಧೀಜಿ ಜಯಂತಿ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿಜಿ ಭಾವಚಿತ್ರಕ್ಕೆ ಉದ್ಯಮಿ ಕೆ. ಮಧುಸೂದನ್ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಅ.12(ಎಂಟಿವೈ)– ಧ್ಯಾನ, ಯೋಗ, ಅಧ್ಯಾತ್ಮಿಕ ಚಿಂತನೆ ಬೆಳಸಿಕೊಂಡರೆ ಧನಾತ್ಮಕ ಪರಿಸರ ನಿರ್ಮಿಸಬಹುದು ಎಂದು ಉದ್ಯಮಿ ಕೆ. ಮಧುಸೂದನ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಗಾಂಧೀಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ಮೌಲ್ಯಗಳು ಕೇವಲ ರಾಜಕೀಯ ಅಥವಾ ಸಾಮಾಜಿಕ ಕ್ಷೇತ್ರಗಳಲ್ಲಷ್ಟೇ ಸೀಮಿತವಾಗಿಲ್ಲ. ಅವು ಒಬ್ಬ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗಿವೆ. ಪ್ರಾಮಾಣಿಕತೆ, ಪಾರದರ್ಶಕತೆ, ಕಠಿಣ ಪರಿಶ್ರಮ ಮತ್ತು ನೈತಿಕ ವ್ಯವಹಾರ ಪದ್ಧತಿಗಳಿಂದ ಸಮಾಜ ಅಭಿವೃದ್ಧಿಯಾಗಲಿದೆ. ವಿದ್ಯಾರ್ಥಿಗಳು ತಮ್ಮದೇ ಸ್ಫೂರ್ತಿದಾಯಕ ಕಥೆಯನ್ನು ಹುಟ್ಟಿ ಹಾಕಿಕೊಳ್ಳಬೇಕು. ಗುರಿ ಮುಟ್ಟುವ ಕಡೆಗೆ ತಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕು. ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಆದರ್ಶ ಪ್ರಾಯವಾಗಿ ಬದುಕಬೇಕು. ಧ್ಯಾನವು ಹೃದಯದಲ್ಲಿರುವ ದೈವತ್ವದ ಕುರಿತು ಆಲೋಚನೆ ಮಾಡುತ್ತದೆ. ಮನಸ್ಸನ್ನು ಕೇಂದ್ರೀಕರಿಸುತ್ತದೆ. ಏಕಾಗ್ರತೆ ಸಾಧಿಸಬಹುದು. ದೈನಂದಿನ ಬದುಕಿನಲ್ಲಿ ಪ್ರತಿಯೊಬ್ಬರು ಧ್ಯಾನ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಆರ್.ಜಿ.ಉಷಾ ಮಾತನಾಡಿ, ಮಹಾತ್ಮ ಗಾಂಧೀಜಿ ಸತ್ಯ, ಅಹಿಂಸೆ ಮತ್ತು ಶಾಂತಿಯ ಮಾರ್ಗವನ್ನು ತೋರಿಸಿ, ವಿಶ್ವದಾದ್ಯಂತ ಮಾನವತೆಯ ಸಂದೇಶವನ್ನು ಹರಡಿ ಜಗತ್ತಿಗೆ ಮಾದರಿಯಾದವರು. ಶಿಕ್ಷಣದ ನಿಜವಾದ ಅರ್ಥ ಅಂಕಗಳಿಗಿಂತ ಮೌಲ್ಯಗಳಲ್ಲಿದೆ ಎಂಬುದನ್ನು ಗಾಂಧೀಜಿಯವರ ಆದರ್ಶಗಳಲ್ಲಿ ಕಾಣುತ್ತೇವೆ ಎಂದರು.

ಪ್ರಬಂಧ ಸ್ಪರ್ಧೆ ವಿಜೇತರು: '21ನೇ ಶತಮಾನದಲ್ಲಿ ಗಾಂಧೀಜಿಯವರ ವಿಚಾರಧಾರೆಗಳೊಂದಿಗೆ ನನ್ನ ಹೋರಾಟ' ವಿಷಯದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಹರಿಜನ ಸುರೇಶ್ (ಪ್ರ), ಯಶಸ್ವಿನಿ ಜಿ.ಪಿ (ದ್ವಿ), ಕೀರ್ತನ.ಆರ್(ತೃ) ಬಹುಮಾನ ಪಡೆದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಹನುಮಂತು, ಮಧು ಕೆ.ಎಸ್, ಕಿರಣ್‌ಕುಮಾರ್ ಎಂ.ಆರ್, ರಾಜೇಶ್, ಸುಪ್ರೀತ ಎಂ.ಎ, ಸಿಂಧು ಜಿ.ಎಂ, ಜ್ಯೋತಿ ಟಿ ಅವರಿಗೆ ಪ್ರಶಂಸನಾ ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಂಯೋಜಕಿ ಡಾ.ವಿನುತ.ಎಂ, ಅಧ್ಯಾಪಕ ರಾಜೀವ್ ಶರ್ಮ, ಸಹಾಯಕ ಪ್ರಾಧ್ಯಾಪಕರು ಹಾಗೂ ಕಾಲೇಜಿನ ಬೋಧಕ ಮತ್ತು ಬೋಧಕೇತರರ ವರ್ಗದವರು ಹಾಗೂ ಪ್ರಥಮ ಮತ್ತು ದ್ವಿತೀಯ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು. ದೀಪಿಕಾ ಪ್ರಾರ್ಥಿಸಿದರು. ಗೀತಾ ಸ್ವಾಗತಿಸಿದರು. ಧನಲಕ್ಷ್ಮೀ ಮಹಾತ್ಮ ಗಾಂಧಿ ಕುರಿತು ಮಾತನಾಡಿದರು. ವಿದ್ಯಾರ್ಥಿನಿ ದಾಕ್ಷಾಯಿಣಿ ಮುಖ್ಯ ಅತಿಥಿಗಳಾದ ಕೆ. ಮಧುಸೂದನ್ ಅವರನ್ನು ಪರಿಚಯಿಸಿದರು. ಸೋನ ಪಿ ನಿರೂಪಿಸಿ, ವಂದಿಸಿದರು.

ಸಿ. ಕುಮಾರಗೆ ಪಿಹೆಚ್.ಡಿ.ಪದವಿ




ಮೈಸೂರು, ಅ. 12– ಡಾ. ಎಂ.ಬಿ. ಸುರೇಶ ಅವರ ಮಾರ್ಗದರ್ಶನದಲ್ಲಿ ಸಿ. ಕುಮಾರ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಕೂಡ್ಲೂರು ವೆಂಕಟಪ್ಪ ಅವರ ಸಾಹಿತ್ಯ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು, ನಾಳೆ, ಅ.16ಕ್ಕೆ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶನ



ಮೈಸೂರಿನ ಹರಿವಿದ್ಯಾಲಯದ ಸಭಾಂಗಣದಲ್ಲಿ ಭಾನುವಾರ ನಡೆದ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕದ ಅಂತಿಮ ತಾಲೀಮಿನ ದೃಶ್ಯ



ಕಲಾಮಂದಿರ ಆವರಣದ ಕಿರುರಂಗ ಮಂದಿರಲ್ಲಿ ಇಂದು (ಅ.13), ನಾಳೆ ಮತ್ತು ಅ.16ರಂದು 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶನ ಏರ್ಪಡಿಸಲಾಗಿದ್ದು, ನಂತರದಲ್ಲಿ ನಾಲ್ಕು ಹಂತಗಳಲ್ಲಿ ರಾಜ್ಯದೆಲ್ಲೆಡೆ ಪ್ರವಾಸ ನಡೆಸಿ ನಾಟಕ ಪ್ರದರ್ಶಿಸಲು ಯೋಜನೆ ರೂಪಿಸಲಾಗಿದೆ.

-ಅಡ್ಡಂಡ ಸಿ.ಕಾರ್ಯಪ್ಪ

ಮೈಸೂರು, ಅ.12– ಹಿರಿಯ ರಂಗಕರ್ಮಿ, ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ ನಿರ್ದೇಶಿಸಿರುವ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕದ ಚೊಚ್ಚಲ ಪ್ರದರ್ಶನವನ್ನು ನಗರದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸೋಮವಾರ(ಅ.13) ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ. ಇದೇ ಸ್ಥಳ ಹಾಗೂ ಸಮಯಕ್ಕೆ ಅ.14 ಹಾಗೂ 16ರಂದು ನಾಟಕ ಪ್ರದರ್ಶನಗೊಳ್ಳಲಿದೆ.

ಈ ಹಿನ್ನೆಲೆಯಲ್ಲಿ ಹರಿವಿದ್ಯಾಲಯದ ಸಭಾಂಗಣದಲ್ಲಿ ಭಾನುವಾರ ಅಂತಿಮ ತಾಲೀಮು ನಡೆಸಲಾಯಿತು. ರಂಗ ಸಜ್ಜಿಕೆ ಸಜ್ಜುಗೊಳಿಸಿ, ಎಲ್ಲಾ ಪಾತ್ರಧಾರಿಗಳು ನಾಟಕದಲ್ಲಿ ಧರಿಸುವ ಪೋಷಾಕುಗಳನ್ನೇ ತೊಟ್ಟು ಅಭಿನಯಿಸಿದರು. ನಾಟಕದ ಕರ್ತೃ ಹಾಗೂ ನಿರ್ದೇಶಕ ಅಡ್ಡಂಡ ಕಾರ್ಯಪ್ಪನವರು ಅಂತಿಮ ಪರಿಪೂರ್ಣ ತಾಲೀಮನ್ನು ಸೂಕ್ಷ್ಮವಾಗಿ ಗಮನಿಸಿ, ಕಲಾವಿದರಿಗೆ ಶುಭ ಕೋರಿದರು.

ಈ ವೇಳೆ ನಾಟಕ ಕುರಿತು ಮಾತನಾಡಿದ ಅವರು, ಈಗಾಗಲೇ ಹೇಳಿರುವಂತೆ ಸಂವಿಧಾನದ ಆರ್ಟಿಕಲ್ 19ರ ಅಭಿವ್ಯಕ್ತಿ ಸ್ವಾತಂತ್ರ್ಯದ ಆಧಾರದ ಮೇಲೆ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶಿಸಲಾಗುತ್ತಿದೆ. ಈ ನಾಟಕದಲ್ಲಿ 'ಮಹಾತ್ಮ ಮತ್ತು ನಿಜ ಮಹಾತ್ಮರ ಮುಖಾಮುಖಿಯೊಂದಿಗೆ ಇತಿಹಾಸದ ರೋಚಕ ಸತ್ಯಗಳು ಅನಾವರಣಗೊಳ್ಳಲಿವೆ. ಈಗಾಗಲೇ ಪುಸ್ತಕದ ಓದು, ಕೃತಿ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಾಟಕ ವೀಕ್ಷಣೆಯಿಂದ ವಾಸ್ತವಾಂಶ ಮನದಟ್ಟಾಗಲಿದೆ ಎಂದು ತಿಳಿಸಿದರು.

'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ವೈಚಾರಿಕ ಸಿದ್ಧಾಂತದ ಆಧಾರದ ಮೇಲೆ ರೂಪಿತವಾಗಿದ್ದು, ಯಾವುದೇ ವ್ಯಕ್ತಿ, ಪಕ್ಷದ ವಿರುದ್ಧ ಅಥವಾ ಪರವಾಗಿಲ್ಲ. ಡಾ.ಅಂಬೇಡ್ಕರ್ ಅವರೇ ಬರೆದಿರುವ 'ಥಾಟ್ಸ್ ಆನ್ ಪಾಕಿಸ್ತಾನ್', ಅವರ ಎರಡನೇ ಪತ್ನಿ ಡಾ.ಸವಿತಾ ಅಂಬೇಡ್ಕರ್ ಅವರ 'ಡಾ.ಅಂಬೇಡ್ಕರ್ ಸಹವಾಸದಲ್ಲಿ', ನಾನಕ್ ಚಂದ್ ರತ್ತು(ವಿಜಯ ನರಸಿಂಹ) ಅವರ 'ಡಾ.ಬಾಬಾ ಸಾಹೇಬರ ಕೊನೆಯ ದಿನಗಳು', ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸಮಗ್ರ ಬರಹದ 22 ಸಂಪುಟಗಳು' ಸೇರಿದಂತೆ ಅಂಬೇಡ್ಕರ್ ಭಾಷಣ, ಟಿಪ್ಪಣಿ, ಡಾ.ಕೇಶವ್ ಬಲಿರಾಂ ಹೆಡ್ಗೆವಾರ್ ಹೇಳಿಕೆಗ ಅಧ್ಯಯನ ನಡೆಸಿ, ಈ ನಾಟಕ ರೂಪಿಸಲಾಗಿದೆ ಎಂದರು.

ಅಂಬೇಡ್ಕರ್ ಅವರ ಹೆಸರೇಳಿಕೊಂಡು ಅಧಿಕಾರ ನಡೆಸುವವರು ಮುಚ್ಚಿಟ್ಟಿರುವ ವಿಷಯಗಳು, ಆರ್‌ಎಸ್‌ಎಸ್ ಕುರಿತು ಅಂಬೇಡ್ಕರ್ ಅವರಿಗಿದ್ದ ಅಭಿಪ್ರಾಯ, ಹೆಡ್ಗೆವಾರ್ ಅವರೊಂದಿಗೆ ಆರ್‌ಎಸ್‌ಎಸ್ ಬೈಠಕ್‌ನಲ್ಲಿ ನಡೆಸಿದ್ದ ಸಂವಾದ, ಅಲ್ಲಿ ಗಮನಿಸಿದ ಸಂಗತಿಗಳು, ಸಂವಿಧಾನ ಸಭೆಯ ಸಂಭಾಷಣೆಗಳು, ಅಂಬೇಡ್ಕರ್ ಅವರ ಪ್ರತಿಕ್ರಿಯೆ, ಅಂಬೇಡ್ಕರ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವೇಳೆ ನಡೆದ ಘಟನಾವಳಿಗಳು ಸೇರಿದಂತೆ ಇತಿಹಾಸದಲ್ಲಿ ಮುಚ್ಚಿಟ್ಟಿರುವ ಹಲವು ಸತ್ಯಗಳನ್ನು ಈ ನಾಟಕ ಪ್ರೇಕ್ಷಕರ ಮುಂದಿಡಲಿದೆ ಎಂದು ತಿಳಿಸಿದರು.

ಸ್ವಚ್ಛತೆ ಕಾಪಾಡದವರ ವಿರುದ್ಧ ದಂಡಾಸ್ತ್ರ ಕಡ್ಡಾಯಕ್ಕೆ ಮೈಗ್ರಾಪ ಒತ್ತಾಯ

ಪ್ರಾಥಮಿಕ ಶಿಕ್ಷಣದಿಂದಲೇ ಸ್ವಚ್ಛತೆ ಕುರಿತು ನೈತಿಕ ಪಠ್ಯ ಅಳವಡಿಕೆಗೆ ಸಲಹೆ



ಮೈಗ್ರಾಪ ಸಭೆಯಲ್ಲಿ ದಸರಾ ಸ್ವಚ್ಛತೆ ಕುರಿತು ಸದಸ್ಯರು ಚರ್ಚೆ ನಡೆಸಿದರು.

ಮೈಸೂರು,ಅ.12(ಎಸ್‌ಪಿಎನ್)– ವಿಶ್ವವಿಖ್ಯಾತ ದಸರಾ ಮಹೋತ್ಸವದ ವಿವಿಧ ವೇದಿಕೆ, ಜಂಬೂ ಸವಾರಿ ಹಾಗೂ ಪಂಜಿನ ಕವಾಯತಿನಲ್ಲಿ ವೀಕ್ಷಣೆಗೆ ಆಗಮಿಸಿದ್ದ ಲಕ್ಷಾಂತರ ಪ್ರವಾಸಿಗರು, ಸ್ಥಳೀಯ ವೀಕ್ಷಕರು ಸುಮಾರು 600 ಟನ್ ಕಸವನ್ನು ಎಲ್ಲೆಂದರಲ್ಲಿ ಬಿಸಾಡಿ, ದಸರಾ ವೀಕ್ಷಣೆ ಮಾಡಿರುವ ಅಂಶ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗುತ್ತಿರುವುದಕ್ಕೆ ಮೈಗ್ರಾಪ ಸದಸ್ಯರು ಬೇಸರ ವ್ಯಕ್ತಪಡಿಸಿದರು.

ದಸರಾ ಮೆರವಣಿಗೆ, ಆಹಾರ ಮೇಳದಲ್ಲಿ ಅನೈರ್ಮಲ್ಯತೆ, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ನೈತಿಕ ಶಿಕ್ಷಣ ಅಳವಡಿಕೆ ಹಾಗೂ ಹಸಿ ಕಸ–ಒಣ ಕಸ ವಿಂಗಡಣೆ ಮಾಡದವರ ವಿರುದ್ಧ ದಂಡಾಸ್ತ್ರ ಪ್ರಯೋಗಿಸುವ ಕುರಿತು ಸೂಕ್ತ ಕಾನೂನು ರೂಪಿಸುವಂತೆ ಮೈಸೂರು ಗ್ರಾಹಕರ ಪರಿಷತ್ ಸಭೆಯಲ್ಲಿ ಸದಸ್ಯರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಸಭೆಯಲ್ಲಿ 'ದಸರಾ ಸ್ವಚ್ಛತೆ ನಿರ್ವಹಣೆ; ಸುಧಾರಣೆ' ಕುರಿತು ನಡೆದ ಸಂವಾದದಲ್ಲಿ ಮೈಸೂರು ನಗರ ಪಾಲಿಕೆಯ ಎಇಇ ಮೃತ್ಯುಂಜಯ ಪಾಲ್ಗೊಂಡು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು. ದಸರಾ ನಿರ್ವಹಣೆ ಕುರಿತು 'ದಸರಾ ಹೈಪವರ್ ಕಮಿಟಿ' ಈ ಬಾರಿ ದಸರಾದಲ್ಲಿ ಸ್ವಚ್ಛತೆ ಹಾಗೂ ಪ್ಲಾಸ್ಟಿಕ್ ಉಪಯೋಗಿಸದಂತೆ ಜನರಲ್ಲಿ ಅರಿವು ಮೂಡಿಸುವ ಕುರಿತು ಗಂಭೀರವಾಗಿ ಪರಿಗಣಿಸಿಲ್ಲ. ಅಲ್ಲದೆ ಆಹಾರ ಮೇಳ, ಜಂಬೂ ಸವಾರಿ ಮೆರವಣಿಗೆಯಲ್ಲಿ ಬೇಕಾಬಿಟ್ಟಿ ಕಸ ಬಿಸಾಡದಂತೆ ಜನರಲ್ಲಿ ಅರಿವು ಮೂಡಿಸುವ ಗೋಜಿಗೆ ಹೋಗದಿರುವ ಕುರಿತು ಪಾಲಿಕೆಯ ಎಇಇ ಮೃತ್ಯುಂಜಯ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೃತ್ಯುಂಜಯ ಅವರು, ಸರ್ಕಾರದ ನಿರ್ದೇಶನದಂತೆ ಮೈಸೂರು ನಗರ ಪಾಲಿಕೆ ವತಿಯಿಂದ ಸ್ವಚ್ಛತೆಗೆ ಆದ್ಯತೆ ನೀಡಿ, ನಮ್ಮ ವ್ಯಾಪ್ತಿಯಲ್ಲಿ ಸಾಧ್ಯವಾದಷ್ಟು ಕೆಲಸ ನಿರ್ವಹಿಸಿದ್ದೇವೆ. ಆಹಾರ ಮೇಳದಲ್ಲಿ ಆಹಾರ ಸುರಕ್ಷತೆ, ವಿಲೇವಾರಿ, ಮಳಿಗೆಗಳ ಆಯ್ಕೆಗೆ ಬೇರೆ ಸಮಿತಿಗಳು ಕೆಲಸ ನಿರ್ವಹಿಸಿವೆ. ಆ ಸಮಿತಿಗಳ ಕಾರ್ಯದಂತೆ ಸ್ವಚ್ಛತಾ ಸಮಿತಿಯೂ ಕೆಲಸ ನಿರ್ವಹಿಸಿದೆ ಒಂದು ಸಣ್ಣ ಬದಲಾವಣೆಯಾಗಬೇಕಿದ್ದರೂ ಗ್ರಾಹಕರು, ದಸರಾ ವಿಶೇಷಾಧಿಕಾರಿಗಳಿಗೆ ಮನವಿ ಸಲ್ಲಿಸಬೇಕು ಎಂದು ಉತ್ತರಿಸಿದರು.

ದಸರಾ ಯಶಸ್ವಿಗೆ ಎಲ್ಲಾ ಸಮಿತಿಗಳ ಸಹಕಾರ: ಆಹಾರ ಮೇಳದಲ್ಲಿ ಗ್ರಾಹಕರಿಗೆ ಗುಣಮಟ್ಟದ ಆಹಾರ ಪೂರೈಕೆ ಮಾಡದ ಮಳಿಗೆದಾರರಿಗೆ ದಂಡ ಪ್ರಯೋಗಿಸಿ, ಸ್ವಚ್ಛತೆ ಕುರಿತು ಅರಿವು ಮೂಡಿಸಿಲ್ಲ. ಆಹಾರ ಮೇಳದ ಆಯಾಯ ಮಳಿಗೆಗಳ ಎದುರು ಕಸದ ಬುಟ್ಟಿಗಳನ್ನು ಇಟ್ಟಿರಲಿಲ್ಲ. ಇದರಿಂದ ಗ್ರಾಹಕರು ಕಸವನ್ನು ಅಲ್ಲಿ–ಇಲ್ಲಿ ಬಿಸಾಕಿ ಹೋಗುತ್ತಿದ್ದರು. ಇದರ ಬಗ್ಗೆ ಸ್ವಚ್ಛತಾ ಸಮಿತಿ ಇದನ್ನು ತಡೆಗಟ್ಟಲು ಕ್ರಮವಹಿಸಿಲ್ಲ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ಆಹಾರ ಮೇಳ ಸೇರಿದಂತೆ ದಸರಾದ ವಿವಿಧ ವೇದಿಕೆಗಳಲ್ಲಿ ಸ್ವಚ್ಛತೆ ನಿರ್ವಹಣೆ ಮಾತ್ರ ನಮ್ಮ ವ್ಯಾಪ್ತಿಗೆ ಬರುತ್ತದೆ. ಇನ್ನುಳಿದಂತೆ ಬೇರೆಬೇರೆ ಸಮಿತಿಗಳನ್ನು ದಸರಾ ಯಶಸ್ವಿಯ ಭಾಗವಾಗಿ ಕೆಲಸ ನಿರ್ವಹಿಸಿವೆ ಎಲ್ಲರೂ ದಸರಾ ಯಶಸ್ವಿಗೆ ದುಡಿದಿದ್ದಾರೆ. ಇದರಲ್ಲಿ ಸಣ್ಣಪುಟ್ಟ ಲೋಪಗಳಿದ್ದರೂ ಯಶಸ್ವಿಯಾಗಿ ನಿರ್ವಹಿಸಿದ್ದೇವೆ ಎಂದು ದಸರಾ ಉಪ ಸಮಿತಿಗಳ ಕಾರ್ಯವೈಖರಿಯನ್ನು ಬಲವಾಗಿ ಸಮರ್ಥಿಸಿದರು.

ಪಾಲಿಕೆ ನೇತೃತ್ವ ವಹಿಸಲಿ: ಮುಂದಿನ ದಸರಾದಲ್ಲಿ ಆಹಾರ ಮೇಳದ ಸ್ವಚ್ಛತೆ, ಆಹಾರ ಗುಣಮಟ್ಟ, ತ್ಯಾಜ್ಯ ನಿರ್ವಹಣೆ ಕುರಿತು ಕಟ್ಟುನಿಟ್ಟಾಗಿ ನಿರ್ವಹಿಸಲು ಇದರ ಉತ್ತರದಾಯಿತ್ವವನ್ನು ಮೈಸೂರು ನಗರ ಪಾಲಿಕೆಗೆ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಆಹಾರ ಮೇಳದ ಶಿಸ್ತಿನಿಂದ ನಡೆಸಲು ಸಾಧ್ಯವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಮೃತ್ಯುಂಜಯ, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಈ ಸಲಹೆಗೆ 'ದಸರಾ ಹೈಪವರ್ ಕಮಿಟಿ' ಪರಿಗಣಿಸಬೇಕು. ಆಹಾರ ಸುರಕ್ಷತಾ ಪರೀಕ್ಷೆ, ಆಹಾರ ಗುಣಮಟ್ಟ ಕಾಪಾಡದ ಮಳಿಗೆದಾರರ ವಿರುದ್ಧ ದಂಡಾಸ್ತ್ರ ಪ್ರಯೋಗ, ವೈಜ್ಞಾನಿಕ ಕಸ ವಿಲೇವಾರಿಗೆ ಕ್ರಮ ಜರುಗಿಸಲು ಸಂಪೂರ್ಣ ಮೈಸೂರು ನಗರ ಪಾಲಿಕೆಗೆ ಜವಾಬ್ದಾರಿ ನೀಡುವುದನ್ನು 'ದಸರಾ ಹೈಪವರ್ ಕಮಿಟಿ' ತೀರ್ಮಾನಿಸಬೇಕು ಎಂದು ಉತ್ತರಿಸಿದರು.

ರಾಜ್ಯದಲ್ಲಿ 41 ಸಾವಿರಕ್ಕೂ ಅಧಿಕ ಸರ್ಕಾರಿ ಪ್ರಾಥಮಿಕ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಆದರೆ, ಈ ಶಾಲೆಗಳಲ್ಲಿ ಸ್ವಚ್ಛತೆ, ಶೌಚಾಲಯ ನಿರ್ವಹಣೆ, ಪಠ್ಯೇತರ ಚಟುವಟಿಕೆಗಳ ನಿರ್ವಹಣೆ ಕುರಿತು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಅದರಲ್ಲೂ ಶೌಚಾಲಯ ಸ್ವಚ್ಛತೆ ಕುರಿತು ಇಂದಿಗೂ ಪ್ರತ್ಯೇಕ ನಿರ್ವಹಣಾ ನೀತಿ ಜಾರಿಗೊಳಿಸದಿರುವುದು ನಮ್ಮ ಶಿಕ್ಷಣ ನೀತಿಗೆ ಹಿಡಿದ ಕೈಗನ್ನಡಿ.

– ಮೈಗ್ರಾಪ

ಸದಸ್ಯರ ಸಲಹೆಗಳು

- ಪ್ರತಿಬಾರಿ ದಸರಾ ಆಹಾರ ಮೇಳದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ, ಗುಣಮಟ್ಟದ ಆಹಾರವನ್ನು ಗ್ರಾಹಕರಿಗೆ ಒದಗಿಸಬೇಕು.
- ಪ್ರತಿ ಮಳಿಗೆಗಳ ಮುಂದೆ ಕಸದ ಬುಟ್ಟಿ ಇಡಬೇಕು. ಮಳಿಗೆಗಳಲ್ಲಿ ತಯಾರಾಗುವ ಆಹಾರದ ಗುಣಮಟ್ಟ ಪರೀಕ್ಷೆಗೊಳಪಡಿಸಬೇಕು.
- ಜಂಬೂ ಸವಾರಿ, ಪಂಜಿನ ಕವಾಯಿತು ವೀಕ್ಷಣೆಗೆ ಬರುವ ಜನರಿಗೆ ಸ್ವಚ್ಛತೆ ಕುರಿತು ಕ್ಷಣಕ್ಷಣಕ್ಕೂ ಮೈಕ್ ಮೂಲಕ ಎಚ್ಚರಿಸಬೇಕು.
- ರಾಜ್ಯ ಮತ್ತು ಕೇಂದ್ರ ಪಠ್ಯದ ಮೂಲಕ ವಿದ್ಯಾರ್ಥಿಗಳಿಗೆ ಸ್ವಚ್ಛತಾ ಪಠ್ಯ ಅಳವಡಿಸಬೇಕು.

ಕಾನೂನು ರೂಪಿಸಿ: ಪರಿಸರ ಜಾಗೃತಿ, ಹಸಿ ಕಸ, ಒಣ ಕಸ ಜಾಗೃತಿ ಕುರಿತು ಸಣ್ಣ ವಯಸ್ಸಿನಿಂದಲೇ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ, ಪರಿಸರ ಜಾಗೃತಿ ಮೂಡಿಸುವ ವಿಷಯಗಳನ್ನು ಪಠ್ಯದಲ್ಲಿ ಅಳವಡಿಸುವ ಕುರಿತು ಸದಸ್ಯರು ಚರ್ಚಿಸಿದರಲ್ಲದೆ, ನಗರ ಪ್ರದೇಶದಲ್ಲಿ ಒಣ ಕಸ, ಹಸಿಕಸ ವಿಂಗಡಣೆ ಕುರಿತು ಜನರಲ್ಲಿ ಜವಾಬ್ದಾರಿ ಮೂಡಿಸಲು ಕಾನೂನಿನ ಮೂಲಕ ಜವಾಬ್ದಾರಿ ವಹಿಸಲು ಸರ್ಕಾರ ಸೂಕ್ತ ನೀತಿ ರೂಪಿಸುವಂತೆ ಸದಸ್ಯರು ಒತ್ತಾಯಿಸಿದರು.

ಸಭೆಯಲ್ಲಿ ಮೈಸೂರು ಗ್ರಾಹಕ ಪರಿಷತ್ ಅಧ್ಯಕ್ಷೆ ಎಸ್.ಶೋಭನಾ, ಸದಸ್ಯರಾದ ಡಿ.ವಿ.ದಯಾನಂದ ಸಾಗರ್, ಬಾನುಪ್ರಶಾಂತ್, ಮುಡಾ ನಿವೃತ್ತ ಅಧಿಕಾರಿ ಡಾ.ನಟರಾಜು, ಡಾ.ರೇಣು ಅಗ್ರವಾಲ್, ಗಂಗಾಧರ್ ಪ್ರಸಾದ್, ಮಾಳವಿಕ ಗುಬ್ಬಿವಾಣಿ, ವಿ.ಶಂಕರ್, ವಿಶ್ವನಾಥ್, ಕೆ.ವಿ.ಕೆ.ನಾಯ್ಡು, ಜಿ.ಶ್ರೀಧರ್, ಡಾ.ಸುರೇಖಾ, ಪ್ರಭಾ ನಂದೀಶ್, ಕೆ.ಎಸ್.ಮೃತ್ಯುಂಜಯ, ಪ್ರಥಮ ಸಂಸ್ಥೆ ಅಶ್ವಿನಿ ರಂಜನ್, ರೋಟರಿ ವೆಸ್ಟ್ ಶಾಲೆಯ ಎಬಿ ಶಂಕರ್, ರೋಟರಿ ಬೃಂದಾವನ ಎಬಿ ದಿನೇಶ್, ಎಂ.ಎಸ್.ಆಶಾ, ಕೆ.ಆರ್. ಶಂಕರಮೂರ್ತಿ, ಎಸ್. ತೇಜಸ್ ಕುಮಾರ್, ಅರುಣ್ ಕೆ.ಸುಬ್ರಹ್ಮಣ್ಯಯನ್, ಎಂ.ಎಸ್.ದಿನೇಶ, ಟಿ.ಆರ್.ರವೀಂದ್ರ ಉಪಸ್ಥಿತರಿದ್ದರು.

ವೆಸ್ಟ್ ಇಂಡೀಸ್ ಮೇಲೆ ಫಾಲೋ ಆನ್ ಹೇರಿದ ಭಾರತ

ನವದೆಹಲಿ, ಅ.12–ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಣ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನವಾದ ಭಾನುವಾರ ವೆಸ್ಟ್ ಇಂಡೀಸ್ ಮೇಲೆ ಭಾರತ ಫಾಲೋ–ಆನ್ ಹೇರಿದೆ.

ಭಾರತದ ಮೊದಲ ಇನಿಂಗ್ಸ್ ಮೊತ್ತ 518 ರನ್‌ಗಳಿಗೆ ಉತ್ತರಿಸಿದ ವೆಸ್ಟ್ ಇಂಡಿಸ್ ತನ್ನ ಮೊದಲ ಇನಿಂಗ್ಸ್‌ನಲ್ಲಿ 248 ರನ್‌ಗಳನ್ನು ಗಳಿಸಿತು. ಬಳಿಕ ವಿಂಡೀಸ್ ದ್ವಿತೀಯ ಇನಿಂಗ್ಸ್‌ನಲ್ಲಿ ಮೂರನೇ ದಿನದಾಟದ ಮುಕ್ತಾಯದ ವೇಳೆಗೆ ಎರಡು ವಿಕೆಟ್ ನಷ್ಟಕ್ಕೆ 173 ರನ್‌ಗಳನ್ನು ಗಳಿಸಿದೆಯಾದರೂ ಈಗಲೂ 97 ರನ್‌ಗಳ ಹಿನ್ನಡೆಯಲ್ಲಿದೆ.

ವಿಂಡೀಸ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಆರಂಭಿಕ ಆಟಗಾರ ಜಾನ್ ಕ್ಯಾಂಬೆಲ್ ಅವರ ಅಜೇಯ 87 ಮತ್ತು ಶಾಯ್ ಹೋಪ್ ಅವರ ಅಜೇಯ 66 ರನ್‌ಗಳ ನೆರವಿನಿಂದ ತೀವ್ರ ಪ್ರತಿರೋಧ ತೋರಿತು. ಇವರಿಬ್ಬರು ಮುರಿಯದ ಮೂರನೇ ವಿಕೆಟ್‌ಗೆ 138 ರನ್ ಸೇರಿಸಿದರು. ಆ ಮೂಲಕ ವಿಂಡೀಸ್ ನಾಲ್ಕನೇ ದಿನಕ್ಕೆ ಆಟ ಕಾಯ್ದಿರಿಸಿಕೊಂಡಿತು.

ವೆಸ್ಟ್ ಇಂಡೀಸ್‌ನ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲನ್ನು ಪಡೆದ ಭಾರತೀಯ ಸ್ಪಿನ್ನರ್ ಕುಲದೀಪ್ ಯಾದವ್, ಎದುರಾಳಿ ಬ್ಯಾಟರ್‌ಗಳ ಮೇಲೆ ಸವಾರಿ ಮಾಡಿದರು. ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ಅವರ ಐದನೇ ಐದು ವಿಕೆಟ್ ಗೊಂಚಲಾಗಿದೆ. ಅವರು 82 ರನ್‌ಗಳನ್ನು ಕೊಟ್ಟು ಐದು ವಿಕೆಟ್ ಉರುಳಿಸಿದರು. ಅವರ ಪ್ರಯತ್ನದ ಫಲವಾಗಿ ವೆಸ್ಟ್ ಇಂಡೀಸ್‌ನ ಮೊದಲ ಇನಿಂಗ್ಸ್ 248 ರನ್‌ಗೆ ಮುಕ್ತಾಯಗೊಂಡಿತು.

ಭಾನುವಾರ ಬೆಳಗ್ಗೆ ನಾಲ್ಕು ವಿಕೆಟ್ ನಷ್ಟಕ್ಕೆ 140 ರನ್‌ನಿಂದ ತನ್ನ ಮೊದಲ ಇನಿಂಗ್ಸ್ ಮುಂದುವರಿಸಿದ ವೆಸ್ಟ್ ಇಂಡೀಸ್ ಯಾವತ್ತೂ ಭಾರತಕ್ಕೆ ಸವಾಲು ಒಡ್ಡುವ ಮಟ್ಟಕ್ಕೆ ತಲುಪಲಿಲ್ಲ. ಭಾರತ ಸ್ಪಿನ್ ದಾಳಿಗೆ ನಲುಗಿತು.

ವೆಸ್ಟ್ ಇಂಡೀಸ್‌ನ ಎರಡನೇ ಇನಿಂಗ್ಸ್‌ನ ಆರಂಭವೂ ದುರ್ಬಲವಾಗಿತ್ತು. 35 ರನ್‌ಗಳನ್ನು ಗಳಿಸುವಷ್ಟರಲ್ಲಿ ಅದು ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಆಗ ತನ್ನ ಆಟದ ಶೈಲಿಯನ್ನು ಬದಲಿಸಿದ ಕ್ಯಾಂಬೆಲ್ ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್‌ರ ವಿರುದ್ಧ ಆಕ್ರಮಣಕಾರಿ ದಾಳಿಗೆ ಸೆಡ್ಡುಹೊಡೆದು ನಾಲ್ಕನೇ ದಿನಕ್ಕೆ ಆಟ ಕಾಯ್ದಿರಿಸಿಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸೇಲ್ಸ್‌ಮ್ಯಾನ್ : ನಮ್ಮ ಕಂಪನಿ ವಾಷಿಂಗ್ ಪೌಡರ್ ತಗೊಳ್ಳಿ ಮೇಡಂ. ಸೂಪರಾಗಿದೆ.
ಯಜಮಾನಿ : ಇದನ್ನು ಬಕೆಟ್‌ನಲ್ಲಿ ಕದಡಿ ಸೀರೆ ಜಾಲಿಸಿದರೆ ಬಣ್ಣ ಹೋಗಲ್ಲವಾ?
ಸೇಲ್ಸ್‌ಮ್ಯಾನ್ : ಅಯ್ಯೋ ಮೇಡಂ. ಬಣ್ಣ ಎಲ್ಲಿಗೆ ಹೋಗುತ್ತೆ. ಅಲ್ಲೆ ಬಕೆಟ್‌ನಲ್ಲಿ ಉಳಿದುಕೊಂಡಿರುತ್ತೆ. ಚಿಂತೆ ಮಾಡಬೇಡಿ.

ಮೈಸೂರು ಮಿತ್ರ
ಸೋಮವಾರ, 13 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಪ್ರಾಮಾಣಿಕತೆ ಎನ್ನುವುದು ತುಂಬಾ ದುಬಾರಿ ಉಡುಗೊರೆ. ಅದನ್ನು ಸಣ್ಣ ಮನಸ್ಸಿನ ವ್ಯಕ್ತಿಗಳಿಂದ ನಿರೀಕ್ಷಿಸಬೇಡಿ.


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಕ್ಕ ನಮ್ಮವಳಾದ್ರೆ, ಭಾವ ನಮ್ಮೋನಾ?

ನಿಮ್ಮ ಪತ್ರಗಳು

ದಾರಿ ದೀಪವಾಗಲಿ ಜಾತಿ ಸಮೀಕ್ಷೆ

ಮಾನ್ಯರೆ,

ರಾಜ್ಯದಲ್ಲಿ ಬಹು ನಿರೀಕ್ಷಿತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಸಮೀಕ್ಷೆ) ನಡೆಯುತ್ತಿದ್ದು, ಇದಕ್ಕಾಗಿ ಸರ್ಕಾರವು ಸುಮಾರು 400 ಕೋಟಿ ರೂ. ಬೃಹತ್ ಮೊತ್ತವನ್ನು ಖರ್ಚು ಮಾಡುತ್ತಿದೆ. 400 ಕೋಟಿ ರೂ. ಎಂದರೆ ಜನಸಾಮಾನ್ಯರ ತೆರಿಗೆ ಹಣ. ಇಷ್ಟು ದೊಡ್ಡ ಮೊತ್ತ ವ್ಯಯವಾಗುತ್ತಿರುವಾಗ, ಅದರ ಪ್ರತಿ ಪೈಸೆಯೂ ಸಾರ್ಥಕವಾಗಬೇಕು. ಸಮೀಕ್ಷೆ ಸಂದರ್ಭದಲ್ಲಿ ಪ್ರತಿ ಕುಟುಂಬದಿಂದ ಸಂಗ್ರಹಿಸಲಾಗುತ್ತಿರುವ ಜಾತಿ, ಆದಾಯ ಮತ್ತು ವೈಯಕ್ತಿಕ ವಿವರಗಳು ಅತ್ಯಂತ ಗೌಪ್ಯವಾದವು. ಈ ಸೂಕ್ಷ್ಮ ಮಾಹಿತಿಗಳು ಯಾವುದೇ ಕಾರಣಕ್ಕೂ ಅನ್ಯರಿಗೆ ಸೋರಿಕೆಯಾಗಬಾರದು ಮತ್ತು ರಾಜಕೀಯ ಲಾಭಕ್ಕಾಗಿ ದುರ್ಬಳಕೆಯಾಗಬಾರದು.



ಈ ಸಮೀಕ್ಷೆಯ ಮುಖ್ಯ ಗುರಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವುದಾಗಬೇಕಿದೆ. ನಿಜವಾಗಿಯೂ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳನ್ನು ವೈಜ್ಞಾನಿಕವಾಗಿ ಗುರುತಿಸಲು ಈ ಸಮೀಕ್ಷೆ ದಾರಿದೀಪವಾಗಬೇಕು. ಇದರಿಂದ ದೊರೆಯುವ ನಿಖರ ಮಾಹಿತಿಯ ಆಧಾರದ ಮೇಲೆ, ಅಗತ್ಯವಿರುವ ಸಮುದಾಯಗಳಿಗೆ ಮೀಸಲಾತಿ, ಶಿಕ್ಷಣ ಮತ್ತು ಕಲ್ಯಾಣ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಿಸಲು ಸಾಧ್ಯವಾಗುತ್ತದೆ. ಇದು ಕೇವಲ ಜಾತಿಗಳ ಸಂಖ್ಯೆಯ ಲೆಕ್ಕಾಚಾರವಾಗದೆ, ಬಡತನ, ಅವಕಾಶಗಳ ಕೊರತೆ ಮತ್ತು ಅಸಮಾನತೆಯ ನಿಜವಾದ ಚಿತ್ರಣವನ್ನು ನೀಡಬೇಕು.

ಸಮೀಕ್ಷೆಯು ಪೂರ್ಣಗೊಂಡ ನಂತರ, ಸರ್ಕಾರವು ವರದಿಯನ್ನು ಶೀಘ್ರವಾಗಿ ಬಿಡುಗಡೆ ಮಾಡಿ, ಅದನ್ನು ಜನಸಾಮಾನ್ಯರ ಪರವಾದ ಉತ್ತಮ ನೀತಿಗಳನ್ನು ರೂಪಿಸಲು ಬಳಸಿಕೊಳ್ಳಬೇಕು. ಈ ಸಮೀಕ್ಷೆಯು ಕೇವಲ ಒಂದು ಆಡಳಿತಾತ್ಮಕ ಪ್ರಕ್ರಿಯೆಯಾಗಿ ಉಳಿಯದೆ, ರಾಜ್ಯದ ಸಾಮಾಜಿಕ–ಆರ್ಥಿಕ ಸುಧಾರಣೆಗೆ ಒಂದು ಐತಿಹಾಸಿಕ ಅಡಿಗಲ್ಲಾಗಬೇಕು. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ಆತಂಕವುಂಟು ಮಾಡಿದ ಮೈಸೂರಿನ ಘಟನೆ

ಮಾನ್ಯರೆ,

ಕಳೆದ ಕೆಲವು ದಿನಗಳ ಹಿಂದೆ ಮೈಸೂರು ಹೃದಯ ಭಾಗದಲ್ಲಿ ಎರಡು ದುರ್ಘಟನೆಗಳು ನಡೆದುಹೋಗಿವೆ. ಒಂದು ಪ್ರಕರಣದಲ್ಲಿ ವ್ಯಕ್ತಿಯೋರ್ವನನ್ನು ಹಾಡಹಗಲೇ ಕೊಚ್ಚಿ ಕೊಲೆಗೈಯ್ಯಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಚಿಕ್ಕ ಬಾಲಕಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಲಾಗಿದೆ. ಈ ಎರಡು ಪ್ರಕರಣಗಳಿಂದಾಗಿ ಜನತೆ ಬೆಚ್ಚಿ ಬಿದ್ದಿದ್ದು ಪೊಲೀಸರ ಕಾರ್ಯದಕ್ಷತೆಯನ್ನು ಪ್ರಶ್ನಿಸುವಂತಾಗಿದೆ.

ದಸರಾ ವಸ್ತುಪ್ರದರ್ಶನದಲ್ಲಿ ಬಲೂನ್ ಮತ್ತಿತರ ಆಟಿಕೆಗಳನ್ನು ಮಾರಲು ದೂರದ ಗುಲ್ಬರ್ಗಾದಿಂದ ಪೋಷಕರೊಂದಿಗೆ ಬಂದಿದ್ದ ಬಾಲಕಿ ಹೊತ್ತೊಯ್ದು ಅತ್ಯಾಚಾರವೆಸಗಿ ನಂತರ ಕೊಲೆಗೈದಿರುವ ಘಟನೆಯಂತೂ ಘನಘೋರ ಕೃತ್ಯವಾಗಿದ್ದು, ಈ ಘಟನೆಗೆ ಇಡೀ ರಾಜ್ಯದ ಜನ ಮಮ್ಮಲ ಮರುಗುತ್ತಿದ್ದಾರೆ.

ಈ ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿಯ ಹೆಡೆಮುರಿ ಕಟ್ಟಿರುವ ಪೊಲೀಸರು ಆರೋಪಿ ಬಂಧಿಸಿ, ಕರೆತರುವಾಗ ಪರಾರಿಯಾಗಲು ಯತ್ನಿಸಿದಾಗ ಆತನ ಕಾಲಿಗೆ ಗುಂಡು ಹಾರಿಸಿದ್ದಾರೆ. ಆದರೆ ಇದೇ ಗುಂಡನ್ನು ಕಾಲಿಗೆ ಗುರಿ ಇಡುವ ಬದಲು ತಲೆಗೆ ಇಟ್ಟಿದ್ದರೆ ಪೊಲೀಸರ ಕಾರ್ಯಕ್ಕೆ ಪ್ರಶಂಸೆಗಳ ಸುರಿಮಳೆಯೇ ಹರಿದು ಬರುತ್ತಿತ್ತು. ಇಂತಹ ದಕ್ಷತೆಯನ್ನು ಉತ್ತರಪ್ರದೇಶದಲ್ಲಿ ಮಾತ್ರ ನಾವು ಕಾಣಬಹುದಾಗಿದೆ. ಜನನಿಬಿಡ ಪ್ರದೇಶಗಳಲ್ಲೇ ಇಂತಹ ಹೇಯ ಕೃತ್ಯಗಳು ನಡೆಯುತ್ತಿರುವುದು ಒಂದೆಡೆಯಾದರೆ, ಮುಖ್ಯಮಂತ್ರಿಗಳ ತವರಿನಲ್ಲೇ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ನಾಗರಿಕರಲ್ಲಿ ಭಯದ ವಾತವರಣ ಮೂಡಿಸಿದೆ. **–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು,**

ಇದೆಂಥಾ ಹಸಿವಯ್ಯ?

ಮಾನ್ಯರೆ,

ಕಾಮದ ದಾಹ, ನೀರಿನ ದಾಹಕ್ಕಿಂತ ದೊಡ್ಡದೆ?
ಇಂದ್ರಿಯಗಳ ಹಸಿವು ಆಹಾರದ ಹಸಿವುಗಿಂತಲೇ?
ದಾಹವಾಯಿತೆಂದು ಕೊಚ್ಚೆ ನೀರು ಕುಡಿಯುವಿರಲ್ಲ,
ಹಸಿವಾಯಿತೆಂದು ಕೊಳೆತಿದ್ದನ್ನೂ ಬಿಡದೆ ತಿನ್ನುವಿರಲ್ಲ,
ಕಾಮಾಂಧರೇ ಅಜ್ಜಿ–ಹಸುಳೆ–ತರುಣಿ ವ್ಯತ್ಯಾಸವಿಲ್ಲವೇ?
ಕಾಮ ಕ್ಷಣಿಕ ಕಣೋ... ಪರಿಣಾಮ ದುರಂತವೋ..
ಮರೆಯುವಿರೇಕೆ ಕ್ರೂರ ಕಾಮುಕ ಮೃಗಗಳೇ......?
ಹೆತ್ತು–ಹೊತ್ತು–ಸಾಕಿದವಳು ಹೆಣ್ಣು ಹೆಣ್ಣೆಂಬುದನ್ನು!.

–ಮಿರ್ಲೆ ಚಂದ್ರಶೇಖರ, ಮೈಸೂರು.

ಶೋಷಿತ ಮಕ್ಕಳಿಗೆ ಕಲಾ ತರಬೇತಿ

ಮಾನ್ಯರೆ,

ಪರಿಶಿಷ್ಟ ವಿದ್ಯಾರ್ಥಿನಿಯರಿಗೆ ಕಲಾ ತರಬೇತಿ ವಿನೂತನ ಯೋಜನೆಯಲ್ಲಿ, ಶಾಸ್ತ್ರೀಯ ಸಂಗೀತದ ಜೊತೆಗೆ ಅಭಿನಯ, ನೃತ್ಯ, ಜಾನಪದ ಸಂಗೀತ ಮತ್ತು ವಿವಿಧ ಕಲಾ ಪ್ರಕಾರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತರಬೇತಿ ನೀಡುತ್ತಿರುವುದು ತುಂಬಾ ಶ್ಲಾಘನೀಯ.

ಸಂಗೀತ ಕಲಿಕೆಗೆ ಬೇಕಾಗುವ ಹಾರ್ಮೋನಿಯಂ, ತಬಲಾ, ಕೀ ಬೋರ್ಡ್ ಹಾಗೂ ಇತರೆ ಪರಿಕರಗಳನ್ನು ಉಚಿತವಾಗಿ ವಿದ್ಯಾರ್ಥಿನಿಯರಿಗೆ ನೀಡುತ್ತಿರುವುದು ಸ್ವಾಗತಾರ್ಹ. ನಮ್ಮನ್ನಾಳುವ ಯಾವುದೇ ಸರಕಾರಗಳಾಗಲಿ ದಲಿತರ ಅಭಿವೃದ್ಧಿಗೋಸ್ಕರ ಸೀಮಿತವಾಗಿರುವ ಎಸ್‌ಸಿ/ಎಸ್‌ಪಿ–ಟಿಎಸ್‌ಪಿ ಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳಿಗಾಗಲಿ ಅಥವಾ ಬೇರೆ ಯಾವುದೇ ರೀತಿಯ ಯೋಜನೆಗಳಿಗಾಗಲೀ ಉಪಯೋಗಿಸುವುದು ಸಮಂಜಸವಲ್ಲ. ಸಂಗೀತದಲ್ಲಿ ಆಸಕ್ತಿ ಇರುವ ಶೋಷಿತ ಮಕ್ಕಳಿಗೋಸ್ಕರ ಕಲಾ ತರಬೇತಿ ವಿನೂತನ ಯೋಜನೆ ರೂಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅಭಿನಂದನೆಗೆ ಅರ್ಹ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284


ಅರಿವು

ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು!

ಈ ಮೇಲಿನ ಮೌಲಿಕವಾದ ಮಾತನ್ನು ಹೇಳಿರುವವರು ರಾಷ್ಟ್ರಕವಿ ಕುವೆಂಪು ಅವರು. ಸಾಧನೆ ಮಾಡಲು ಹೊರಟ ವ್ಯಕ್ತಿಗೆ ಈ ಮಾತು ವೇದವಾಕ್ಯವೇ ಸರಿ. ಆರಂಭ ಶೂರತ್ವ ತೋರದೆ, ಗುರಿ ಸಾಧನೆ ಮಾಡುವತನಕ ವಿಚಲಿತರಾಗದೆ ಉತ್ಸಾಹವನ್ನು ಕಾಪಾಡಿಕೊಂಡದ್ದೇ ಆದಲ್ಲಿ ಯಶಸ್ಸು ಬೆನ್ನಟ್ಟಿ ಬರುತ್ತದೆ. ವ್ಯಕ್ತಿತ್ವ ವಿಕಸನದ ಉಪನ್ಯಾಸಗಳಲ್ಲಿ ಬಹು ಮುಖ್ಯವಾಗಿ ಈ ಕುರಿತು ಹೇಳಲಾಗುತ್ತದೆ. ಉತ್ಸಾಹ ಎಂಬುದು ಸಾಧಕರಿಗೆ ಬಹುಮುಖ್ಯವಾದ ಸಾಧನ. ಉತ್ಸಾಹ ಎಂಬುದು ಗಾಳಿಯಂತೆ. ನಾವು ಉಸಿರಾಡುವ ಗಾಳಿ ಕುರಿತಾಗಿ ಹೇಳುತ್ತಿಲ್ಲ, ಬದಲಿಗೆ ವಾಹನದ ಗಾಲಿಯಲ್ಲಿ ಇರುವ ಗಾಳಿಯ ಕುರಿತಾಗಿ ಹೇಳುತ್ತಿರುವುದು. ವಾಹನವೊಂದಕ್ಕೆ ಇಂಧನ ಇರದಿದ್ದರೂ ಇಳಿಜಾರಿನಲ್ಲಿ ಸುಲಭವಾಗಿ ಇಳಿದುಬಿಡಬಹುದು, ಆದರೆ ಆ ವಾಹನದ ಗಾಲಿಗೆ ಗಾಳಿಯೇ ಇಲ್ಲದಿದ್ದಲ್ಲಿ ಅದು ಇಳಿಜಾರಿನಲ್ಲಿಯೂ ಚಲಿಸಲು ಸಾಧ್ಯವಿಲ್ಲ. ಉತ್ಸಾಹ ಇದ್ದಲ್ಲಿ ಉಲ್ಲಾಸ, ಉಲ್ಲಾಸವಿದ್ದಲ್ಲಿ ಮಾಡುವ ಕೆಲಸಗಳೆಲ್ಲಾ ಸಲೀಸು, ಉತ್ಸಾಹವೇ ಇಲ್ಲದಿದ್ದಲ್ಲಿ ಕೆಲಸ ಸುಲಭವಾಗಿದ್ದರೂ ಮಾಡುವವರಿಗೆ ಅದೊಂದು ದುಸ್ತರದ ಕೆಲಸ.

ಅನೇಕ ಸಾಧಕರ ಜೀವನ ಚರಿತ್ರೆಯನ್ನು ತಿಳಿದಾಗ ಅವರಿಗಿದ್ದ ಉತ್ಸಾಹದ ಕುರಿತು ಅರಿವು ಮೂಡುತ್ತದೆ. ಅವರ ಬದುಕಿನಲ್ಲಿ ಅವರು ಇಷ್ಟಪಟ್ಟ ಕ್ಷೇತ್ರದ ಬಗ್ಗೆ ಉಸಿರು ಇರುವವರೆವಿಗೂ ಅವರಿಗೆ ಉತ್ಸಾಹ ಬತ್ತುತ್ತಿರಲಿಲ್ಲ.. ರಾಜಋಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಇಡೀ ಜಗತ್ತೇ ತಿರುಗಿ ನೋಡುವಂತೆ ಮಾಡಿದ್ದು ಅವರ ಉತ್ಸಾಹದಿಂದ. ಶತಾಯುಷಿ ಸರ್ ಎಂ.ವಿಶ್ವೇಶ್ವರಯ್ಯನವರು ಸಹ ತಮ್ಮ ಇಳಿವಯಸ್ಸಿನಲ್ಲಿಯೂ ತಮ್ಮ ವೃತ್ತಿಪ್ರೀತಿಯನ್ನು ಕಡಿಮೆ ಮಾಡಿಕೊಂಡಿರಲಿಲ್ಲ. ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಆಯುಷ್ಯದ ಅಂತಿಮ ದಿನದವರೆವಿಗೂ ಕ್ರಿಯಾಶೀಲರಾಗಿದ್ದು, ಉತ್ಸಾಹದ ಚಿಲುಮೆಯಾಗಿದ್ದರು. ಸರಸ್ವತಿ ಸಮ್ಮಾನ್ ಎಸ್.ಎಲ್.ಬೈರಪ್ಪ ಅವರು ಸಾಹಿತ್ಯ ರಚನೆಯಲ್ಲಿ ತಮ್ಮ ಕೊನೆಯ ದಿನಗಳವರೆವಿಗೂ ಉತ್ಸಾಹ ಕಡಿಮೆಮಾಡಿಕೊಂಡಿರಲಿಲ್ಲ. ಅವರ ಅಧ್ಯಯನಶೀಲತೆಯಿಂದ ಮೇರು ಕೃತಿಗಳನ್ನು ಅವರು ರಚಿಸಿದರು. ಇಂತಹ ಅನೇಕ ಮಹನೀಯರನ್ನು ಉತ್ಸಾಹಕ್ಕೆ ಉಲ್ಲೇಖಿಸಬಹುದು.

ಉತ್ಸಾಹದ ವಿಚಾರದಲ್ಲಿ ಪ್ರಾಣಿಪಕ್ಷಿಗಳು ಒಳ್ಳೆಯ ಜೀವನ ಪಾಠ ಕಲಿಸುತ್ತವೆ ಎಂಬುದಾಗಿ ಹೇಳಬಹುದು. ನಿತ್ಯವೂ ಹೊಸತನದಿಂದ ತಮ್ಮ ಬದುಕಿನ ಬಂಡಿ ದೂಡಲು ಪ್ರಯತ್ನ ಮಾಡುತ್ತಲೇ ಇರುತ್ತವೆ. ಅವುಗಳಲ್ಲಿ ಋಣಾತ್ಮಕ ಭಾವನೆಗಳನ್ನು ಕಾಣುವುದು ಅಪರೂಪ. ಬಹುಮುಖ್ಯವಾಗಿ ಅವುಗಳು ತಮ್ಮ ಬದುಕನ್ನು ಪ್ರೀತಿಸುತ್ತವೆ. ಆ ಬದುಕಿನ ಪ್ರೀತಿಯೇ ಉತ್ಸಾಹ ತುಂಬುತ್ತದೆ. ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು, ಹಸಿರು ಮೂಡೀತು ಹೇಗೆ ಎಂದು ಮತ್ತೊಬ್ಬರು ರಾಷ್ಟ್ರಕವಿಗಳಾದ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ. ಪ್ರೀತಿ ತೋರಲು ಉತ್ಸಾಹವೇ ಅಗತ್ಯವಲ್ಲವೇ?



> “ ರಣರಂಗದಲ್ಲಿ ಯುದ್ಧ ಗೆಲ್ಲಲು ಯುದ್ಧೋಪಕರಣಗಳಷ್ಟೇ ಉತ್ಸಾಹವು ಮುಖ್ಯ. ಆ ಕಾರಣಕ್ಕೆ ರಣೋತ್ಸಾಹ ಎಂಬ ಪದ ಹುಟ್ಟಿದೆ. ಉತ್ಸಾಹವಿಲ್ಲದಿದ್ದರೆ ಶೂರನೂ ಸೋಲಿಗೆ ಶರಣಾಗಿಬಿಡುತ್ತಾನೆ. ಹಾಗೆಯೇ ಬದುಕೆಂಬ ಯುದ್ಧವನ್ನು ಗೆಲ್ಲಲು ಉತ್ಸಾಹವೇ ಮುಖ್ಯ. ಎಷ್ಟೋ ಜನ ಬೆಳಗ್ಗೆ ಎದ್ದಾಗಲೇ ಋಣಾತ್ಮಕ ಆಲೋಚನೆಗಳು ಹಾಗೂ ಅಭ್ಯಾಸಗಳಿಂದ ಪ್ರಾರಂಭಿಸಿ ಇಡೀ ದಿನ ನರಕ ಯಾತನೆ ಮಾಡಿಕೊಳ್ಳುತ್ತಾರೆ. ಎಲ್ಲವೂ ಇದ್ದರೂ ಏನು ಇಲ್ಲದವರ ಹಾಗೆ ಅವಕಾಶಗಳನ್ನು ಕೈಚೆಲ್ಲಿ, ಸೋತು ಸುಣ್ಣವಾಗಿ ನನ್ನ ಅದೃಷ್ಟ ಸರಿಯಿಲ್ಲ ಎಂದು ಸ್ವಯಂ ಕನಿಕರ ತೋರಿಕೊಂಡು ಬದುಕನ್ನು ಯಮಯಾತನೆ ಮಾಡಿಕೊಳುತ್ತಾರೆ. ಅವರೊಟ್ಟಿಗೆ ಇರುವವರಿಗೂ ಸಹ ಇದರಿಂದ ಕೆಟ್ಟ ಪ್ರಭಾವ ಬೀರಿ ಅವರನ್ನು ಸಹ ಕಷ್ಟಕ್ಕೆ ದೂಡುತ್ತಾರೆ, ಅವರಿಗಿರುವ ಉತ್ಸಾಹ ಕುಂದಿಸಿಬಿಡುತ್ತಾರೆ.

ರಣರಂಗದಲ್ಲಿ ಯುದ್ಧ ಗೆಲ್ಲಲು ಯುದ್ಧೋಪಕರಣಗಳಷ್ಟೇ ಉತ್ಸಾಹವು ಮುಖ್ಯ. ಆ ಕಾರಣಕ್ಕೆ ರಣೋತ್ಸಾಹ ಎಂಬ ಪದ ಹುಟ್ಟಿದೆ. ಉತ್ಸಾಹವಿಲ್ಲದಿದ್ದರೆ ಶೂರನೂ ಸಹ ಸೋಲಿಗೆ ಶರಣಾಗಿಬಿಡುತ್ತಾನೆ. ಹಾಗೆಯೇ ಬದುಕೆಂಬ ಯುದ್ಧವನ್ನು ಗೆಲ್ಲಲು ಸಹ ಉತ್ಸಾಹವೇ ಮುಖ್ಯ. ಎಷ್ಟೋ ಜನ ಬೆಳಗ್ಗೆ ಎದ್ದಾಗಲೇ ಋಣಾತ್ಮಕ ಆಲೋಚನೆಗಳು ಹಾಗೂ ಅಭ್ಯಾಸಗಳಿಂದ ಪ್ರಾರಂಭಿಸಿ ಇಡೀ ದಿನವನ್ನು ನರಕಯಾತನೆ ಮಾಡಿಕೊಳ್ಳುತ್ತಾರೆ. ಎಲ್ಲವೂ ಇದ್ದರೂ ಏನು ಇಲ್ಲದವರ ಹಾಗೆ ಅವಕಾಶಗಳನ್ನು ಕೈಚೆಲ್ಲಿ, ಸೋತು ಸುಣ್ಣವಾಗಿ ನನ್ನ ಅದೃಷ್ಟ ಸರಿಯಿಲ್ಲ ಎಂದು ಸ್ವಯಂ ಕನಿಕರ ತೋರಿಕೊಂಡು ಬದುಕನ್ನು ಯಮಯಾತನೆ ಮಾಡಿಕೊಳ್ಳುತ್ತಾರೆ. ಅವರೊಟ್ಟಿಗೆ ಇರುವವರಿಗೂ ಇದರಿಂದ ಕೆಟ್ಟ ಪ್ರಭಾವ ಬೀರಿ ಅವರನ್ನು ಸಹ ಕಷ್ಟಕ್ಕೆ ದೂಡುತ್ತಾರೆ, ಅವರಿಗಿರುವ ಉತ್ಸಾಹ ಕುಂದಿಸಿಬಿಡುತ್ತಾರೆ.

ಈ ಭೂಮಿಯಲ್ಲಿ ನಮ್ಮ ಬದುಕನ್ನು ಸುಂದರ ಮಾಡಲು, ಅರ್ಥಪೂರ್ಣವಾಗಿಸಲು, ಸಾರ್ಥಕವಾಗಿಸಲು ಹಲವು ಅವಕಾಶಗಳು ಇರುತ್ತವೆ. ಅವುಗಳನ್ನು ಸ್ವೀಕರಿಸಿ ಮುನ್ನಡೆಯುವುದು ಜಾಣತನ. ಜೀವನೋತ್ಸಾಹವೇ ಇಲ್ಲದಿದ್ದರೆ ಮನುಷ್ಯನಿಗೆ ಏನಿದ್ದರೂ ಅದು ವ್ಯರ್ಥವೇ? ಸುಂದರ ಬದುಕು ಶ್ರೀಮಂತರ ಸ್ವತ್ತಲ್ಲ. ಎಷ್ಟೋ ಜನ ಶ್ರೀಮಂತರಿಗೆ ಸಕಲ ಸವಲತ್ತು ಇದ್ದರೂ ಸಹ ತಮ್ಮ ಬದುಕನ್ನು ಉತ್ಸಾಹದಿಂದ ಕಳೆಯುವುದಿಲ್ಲ. ಹಾಗೆಯೇ ಅನೇಕ ಬಡವರಿಗೆ ಅನೇಕ ಕೊರತೆಗಳಿದ್ದರೂ ಸಹ ಜೀವನೋತ್ಸಾಹದಿಂದ ಬದುಕನ್ನು ಸುಂದರಗೊಳಿಸಿಕೊಳ್ಳುತ್ತಾರೆ. ತಮ್ಮ ಕೈಗೆ ಸಿಕ್ಕ ಅವಕಾಶಗಳನ್ನು ಮೈಮರೆತು ಅನುಭವಿಸಿಬಿಡುವ ತೀರದ ಉತ್ಸಾಹ ಅವರಲ್ಲಿರುತ್ತದೆ. ಅದು ಊಟವೇ ಆಗಿರಲಿ, ಸಿನೆಮಾವೇ ಆಗಿರಲಿ ತಮ್ಮ ಮೈಮನಗಳನ್ನು ಅಲ್ಲಿ ತೊಡಗಿಸಿ, ಉತ್ಸಾಹ ಹಾಗೂ ಉಲ್ಲಾಸದಿಂದ ಆನಂದಿಸಿಬಿಡುತ್ತಾರೆ.

ತ್ರಿವೇಣಿಯವರ ತುಂಬಿದ ಕೊಡ ಕಥೆಯು ಇಲ್ಲಿ ಉಲ್ಲೇಖನೀಯ. ಶ್ರೀಮಂತರ ಮನೆಯ ಆವರಣದಲ್ಲಿಯೇ ಆ ಮನೆಯ ಕೆಲಸದ ಆಳಿನ ಕುಟುಂಬ ಒಂದು ಸಣ್ಣ ಜೋಪಡಿಯಲ್ಲಿ ವಾಸಿಸುತ್ತಿರುತ್ತದೆ. ಒಮ್ಮೆ ಸಿನೆಮಾ ನೋಡಲು ಆ ಮನೆಯ ಒಡೆಯನ ಕುಟುಂಬವು ತೆರಳಿದ್ದಾಗ, ಅದೇ ಸಿನೆಮಾ ಮಂದಿರದಲ್ಲಿ ಅವರು ಬಾಲ್ಕನಿಯಲ್ಲಿ ಆಸೀನರಾಗಿದ್ದರೆ, ಆ ಮನೆಯ ಆಳಿನ ಕುಟುಂಬ ಮೂರನೇ ದರ್ಜೆಯಲ್ಲಿ ಕುಳಿತಿರುತ್ತಾರೆ. ಇಡೀ ಸಿನೆಮಾವನ್ನು ಆ ಆಳಿನ ಕುಟುಂಬವು ನೈಜ ಕಥೆ ಹಾಗೂ ಸನ್ನಿವೇಶಗಳೆಂದು ಭಾವಿಸಿ, ಅಲ್ಲಿನ ದೃಶ್ಯಗಳಿಗೆ ಪ್ರತಿಸ್ಪಂದನೆಯಿಂದ ಖುಷಿ ಪಡುತ್ತಿರುತ್ತಾರೆ. ಅಲ್ಲಿ ಹಾವು ಕಾಣಿಸಿಕೊಂಡಾಗ ಶ್ರೀಮಂತರ ಕುಟುಂಬವು ಅದನ್ನು ರಬ್ಬರ್ ಹಾವು ಎಂದು ಪರಿಭಾವಿಸಿ ನಿರ್ಲಕ್ಷದಿಂದ ವೀಕ್ಷಿಸಿದರೆ, ಆ ಬಡಕುಟುಂಬ ಅದೊಂದು ನಿಜವಾದ ಹಾವು ಎಂದೇ ಪರಿಗಣಿಸಿ ಸಿನೆಮಾವನ್ನು ಬಿಟ್ಟ ಕಣ್ಣಿನಿಂದ ನೋಡಿ ಆನಂದಿಸುತ್ತದೆ. ಅಂದರೆ ಶ್ರೀಮಂತರ ಕುಟುಂಬವು ಎಲ್ಲವನ್ನೂ ತರ್ಕ, ಜ್ಞಾನ, ಬುದ್ಧಿವಂತಿಕೆಯನ್ನು ಬಳಸಿ ನೋಡಿದ ಕಾರಣ ಅವರಿಗೆ ಸಿನೆಮಾ ಅಷ್ಟೊಂದು ರುಚಿಸುವುದಿಲ್ಲ. ಇದು ಇಂದು ಅನೇಕರ ಸಮಸ್ಯೆಯಾಗಿದೆ. ಅನೇಕ ಸಲ ಬುದ್ಧಿವಂತಿಕೆಯೇ ಉತ್ಸಾಹವನ್ನು ಕುಂದಿಸಿಬಿಡುತ್ತದೆ. ಅದರಲ್ಲೇನಿದೆ? ಬಿಡು ಎಂದು ನಿರುತ್ಸಾಹವನ್ನು ತೋರಿ ಆನಂದಿಸುವ ಒಳ್ಳೆಯ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ.

ಅನೇಕರಿಗೆ ಪ್ರವಾಸಿ ಸ್ಥಳಗಳನ್ನು ಆನಂದಿಸಲು ವಿದೇಶಕ್ಕೆ ಹೋಗಬೇಕು ಎಂಬ ತಪ್ಪು ಕಲ್ಪನೆಯಿದೆ. ನಮ್ಮದೇ ಊರಿನ ಕೆರೆ, ನಮ್ಮ ಜಿಲ್ಲೆಯ ನದಿಗಳು, ನಮ್ಮ ರಾಜ್ಯದ ಸಮುದ್ರಗಳು, ಅರಮನೆಗಳು, ಕೋಟೆ ಕೊತ್ತಲೆಗಳು, ಗುಡಿ ಗೋಪುರಗಳು, ನಿಸರ್ಗ ತಾಣಗಳು ನಿಜಕ್ಕೂ ರಮಣೀಯವಾಗಿರುತ್ತವೆ. ಅದಕ್ಕೆ ಆಸ್ವಾದಿಸುವ ಉತ್ಸಾಹ ಇರಬೇಕು ಅಷ್ಟೆ. ನಿಮಗೆ ಆಸ್ವಾದಿಸುವ ಉತ್ಸಾಹ ಇಲ್ಲದೇ ಹೋದಲ್ಲಿ ಸ್ವಿಡ್ಜರ್‌ಲ್ಯಾಂಡ್‌ಗೆ ಹೋದರೂ ಅಷ್ಟೆ, ಚಿಕ್ಕಮಗಳೂರಿಗೆ ಹೋದರೂ ಅಷ್ಟೆ. ನಾನು ತಲುಪುವ ಗಮ್ಯ ಸ್ಥಳಗಳಿಗಿಂತ, ಕ್ರಮಿಸುವ ಪಯಣ ದಲ್ಲಿ ಒಂದು ಆನಂದ ಇರುತ್ತದೆ. ಅದನ್ನು ಎಷ್ಟೋ ಮಂದಿ ಅನುಭವಿಸುವುದೇ ಇಲ್ಲ. ಆನಂದ ಅನುಭವಿಸುವುದೂ ಸಹ ಒಂದು ಕಲೆ. ಅದು ಎಲ್ಲರಲ್ಲೂ ಇಲ್ಲದೇ ಇರುವುದು ದುರದೃಷ್ಟಕರ.

ಉತ್ಸಾಹಕ್ಕೂ ಹಣಕ್ಕೂ ಕೆಲವರು ತಾಳೆ ಹಾಕುತ್ತಾರೆ. ಹಣ ಸಿಗುವ ವಿಚಾರದಲ್ಲಿ ಒಂದು ಅಮಿತವಾದ ಉತ್ಸಾಹವಿರುತ್ತದೆ. ಹೌದು, ನಿಜ. ಬದುಕಿನ ಬಂಡಿಗೆ ಹಣವೇ ಇಂಧನ. ಆದರೆ ಹಣವೇ ಉತ್ಸಾಹ ಮೂಲ ಎನ್ನಲಾಗದು. ಹಣವು ಇರುವ ಉತ್ಸಾಹವನ್ನು ಇಮ್ಮಡಿಗೊಳಿಸಬಹುದು. ಬದುಕನ್ನು ರಸಮಯವಾಗಿಸುವುದು, ನೀರಸಮಯವಾಗಿಸುವುದು ಅವರವರ ವಿವೇಚನೆಗೆ ಬಿಟ್ಟದ್ದು. ಎಷ್ಟೋ ಮಂದಿ ಹಣವಂತರ ಬಳಿ ಕೊರತೆಗಳ ಪಟ್ಟಿಯೇ ಇರುತ್ತದೆ. ಎಷ್ಟೋ ಜನ ಕೊರತೆ ಇರುವವರ ಬಳಿ ಬತ್ತದ ಉತ್ಸಾಹದ ಒರತೆ ಇರುತ್ತದೆ. ಬದುಕನ್ನು ನಾವು ನೋಡುವ ದೃಷ್ಟಿಕೋನದಿಂದ ಅದು ಲಭಿಸುತ್ತದೆ.

ಅನೇಕರು ಪ್ರವಾಸವನ್ನು ಸಹ ಲಾಭನಷ್ಟದ ಮಾನದಂಡದಿಂದ ಅಳೆಯುತ್ತಾರೆ. ಪ್ರವಾಸದಿಂದ ಏನು ಲಾಭ ಎಂದು ಕೇಳುತ್ತಾರೆ. ಮನುಷ್ಯನಿಗೆ ಆಹಾರದಷ್ಟೇ ವಿಹಾರವೂ ಮುಖ್ಯ. ಎಷ್ಟೋ ಜನರಿಗೆ ಅದರ ಅರಿವೇ ಆಗಿರುವುದಿಲ್ಲ. ದೈಹಿಕ ಆರೋಗ್ಯಕ್ಕಾಗಿ ಒಳ್ಳೆಯ ಊಟ–ತಿಂಡಿ ಬೇಕು. ಮಾನಸಿಕ ಆರೋಗ್ಯವನ್ನು ಸಮತೋಲನಗೊಳಿಸಲು ಪ್ರವಾಸ ಇತ್ಯಾದಿ ಬೇಕು. ಮನುಷ್ಯ ಸದಾ ವ್ಯವಹಾರಿಕವಾಗಿಯೇ ಇದ್ದರೆ ಹುಚ್ಚನಾಗಿಬಿಡುತ್ತಾನೆ. ಸದಾ ಅರ್ಥದ(ಹಣ) ಕುರಿತಾಗಿಯೇ ಚಿಂತನೆ ನಡೆಸುತ್ತಾ ಇದ್ದರೆ, ಅವನ ಬದುಕಿಗೆ ಅರ್ಥವೇ ಇರುವುದಿಲ್ಲ. ಪ್ರಕೃತಿ ವೀಕ್ಷಣೆಯಿಂದ ಸಿಗುವ ಲಾಭಗಳನ್ನು ಹಣದಿಂದ ಯಾವುದೇ ಕಾರಣಕ್ಕೂ ಅಳೆಯಲು ಸಾಧ್ಯವಿಲ್ಲ.

ಇಂದು ಅನೇಕ ಸಂಘ ಸಂಸ್ಥೆಗಳಲ್ಲಿ ಆಯೋಜಿಸುವ ಸಭೆ, ಸಮಾರಂಭಗಳು, ಅಷ್ಟೇ ಏಕೆ ಕುಟುಂಬಗಳಲ್ಲಿ ಏರ್ಪಡಿಸುವ ಹುಟ್ಟುಹಬ್ಬ, ಮದುವೆ, ವಾರ್ಷಿಕೋತ್ಸವ ಇತ್ಯಾದಿಗಳು ಬಹಳ ಯಾಂತ್ರಿಕವಾಗಿ ನಡೆಯುತ್ತವೆ. ಬಂಧು, ಬಳಗ, ಸ್ನೇಹಿತರು ದೈಹಿಕವಾಗಿ ಭಾಗವಹಿಸಿದ್ದರೂ ಮಾನಸಿಕವಾಗಿ ದೂರ ಉಳಿದಿರುತ್ತಾರೆ. ಮೊಬೈಲ್ ಎಂಬ ಒಂದು ಪುಟ್ಟ ಸಾಧನವು ಇಡೀ ಕಾರ್ಯಕ್ರಮದ ಸವಿಯನ್ನು ಕಡಿಮೆ ಮಾಡಿಬಿಡುತ್ತದೆ. ಎಷ್ಟೋ ಕಾರ್ಯಕ್ರಮಗಳು ಉತ್ಸಾಹ, ಉಲ್ಲಾಸವಿಲ್ಲದೆ ನೀರಸವಾಗಿಬಿಡುತ್ತವೆ. ಆಯೋಜಕರು ಅಷ್ಟೇ, ನೈಜ ಕಾಳಜಿ, ಸತ್ಕಾರದ ಬದಲು ತೋರಿಕೆಗಾಗಿ ಅನೇಕ ರೀತಿಯ ಸರ್ಕಸ್ ಮಾಡುತ್ತಿರುತ್ತಾರೆ. ಕಾರ್ಯಕ್ರಮ ಎಷ್ಟೇ ಶ್ರೀಮಂತವಾಗಿದ್ದರೂ, ಉತ್ಸಾಹ ಒಂದಿಲ್ಲ ಎಂದರೆ ಅದು ಬಡವಾಗಿಬಿಡುತ್ತದೆ.

ನಮ್ಮ ಕೈಯಲ್ಲಿ ಇರದೇ ಇರುವ ಸಂಗತಿಗಳಿಗಾಗಿ ಕೊರಗುತ್ತಾ ಕೂರುವ ಬದಲು, ಇರುವ ಸಂಗತಿಗಳನ್ನು ಉತ್ಸಾಹದಿಂದ ಅನುಭವಿಸಿ ಆನಂದಿಸುವುದು ಜಾಣತನ. ಪಾಲಿಗೆ ಬಂದದ್ದು ಪಂಚಾಮೃತ ಎಂದು ಭಾವಿಸಿದರೆ ಬದುಕು ರಸಮಯವಾಗಿರುತ್ತದೆ. ನನ್ನ ಪಾಲಿಗೆ ಇದೇ ಬೇಕು ಎಂದರೆ ಅಲ್ಲಿ ರಸ ಮಾಯವಾಗಿರುತ್ತದೆ. ಇರುವ ಭಾಗ್ಯವ ನೆನೆದು, ಬಾರೆನೆಂಬುದನ್ನು ಬಿಡು ಹರುಷಕ್ಕಿದೆ ದಾರಿ ಎಂಬ ಡಿ.ವಿ.ಜಿ.ಯವರ ಈ ಮಾತನ್ನು ನೆನೆದು ಉತ್ಸಾಹದಿಂದ ಬದುಕನ್ನು ನಡೆಸುವ ಮನೋಭಾವ ಎಲ್ಲರದ್ದಾಗಿರಲಿ. ಉತ್ಸಾಹವನ್ನು ಬದುಕಿನ ಕೊನೆಯ ದಿನದವರೆವಿಗೂ ಕಾಪಾಡಿಕೊಂಡರೆ ಈ ಭೂಮಿ ಸ್ವರ್ಗ ಸದೃಶ ಎನಿಸಿಬಿಡುತ್ತದೆ.

ಹೂರಣ: **ಉತ್ಸಾಹವಿದ್ದರೆ ಯಾವುದೇ ಕೆಲಸ ಕಷ್ಟಸಾಧ್ಯವಲ್ಲ, ಇಷ್ಟಸಾಧ್ಯವಾಗುತ್ತದೆ.**

ವರ್ಣರಂಜಿತ ದಸರಾ ದೀಪಾಲಂಕಾರಕ್ಕೆ ತೆರೆ

- ಈ ಬಾರಿ ಕೊಲ್ಕೊತ್ತಾ ಲೈಟಿಂಗ್ ಮೆರುಗು
- ಲಕ್ಷಾಂತರ ಪ್ರವಾಸಿಗರಿಂದ ವೀಕ್ಷಣೆ
- ಮುಖ್ಯ ಕಾರ್ಯದರ್ಶಿಗಳಿಂದಲೂ ಮೆಚ್ಚುಗೆ
- ಡ್ರೋನ್ ಶೋ ಗಿನ್ನಿಸ್ ದಾಖಲೆ



ಮೈಸೂರು, ಅ.12(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಆಕರ್ಷಣೆಯನ್ನು ಹೆಚ್ಚಿಸಿ, ಅಸಂಖ್ಯಾತ ಜನರ ಕಣ್ಮನಗಳನ್ನು ಸೆಳೆದ ವಿದ್ಯುತ್ ದೀಪಾಲಂಕಾರಕ್ಕೆ ಭಾನುವಾರ ಅದ್ಧೂರಿ ತೆರೆಬಿದ್ದಿತು.

ವಿಶ್ವವಿಖ್ಯಾತ ದಸರಾ ಮಹೋತ್ಸವ ಆರಂಭಗೊಂಡ ಸೆ.22ರಿಂದ ಒಟ್ಟು 21 ದಿನಗಳವರೆಗೂ ಮೈಸೂರು ಮಾತ್ರವಲ್ಲದೇ ದೇಶ–ವಿದೇಶಗಳಿಂದ ಬಂದಿದ್ದ ಲಕ್ಷಾಂತರ ಪ್ರವಾಸಿಗರನ್ನು ಈ ಬಾರಿಯ ದಸರಾ ವಿದ್ಯುತ್ ದೀಪಾಲಂಕಾರ ಆಕರ್ಷಿಸಿತ್ತು. ಪ್ರತಿಬಾರಿಯಂತೆ ಈ ವರ್ಷವೂ ದೀಪಾಲಂಕಾರದ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಗಮಿತ(ಸೆಸ್ಕ್) ಹಿಂದಿನ ವರ್ಷಕ್ಕಿಂತಲ್ಲೂ ಅತ್ಯಂತ ಆಕರ್ಷಣೀಯವಾಗಿ ದೀಪಾಲಂಕಾರವನ್ನು ಮಾಡುವಲ್ಲಿ ಯಶಸ್ವಿಯಾಗಿತ್ತು.

136 ಕಿಮೀ ದೀಪಾಲಂಕಾರ: ದಸರಾ ಹಿನ್ನೆಲೆಯಲ್ಲಿ ಈ ಬಾರಿ ನಗರದ 136 ಕಿ.ಮೀ ವ್ಯಾಪ್ತಿಯ ರಸ್ತೆಗಳು ಹಾಗೂ 118 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗಿತ್ತು. ಇದರೊಂದಿಗೆ ನಗರದ ಪ್ರಮುಖ ಕಡೆ ಗಳಲ್ಲಿ ಎಲ್ಇಡಿ ಬಲ್ಬ್‌ಗಳಿಂದ ನಿರ್ಮಿಸಲಾದ 80 ವಿವಿಧ ಪ್ರತಿಕೃತಿಗಳು ದೀಪಾಲಂಕಾರದ ಅಂದ ವನ್ನು ಹೆಚ್ಚು ಮಾಡುವು ದರ ಜತೆಗೆ ನೋಡುಗ ರನ್ನು ಆಕರ್ಷಿಸಿತ್ತು. ಸೆ.22ರಂದು ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹಸಿರು ಚಪ್ಪರದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಅವರು ದೀಪಾಲಂಕಾರಕ್ಕೆ ವಿಧ್ಯುಕ್ತ ಚಾಲನೆಯನ್ನು ನೀಡಿದ್ದರು.

ಕೊಲ್ಕತ್ತಾ ಲೈಟಿಂಗ್ ಮೆರುಗು: ದೀಪಾಲಂಕಾರದ ಆಕರ್ಷಣೆ ಹೆಚ್ಚಿಸುವ ಸಲುವಾಗಿ ಸೆಸ್ಕ್ ವತಿಯಿಂದ ಈ ಬಾರಿ ಸಾಕಷ್ಟು ಹೊಸತನದ ಪ್ರಯತ್ನಗಳನ್ನು ಮಾಡಲಾಗಿತ್ತು. ಅದರಂತೆ ಈ ಬಾರಿ ಕೊಲ್ಕತ್ತಾ ಮಾದರಿ ಲೈಟಿಂಗ್‌ಗಳನ್ನು ನಗರದ ಹಲವು ಕಡೆಗಳಲ್ಲಿ ಅಳವಡಿಸಲಾಗಿತ್ತು. ಇದರಿಂದಾಗಿ ನಗರದ ಹಲವು ಕಡೆಗಳಲ್ಲಿ ಬಣ್ಣ ಬಣ್ಣದ ದೀಪಗಳಿಂದ ಅಲಂಕೃತಗೊಂಡಿದ್ದ ರಸ್ತೆ ಹಾಗೂ ವೃತ್ತಗಳು ದಸರಾ ವಿದ್ಯುತ್ ದೀಪಾಲಂಕಾರದ ಮೆರುಗು ಹೆಚ್ಚಿಸಿತ್ತು.

ದೀಪಾಲಂಕಾರ ವೀಕ್ಷಿಸಿದ ಸಿಎಂ: ಸ್ಥಳೀಯರು, ಪ್ರವಾಸಿಗರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ಈ ಬಾರಿಯ ದಸರಾ ದೀಪಾಲಂಕಾರವನ್ನು ವೀಕ್ಷಿಸಿದರು. ಅಂಬಾರಿ ಬಸ್ಸಿನ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಮುಖ್ಯಮಂತ್ರಿಗಳು ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡರು. ಆ ಮೂಲಕವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಗಮಿತದ ಪ್ರಯತ್ನಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.



ಡ್ರೋನ್ ಶೋ ಗಿನ್ನಿಸ್ ದಾಖಲೆ: ದಸರಾ ದೀಪಾಲಂಕಾರದ ಒಂದು ಭಾಗವಾಗಿದ್ದ ಡ್ರೋನ್ ಪ್ರದರ್ಶನದ ಮೂಲಕ ಸೆಸ್ಕ್ ಈ ಬಾರಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿತ್ತು. ನಾಲ್ಕು ದಿನಗಳು ನಡೆದ ಡ್ರೋನ್ ಪ್ರದರ್ಶನದಲ್ಲಿ ಮೂಡಿದ ಆಕರ್ಷಕ ಕಲಾಕೃತಿಗಳು ಪ್ರೇಕ್ಷಕರಿಂದ ಭಾರೀ ಮೆಚ್ಚುಗೆ ಪಡೆದಿತ್ತು.

ಮುಖ್ಯ ಕಾರ್ಯದರ್ಶಿಗಳ ಮೆಚ್ಚುಗೆ

ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರದಲ್ಲಿ ಮಾಡಲಾಗಿದ್ದ ವಿದ್ಯುತ್ ದೀಪಾಲಂಕಾರಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ದಸರಾ ಮಹೋತ್ಸವವನ್ನು ಯಾವುದೇ ಅಡಚಣೆಯಿಲ್ಲದೆ ನಡೆಸುವಲ್ಲಿ ಮೈಸೂರು ಜಿಲ್ಲಾಡಳಿತ ಒಗ್ಗೂಡಿದ ಶಕ್ತಿ ನಿಷ್ಠೆ ಮತ್ತು ವೃತ್ತಿಪರತೆಯನ್ನು ಮತ್ತೊಮ್ಮೆ ಪ್ರಪಂಚದ ಮುಂದೆ ಪ್ರದರ್ಶಿಸಿದೆ. ದಸರಾ ಸಂದರ್ಭದಲ್ಲಿ ನಗರದಾದ್ಯಂತ ಅದ್ಭುತ ಬೆಳಕು ಪ್ರದರ್ಶನವನ್ನು ನೀಡುವುದರ 3000 ಡ್ರೋನ್‌ಗಳ ಪ್ರದರ್ಶನವನ್ನು ಆಯೋಜಿಸಿದ್ದ ಅದ್ಭುತವಾದ ಕೊಡುಗೆಯಾಗಿದೆ. ತಾಂತ್ರಿಕತೆಯ ಜತೆಗೆ ಸಂಪ್ರದಾಯವನ್ನು ಸುಂದರವಾಗಿ ಮೇಳೈಸಿದ ಈ ಸಿಂಕ್ರೊನೈಸ್ಡ್ ಡ್ರೋನ್ ಶೋಗೆ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಲಭಿಸಿರುವುದು ಅತ್ಯಂತ ಗಮನಾರ್ಹ ಸಾಧನೆಯಾಗಿದೆ ಆದ್ದರಿಂದ ದಸರಾ 2025ರ ಯಶಸ್ಸಿಗೆ ಕಾರಣರಾದ ನಿಮ್ಮ ಕರ್ತವ್ಯ ನಿಷ್ಠೆಗೆ ಅಭಿನಂದನೆಗಳನ್ನು ಸಲ್ಲಿಸಿ ಡಾ. ಶಾಲಿನಿ ರಜನೀಶ್ ಅವರು ಚಾವಿಸನಿನಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು ಅವರಿಗೆ ಬರೆದಿರುವ ಪ್ರಶಂಸನಾ ಪತ್ರದಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶಾಸ್ತ್ರೀಯ ಭರತ ನಾಟ್ಯ ಪ್ರದರ್ಶನ



ಚಿದಂಬರನಟೇಶ ನಾಟ್ಯ ಶಾಲೆ ವಿದ್ಯಾರ್ಥಿಗಳ ಶಾಸ್ತ್ರೀಯ ಭರತನಾಟ್ಯ ಪ್ರದರ್ಶನ

ಮೈಸೂರು, ಅ.12(ವಿವಿಹೆಚ್)– ಚಿದಂಬರನಟೇಶ ನಾಟ್ಯ ಶಾಲೆ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ ಮೈಸೂರಿನ ಕಲಾ ಮಂದಿರದ ಆವರಣದಲ್ಲಿರುವ ಕಿರು ರಂಗ ಮಂದಿರದಲ್ಲಿ ಭಾನುವಾರ ನೃತ್ಯ ಆರಾಧನಾ 2025–26 ಶಾಸ್ತ್ರೀಯ ಭರತನಾಟ್ಯ ಮತ್ತು ಹಿರಿಯ ಕಲಾವಿದರಿಗೆ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಚಿದಂಬರ ನಟೇಶ ನಾಟ್ಯ ಶಾಲೆ ವಿದ್ಯಾರ್ಥಿಗಳ ಶಾಸ್ತ್ರೀಯ ಭರತನಾಟ್ಯ ಪ್ರದರ್ಶನ ನೋಡುಗರ ಮನ ಸೂರೆಗೊಂಡಿತು. ಇದೇ ವೇಳೆ ಪಿಟೀಲು ವಾದಕ ವಿದ್ವಾನ್ ಆರ್.ಶ್ರೀಕಾಂತ್ ಅವರನ್ನು ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಭರತ ಎಂಬ ಪದವು ಭಾವ, ರಾಗ, ತಾಳ ಎಂಬ ಮೂರು ಅಂಶಗಳನ್ನು ಸೂಚಿಸುತ್ತದೆ. ನಾಟ್ಯದ ಮೂಲಕ ಅನಾವರಣಗೊಳ್ಳುತ್ತಿದೆ, ಕರ್ನಾಟಕ ಸಂಗೀತದ ಮೇಲೆ ಭರತನಾಟ್ಯ ಪ್ರದರ್ಶನಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಭರತನಾಟ್ಯ ಕೇವಲ ನೃತ್ಯವಲ್ಲ, ಅದು ಭಕ್ತಿ, ಕಲಾತ್ಮಕ ಕೌಸಲ್ಯ, ಧ್ಯಾನದ ಒಂದು ರೂಪ, ಆಂಗೀಕ ಅಭಿನಯ. ಪ್ರಾಚೀನ ಕಾಲದಲ್ಲಿ ದೇವಾಲಯಗಳಲ್ಲಿ ದೇವರ ಸೇವೆಯಾಗಿ ಪ್ರಾರಂಭವಾದ ಇದು ಇಂದಿಗೂ ವಿಶ್ವದಾದ್ಯಂತ ಪ್ರಸಿದ್ಧಿಯಾಗಿದೆ, ಮುಸ್ಲೀಂ ರಾಷ್ಟ್ರಗಳಲ್ಲೂ ಪ್ರಾಮುಖ್ಯತೆ ಪಡೆದುಕೊಂಡಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ಬಿಜೆಪಿ ರಾಜ್ಯ ಮಾಧ್ಯಮ ವಕ್ತಾರ ಎಂ.ಜಿ.ಮಹೇಶ್, ವಕೀಲ ವಿನಯ್ ಬಾಬು, ನಾಟ್ಯ ವಿದುಷಿ ಸುನೀತಾ ನಂದಕುಮಾರ್, ವ್ಯವಸ್ಥಾಪಕ ನಿರ್ದೇಶಕ ಎಸ್.ನಂದಕುಮಾರ್ ಉಪಸ್ಥಿತರಿದ್ದರು.

ಜಾತ್ರಾ ಮಹೋತ್ಸವ



ಮೈಸೂರಿನ ಕುರುಬಾರಹಳ್ಳಿಯಲ್ಲಿ ಜರುಗಿದ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಶ್ರೀ ಆಯರಹಳ್ಳಿ ಮಾಕಮ್ಮ ಹಾಗೂ ಮಾಲಮ್ಮನವರ ಜಾತ್ರಾ ಮಹೋತ್ಸವದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಗ್ರಾಮದ ಮುಖಂಡರಾದ ಅಪ್ಪುಗೌಡ, ಕುರುಬಾರಹಳ್ಳಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಮಂಜುನಾಥ್, ನಾಡನಹಳ್ಳಿ ರವಿ, ಯುವ ಮುಖಂಡ ಪ್ರಕಾಶ್, ಧನಂಜಯ, ನವೀನ್ ಅಪ್ಪುಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 13 ಅಕ್ಟೋಬರ್ 2025

ಆರ್‌ಎಸ್‌ಎಸ್ ಬ್ಯಾನ್ ಮಾಡಲು ಯಾವುದೇ ದುಷ್ಟ ಶಕ್ತಿಯಿಂದಲೂ ಸಾಧ್ಯವಿಲ್ಲ: ಯತ್ನಾಳ್



ಮದ್ದೂರಿಗೆ ಆಗಮಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ಮದ್ದೂರು, ಅ.12–ಆರ್‌ಎಸ್‌ಎಸ್ ಬ್ಯಾನ್ ಮಾಡಲು ಜಗತ್ತಿನ ಯಾವುದೇ ದುಷ್ಟ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ಆರ್‌ಎಸ್‌ಎಸ್ ಬ್ಯಾನ್ ಮಾಡುವಂತೆ ಸಚಿವ ಪ್ರಿಯಾಂಕ ಖರ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇದು ಮೂರ್ಖತನದ ವಿಚಾರ. ಜವಹರ್ ಲಾಲ್‌ರಿಂದ ಇಲ್ಲಿಯವರೆಗೂ ಎಲ್ಲರೂ ಪ್ರಯತ್ನ ಮಾಡಿದ್ದಾರೆ. ಆರ್‌ಎಸ್‌ಎಸ್ ಬ್ಯಾನ್ ಮಾಡಲು ಜಗತ್ತಿನ ಯಾವುದೇ ದುಷ್ಟಶಕ್ತಿಯಿಂದಲೂ ಸಾಧ್ಯವಿಲ್ಲ. ಆರ್‌ಎಸ್‌ಎಸ್ ಜನಪರವಾಗಿ ಉತ್ತಮವಾಗಿ ಕೆಲಸ ಮಾಡುತ್ತಿದೆ. ಇದನ್ನು ಬ್ಯಾನ್ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಇಂತಹ ಯೋಚನೆಗಳನ್ನು ಕಾಂಗ್ರೆಸ್ ಪಕ್ಷ ಬಿಡಬೇಕು. ಇಲ್ಲದಿದ್ದರೆ ಜನರೇ ಕಾಂಗ್ರೆಸ್‌ನವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಮುಸ್ಲಿಂ ತುಷ್ಟೀಕರಣಕ್ಕೆ ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ಬಗ್ಗೆ ಇಂತಹ ಹೇಳಿಕೆ ಕೊಡ್ತಾರೆ. ನಮ್ಮ ದೇಶದಲ್ಲಿ ನ್ಯಾಯಾಲಯದ ವ್ಯವಸ್ಥೆ ಇದೆ. ಮುಸ್ಲಿಂರನ್ನು ಖುಷಿ ಪಡಿಸಲು ಪ್ರಿಯಾಂಕ ಖರ್ಗೆ ಇಂತಹ ಹೇಳಿಕೆ ಕೊಡ್ತಾರೆ ಅಷ್ಟೆ. ಅದಕ್ಕೆ ಹೆಚ್ಚಿನ ಮಹತ್ವ ನೀಡುವ ಅವಶ್ಯಕತೆ ಇಲ್ಲ ಎಂದರು. ಒಂದು ಮಾತ್ರ ಸತ್ಯ, ಈ ದೇಶದಲ್ಲಿ ಹಿಂದೂಗಳು ಮುಸ್ಲಿಂ ಹಬ್ಬಗಳ ಮೇಲೆ ಎಂದೂ ಕಲ್ಲು ಹಾಕಿಲ್ಲ. ಸರ್ಕಾರದ ಒತ್ತಡದಿಂದ ಅಮಾಯಕ ಹಿಂದು ಯುವಕರ ಮೇಲೆ ಪೊಲೀಸರು ಕೇಸ್ ಹಾಕ್ತಾರೆ. ನಮ್ಮ ಸರ್ಕಾರ ಇದ್ದಾಗ ಇಂತಹ ಕೆಲಸ ಮಾಡಿಲ್ಲ ಎಂದರು.

ಹರಕೆ: ಪುರಾಣ ಪ್ರಸಿದ್ಧ ಶ್ರೀ ಹೊಳೆ ಆಂಜನೇಯ ಸ್ವಾಮಿ ದೇಗುಲಕ್ಕೆ ಶಾಸಕ ಯತ್ನಾಳ್ ಭೇಟಿ ನೀಡಿ ದೇವರ ದರ್ಶನ ಪಡೆದು ಒಂದು ಕಾಲು ರೂ ಹರಕೆ ಕಟ್ಟಿಕೊಂಡರು. ಶಾಸಕ ಯತ್ನಾಳ್‌ಗೆ ಪ್ರಧಾನ ಅರ್ಚಕ ಪ್ರದೀಪ್ ಆಚಾರ್ಯ ಶಾಲು ಹೊದಿಸಿ ಸ್ವಾಗತಿಸಿದರು ಹಾಗೂ ದೇಗುಲದ ಪ್ರಧಾನ ಅರ್ಚಕ ಪ್ರದೀಪ್ ಆಚಾರ್ಯ ಯತ್ನಾಳ್ ಅವರಿಗೆ ಶ್ರೀ ಹೊಳೆ ಆಂಜನೇಯಸ್ವಾಮಿ ದೇವರ ಫೋಟೋ ನೀಡಿದರು.

ಅದ್ದೂರಿ ಸ್ವಾಗತ: ತಾಲೂಕಿನ ಗಡಿಭಾಗಕ್ಕೆ ಯತ್ನಾಳ್ ಆಗಮಿಸಿದಾಗ ಹಿಂದು ಪರ ಸಂಘಟನೆಗಳು ಅದ್ದೂರಿಯಾಗಿ ಬರಮಾಡಿಕೊಂಡರು. ನಂತರ ಹೊಳೆ ಆಂಜನೇಯಸ್ವಾಮಿ ದೇಗುಲಕ್ಕೆ ಭೇಟಿ ನೀಡಿದರು. ಅನಂತರ ಎಳನೀರು ಮಾರುಕಟ್ಟೆ ಬಳಿ ಹಿಂದುಪರ ಸಂಘಟನೆಗಳು ಯತ್ನಾಳ ಅವರನ್ನು ಅದ್ದೂರಿಗೆ ಸ್ವಾಗತಿಸಿದರು. ನಂತರ ಮಂಡ್ಯಕ್ಕೆ ತೆರಳಿದರು. ಯತ್ನಾಳ್ ಆಗಮನದ ಹಿನ್ನೆಲೆಯಲ್ಲಿ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಭಜರಂಗ ಸೇನೆ ರಾಜ್ಯಾಧ್ಯಕ್ಷ ಮಂಜುನಾಥ್, ಹಿಂದು ಪರ ಸಂಘಟನೆಗಳ ಮುಖಂಡರಾದ ಕೆ.ಟಿ. ನವೀನ್, ಜಗನ್ನಾಥ್, ಕೆ.ಜಿ.ಗುರುಮಲ್ಲೇಶ್, ವೀರಭದ್ರಸ್ವಾಮಿ, ಅನಿಲ್, ಶ್ರೇಯಸ್, ರಘು ಇದ್ದರು.

ದೌರ್ಜನ್ಯ ಪ್ರಕರಣ ವಿರುದ್ಧ ಪೊಲೀಸರ ನಿರ್ಲಕ್ಷ್ಯ ಸಹಿಸಲ್ಲ

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಖಡಕ್ ಎಚ್ಚರಿಕೆ



ಕರ್ನಾಟಕ ಯುವ ರಕ್ಷಣಾ ವೇದಿಕೆಯ ತಾಲೂಕು ಘಟಕವನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀಚೌದರಿ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಅ.12–ಮಹಿಳೆಯರ ಮೇಲೆ ದೌರ್ಜನ್ಯ ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸುವಲ್ಲಿ ನಿರ್ಲಕ್ಷ್ಯ ತೋರಿದರೆ ರಾಜ್ಯ ಮಹಿಳಾ ಆಯೋಗ ಸಹಿಸುವುದಿಲ್ಲ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಸುಲೋಚನಮ್ಮ ರಾಮದಾಸ್ ಸಭಾಂಗಣದಲ್ಲಿ ಕರ್ನಾಟಕ ಯುವ ರಕ್ಷಣಾ ವೇದಿಕೆಯ ತಾಲೂಕು ಘಟಕದ ಉದ್ಘಾಟನೆ ಹಾಗೂ ಧ್ವಜ ಸ್ತಂಭ ಲೋಕಾರ್ಪಣೆ ಕಾರ್ಯಕ್ರಮನ್ನು ಉದ್ಘಾಟಿಸಿ, ಅದೇ ವೇದಿಕೆಯಲ್ಲಿ ಮಹಿಳೆಯರ ಕುಂದು-ಕೊರತೆ ಆಲಿಸಿದ ನಾಗಲಕ್ಷ್ಮಿ ಚೌಧರಿ ಪೊಲೀಸರು ಸೂಕ್ತ ಕಾನೂನು ಕ್ರಮ ಜರುಗಿಸಿ ನೊಂದ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಬೇಕೇ ಹೊರತು ನಿರ್ಲಕ್ಷ್ಯ ತಾಳಬಾರದೆಂದು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತಾಯಿ ಭುವನೇಶ್ವರಿ ಭಾವ ಚಿತ್ರವನ್ನು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಅನಾವರಣ ಮಾಡಿದರು. ರಾಜ್ಯ ಯುವ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಎಂ.ಎಸ್.ಸುನಿಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ತೆಂಡೇಕೆರೆ ಬಾಳೆಹೊನ್ನೂರು ಶಾಖಾಮಠದ ಪೀಠಾಧ್ಯಕ್ಷ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಗವಿಮಠದ ಶ್ರೀ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ಬೆಡದಹಳ್ಳಿ ಪಂಚಭೂತೇಶ್ವರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಕಾರ್ಯಕ್ರಮ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆದಿಚುಂಚನಗಿರಿ ಹೇಮಗಿರಿ ಶಾಖಾ ಮಠದ ಡಾ.ಜೆ.ಎನ್.ರಾಮಕೃಷ್ಣಗೌಡ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ, ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾಲೂಕು ಆರೋಗ್ಯಾಧಿಕಾರಿ ಡಾ. ಅಜಿತ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ವಿದ್ಯಾವತಿ ಗೌಡ, ಶಾಂತವ್ವ, ವೇದಿಕೆಯ ತಾಲೂಕು ಅಧ್ಯಕ್ಷ ಆಟೋ ಜಾವಿದ್, ಪ್ರಧಾನ ಕಾರ್ಯದರ್ಶಿ ನಿಸಾರ್ ಅಹಮದ್, ಮಹಿಳಾ ಘಟಕದ ಅಧ್ಯಕ್ಷೆ ರೋಷನ್ ಭಾನು, ಉಪಾಧ್ಯಕ್ಷೆ ಲೀಲಾವತಿ, ಕಾರ್ಯಾಧ್ಯಕ್ಷ ಮೋಹನ್, ರಾಜ್ಯ ಉಪಾಧ್ಯಕ್ಷ ಬಸವರಾಜು ಮೈಸೂರು ಜಿಲ್ಲಾಧ್ಯಕ್ಷ ಸುಧಾಕರ್, ನಗರ ಘಟಕದ ಅಧ್ಯಕ್ಷ ಮಂಜುನಾಥ್, ನಗರ ಕಾರ್ಯದರ್ಶಿ ರಾಧಾ, ಪದಾಧಿಕಾರಿಗಳಾದ ಭಾಸ್ಕರ್, ಶ್ರೀಕಾಂತ್, ದೇವೀರಮ್ಮ ಮತ್ತಿತರರು ಉಪಸ್ಥಿತರಿದ್ದರು.

ಹೊಸಹೊಳಲು ಗ್ರಾಮದ ದಲಿತ ಮಹಿಳೆ ರತ್ನಮ್ಮ ತನ್ನ ಗಂಡ ನಂದೀಶ್ ನನ್ನೊಂದಿಗೆ 17 ವರ್ಷ ಸಂಸಾರ ಮಾಡಿ ಈಗ ನೀನು ಕೆಳಜಾತಿಯವಳು ಎಂದು ನನ್ನಿಂದ ದೂರವಾಗಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ದೂರಿದಾಗ ತಕ್ಷಣ ಸ್ಥಳದಲ್ಲಿಯೇ ಇದ್ದ ಇನ್ಸ್‌ಪೆಕ್ಟರ್ ಸುಮಾರಾಣಿ ಮತ್ತು ಸಿಡಿಪಿಓ ವಿದ್ಯಾವತಿ ಅವರಿಗೆಗೆ ಕೂಡಲೇ ಸಮಸ್ಯೆ ಬಗೆಹರಿಸಿ ವರದಿ ನೀಡುವಂತೆ ಖಡಕ್ ಸೂಚನೆ ನೀಡಿದರು.

ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಸೇರಿ ಹಲವರು ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆ



ಕೆ.ಆರ್.ಸಾಗರ ಗ್ರಾ.ಪಂ. ಸದಸ್ಯೆ, ಮಾಜಿ ಉಪಾಧ್ಯಕ್ಷರೊಂದಿಗೆ ಹಲವು ಕಾಂಗ್ರೆಸ್ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಶ್ರೀರಂಗಪಟ್ಟಣ,ಅ.12–ಕೆ.ಆರ್.ಸಾಗರ ಗ್ರಾ.ಪಂ ಸದಸ್ಯೆ ಹಾಗೂ ಮಾಜಿ ಉಪಾಧ್ಯಕ್ಷ ಸೇರಿದಂತೆ ಗ್ರಾಮದ ಹಲವು ಕಾಂಗ್ರೆಸ್ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ನಿವಾಸಕ್ಕೆ ತೆರಳಿದ ಗ್ರಾಪಂ ಸದಸ್ಯೆ ಸುಧಾ, ಮಾಜಿ ಉಪಾಧ್ಯಕ್ಷ ಹೇಮಂತ್ ಕುಮಾರ್, ಮುಖಂಡರಾದ ನಾರಾಯಣ, ಮೋಹನ್, ತಿರುಪಾಲ ಸೇರಿ ಹಲವು ಮಂದಿ ಪಕ್ಷ ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು. ಗ್ರಾಮದ ಬಡಜನತೆಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ನೀಡಿದ್ದ ಹಕ್ಕು ಪತ್ರಗಳಿಗೆ ಖಾತೆ ಮಾಡಿ ಕೊಡದೆ ಹಾಲಿ ಶಾಸಕರು ಬಡಜನತೆಗೆ ಇಲ್ಲಸಲ್ಲದ ಸಬೂಬು ಹೇಳುತ್ತಿದ್ದಾರೆ. ನೂರಾರು ಗ್ರಾಮಸ್ಥರಿಗೆ ಆಗುತ್ತಿರುವ ತೊಂದರೆ ಬಗ್ಗೆ ಶಾಸಕರಿಗೆ ಮನವರಿಕೆ ಮಾಡಿದ್ದರೂ ಸಹ ಸ್ಪಂದಿಸುತ್ತಿಲ್ಲ. ಇದರಿಂದಾಗಿ ಇವರ ನಡೆಗೆ ಬೇಸತ್ತು, ನಾವೆಲ್ಲ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾಗುತ್ತಿದ್ದೇವೆ ಎಂದು ತಿಳಿಸಿದರು.

ಗ್ರಾಪಂ ಅಧ್ಯಕ್ಷೆ ಜಯಂತಿ, ಉಪಾಧ್ಯಕ್ಷ ಪಾಪಣ್ಣ, ಮಾಜಿ ಅಧ್ಯಕ್ಷ ನಾಗೇಂದ್ರ ಕುಮಾರ್, ನರಸಿಂಹ, ಸದಸ್ಯರಾದ ಮಂಜುನಾಥ್.ಸಿ., ರಾಜು.ಕೆ., ಮುಖಂಡರಾದ ಮಹದೇವು, ರಾಜು.ಪಿ., ಆನಂದ, ರವಿನಾರಾಯಣ, ಯೋಗೇಶ್ ಸೇರಿದಂತೆ ಇತರರಿದ್ದರು.

ರಾಜ್ಯಪಾಲ ಸಿ.ಎಚ್.ವಿಜಯಶಂಕರ್‌ಗೆ ಕಾವೇರಿ ಪ್ರಶಸ್ತಿ ಪ್ರದಾನ



ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರಿಗೆ ಅಂತಾರಾಷ್ಟ್ರೀಯ ಕಾವೇರಿ ಪ್ರಶಸ್ತಿ ಪ್ರದಾನ ಮಾಡಿದರು.

ಶ್ರೀರಂಗಪಟ್ಟಣ,ಅ.12–ಚಂದ್ರವನ ಆಶ್ರಮದಿಂದ ಕೊಡಮಾಡುವ ಅಂತಾರಾಷ್ಟ್ರೀಯ ಕಾವೇರಿ ಪ್ರಶಸ್ತಿಯನ್ನು ಪೀಠಾಧಿಪತಿ ಡಾ. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಶಂಕರ್‌ರಿಗೆ ಪ್ರದಾನ ಮಾಡಿದರು.

ಮೇಘಾಲಯ ರಾಜಧಾನಿ ಶಿಲ್ಲಾಂಗ್‌ನ ರಾಜಭವನಕ್ಕೆ ಮಠದ ಆಡಳಿತ ಮಂಡಳಿಯ 18 ಮುಖ್ಯಸ್ಥರೊಂದಿಗೆ ತೆರಳಿದ ಶ್ರೀಗಳು ರಾಜ್ಯಪಾಲ ಸಿಎಚ್ ವಿಜಯ ಶಂಕರ್ ಅವರಿಗೆ ಗೌರವ ಪೂರ್ವಕವಾಗಿ ಸನ್ಮಾನಿಸಿದರು. ಬಳಿಕ ಸಭೆ ಉದ್ದೇಶಿಸಿ ಮಾತನಾಡಿದ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ರಾಜ್ಯಪಾಲ ಸಿಎಚ್ ವಿಜಯ ಶಂಕರ್ ಅವರು ಎಲ್ಲೇ ಇದ್ದರೂ ತಮ್ಮತನವನ್ನು ಬಿಟ್ಟು ಕೊಡದೆ, ಸೇವೆಗೆಂದೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವ ಏಕೈಕ ವ್ಯಕ್ತಿ. ಜಗತ್ತು ಬೆಳಗುವ ಸೂರ್ಯ ಹೇಗೆ ಜಾತಿ, ಧರ್ಮದ ತಾರತಮ್ಯವಿಲ್ಲದೆ ಸರ್ವರನ್ನೂ ಸಮಾನವಾಗಿ ಕಾಣುತ್ತಾನೋ ಹಾಗೆ ವಿಜಯಶಂಕರ್ ಎಲ್ಲರನ್ನೂ ಸಮನಾಗಿ ಕಾಣುತ್ತಾರೆ ಎಂದು ಪ್ರಶಂಸಿಸಿದರು.

ಪ್ರಶಸ್ತಿ ಸ್ವೀಕರಿಸಿದ ವಿಜಯಶಂಕರ್ ಮಾತನಾಡಿ, ತಾವು ಜೀವನದಲ್ಲಿ ಇದುವರೆಗೂ ಯಾವುದೇ ಪ್ರಶಸ್ತಿ ಪಡೆದಿಲ್ಲ. ಆದರೆ ಶ್ರೀ ಮಠದೊಂದಿಗಿನ ಅವಿನಾಭಾವ ಸಂಬಂಧ ಹಾಗೂ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳ ಮೇಲಿನ ಗೌರವಕ್ಕಾಗಿ ಪಡೆದ ಮೊದಲ ಪ್ರಶಸ್ತಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ವೇಳೆ ಮೇಘಾಲಯ ಸಿಎಂ ಕೊನ್ರಾಡ್ ಸಂಗ್ಮಾ, ಡಿಸಿಎಂ ಪಿ.ತೈನ ಸಂಗ್ ಮ್ಯಾರಿಕೋಸ್ ಮಾರ್ಕ್, ಮುಖ್ಯ ಕಾರ್ಯದರ್ಶಿ ಡಾ.ಪಿ. ಶಕೀರ್ ಅಹಮ್ಮದ್, ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ ಬಹ್ಮದತ್ ತಿವಾರಿ ಇತರರಿದ್ದರು.

ಡಿಕೆಶಿಗೆ ಸಿಎಂ ಸ್ಥಾನ ಕೊಡುವುದರಲ್ಲಿ ತಪ್ಪೇನಿಲ್ಲ

ಮಂಡ್ಯ, ಅ.12– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಕೊಡೋದು ತಪ್ಪಲ್ಲ. ಕಷ್ಟದ ಕಾಲದಲ್ಲಿ ಶ್ರಮ ಪಟ್ಟು ಪಕ್ಷ ಕಟ್ಟಿದ ವ್ಯಕ್ತಿಗೆ ಅವಕಾಶ ಸಿಗಬೇಕು ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಹೇಳಿದರು. ಡಿಕೆಶಿಗೆ ಮುಖ್ಯಮಂತ್ರಿ ಕೊಡೋದು ತಪ್ಪಲ್ಲ. ಪಕ್ಷಕ್ಕೆ ಸಾಕಷ್ಟು ದುಡಿದಿದ್ದಾರೆ, ಶ್ರಮ ಪಟ್ಟು ಪಕ್ಷ ಕಟ್ಟಿದ್ದಾರೆ. ಅವರಿಗೆ ಅವಕಾಶ ಸಿಗಬೇಕು. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ದ ಎಂದ ಅವರು, ನಾನು ಅಧಿಕಾರಕ್ಕಾಗಿ ಕಾಂಗ್ರೆಸ್‌ಗೆ ಬಂದಿಲ್ಲ ಎಂದರು.

ನಿವೃತ್ತ ಶಿಕ್ಷಕ ಮಲವಯ್ಯ ನಿಧನ



ಮದ್ದೂರು, ಅ.12–ತಾಲೂಕು ಮಾರಗಾನಹಳ್ಳಿ ವಾಸಿ ನಿವೃತ್ತ ಮುಖ್ಯ ಶಿಕ್ಷಕ ಎಂ.ಮಲವಯ್ಯ (80)ನವರು ಅಲ್ಪಕಾಲದ ಅಸ್ವಸ್ಥತೆಯ ನಂತರ ಭಾನುವಾರ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.

ದಿವಂಗತರು ಪತ್ನಿ ಪುಟ್ಟತಾಯಮ್ಮ, ಪುತ್ರರಾದ ನಾಗೇಶ್, ಯಶವಂತ, ಪುತ್ರಿ ಚಂದ್ರಕಲಾ, ಸೊಸೆಯಂದಿರು, ಅಳಿಯ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಭಾನುವಾರ ಮಧ್ಯಾಹ್ನ 1ಗಂಟೆಗೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಂಪಮ್ಮ ನಿಧನ



ನಾಗಮಂಗಲ, ಅ.12– ತಾಲೂಕಿನ ಎಂ. ಹೊಸೂರು ಗ್ರಾಮದ ದಿವಂಗತ ರಾಮೇಗೌಡರ ಪತ್ನಿ ಕೆಂಪಮ್ಮ (90) ಭಾನುವಾರ ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಸೋಮವಾರ) ಬೆಳಗ್ಗೆ 11ಗಂಟೆಗೆ ಸ್ವಗ್ರಾಮ ಎಂ ಹೊಸೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಎಣ್ಣೆ ಮೈಮೇಲೆ ಚೆಲ್ಲಿ ಮಗು ದುರ್ಮರಣ

ಮಗುವನ್ನು ಕೆ.ಆರ್.ಆಸ್ಪತ್ರೆಯ ಸುಟ್ಟಗಾಯಗಳ ವಾರ್ಡ್‌ಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅ.4ರಂದು ಮೃತಪಟ್ಟಿತು. ಈ ಸಂಬಂಧ ನಗರದ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ್ ತನಿಖೆ ನಡೆಸುತ್ತಿದ್ದಾರೆ.

ಯಾರು ಹೊಣೆ?: ಮಗು ಹಠ ಮಾಡಿದ್ದರಿಂದ ಲಕ್ಷ್ಮಣ್ ಜೊತೆಯಲ್ಲಿ ಕರೆದುಕೊಂಡು ಹೋಗಿರಬಹುದು. ಆದರೆ ಮಗುವನ್ನು ಬೈಕ್ ಟ್ಯಾಂಕ್ ಮೇಲೆ ಕೂರಿಸದೆ ತಮ್ಮೊಡನೆ ಕರೆದೊಯ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲವೇನೋ. ಇನ್ನು ಫಾಸ್ಟ್‌ಫುಡ್‌ನವರು ಯಾವುದೇ ಸುರಕ್ಷಾ ಕ್ರಮಗಳನ್ನು ಅನುಸರಿಸದಿರುವುದೂ ದೊಡ್ಡ ಪ್ರಮಾದವೇ. ಇದೆಲ್ಲಾ ಆಕಸ್ಮಿಕವಾಗಿ ನಡೆದುಹೋಗಿದೆ ಎನ್ನುವುದನ್ನೂ ಒಪ್ಪಬಹುದು. ಆದರೆ ಇಂತಹ ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಲು ವ್ಯವಸ್ಥೆಯ ನಿರ್ಲಕ್ಷ್ಯವೇ ಕಾರಣ ಎಂಬುದು ನಾಗರಿಕರ ಬಲವಾದ ಆರೋಪ.

ಜನರ ಜೀವದ ಜೊತೆ ಚೆಲ್ಲಾಟ: ಫುಟ್‌ಪಾತ್ ಅತಿಕ್ರಮಣದಿಂದ ಕೇವಲ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗುವುದು ಮಾತ್ರವಲ್ಲ, ಇಂತಹ ದುರ್ಘಟನೆಗಳು ಸಂಭವಿಸುವ ಸಾಧ್ಯತೆಯೂ ಇದೆ ಎಂದು ಅದೆಷ್ಟು ಬಾರಿ ವ್ಯವಸ್ಥೆಯ ಗಮನ ಸೆಳೆದರೂ ಪ್ರಯೋಜನವಾಗಲಿಲ್ಲ. ಕೆಲ ತಿಂಗಳ ಹಿಂದೆ ವಿವೇಕಾನಂದನಗರದ ವೃತ್ತದ ಬಳಿ ರಸ್ತೆ ಬದಿ ತರಕಾರಿ ಗಾಡಿಗಳನ್ನು ನಿಲ್ಲಿಸಿಕೊಂಡಿದ್ದರ ಪರಿಣಾಮ ನಗರ ಸಾರಿಗೆ ಬಸ್, ಬೈಕ್‌ಗೆ ಡಿಕ್ಕಿ ಹೊಡೆದು ಸವಾರ ಮೃತಪಟ್ಟರು. ಇದೀಗ ಫುಟ್‌ಪಾತ್ ಅಸುರಕ್ಷಿತ ವ್ಯಾಪಾರಕ್ಕೆ ಅಮಾಯಕ ಮಗುವಿನ ಬಲಿಯಾಗಿದೆ. ಈವರೆಗೆ ಅದೆಷ್ಟೂ ಜನ ನೋವು ತಿಂದಿದ್ದಾರೆ. ಆದರೂ ಫುಟ್‌ಪಾತ್ ಹಾಗೂ ರಸ್ತೆ ಬದಿಯಲ್ಲಿ ಗಾಡಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಘಟನೆ ನಡೆದಾಗ ವೀರಾವೇಶದಿಂದ ನಡೆದುಕೊಳ್ಳುವ ನಗರ ಪಾಲಿಕೆ ಅಧಿಕಾರಿಗಳು, ಮತ್ತೆ ಎಚ್ಚರಗೊಳ್ಳುವುದು ಮತ್ತೊಂದು ದುರ್ಘಟನೆ ನಡೆದಾಗಲೇ. ನಗರ ಪಾಲಿಕೆ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವುದಕ್ಕೆ ಈ ಘಟನೆಗಳೇ ಸಾಕ್ಷಿಯಾಗಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರಿಯಾಂಕ್ ಮೂರ್ಖತನ ಪ್ರದರ್ಶನ

ದೇಶದ ಮುಂದೆ ಇದೆ. ಮತ್ತೊಮ್ಮೆ ಆರ್‌ಎಸ್‌ಎಸ್ ನಿಷೇಧಿಸುವ ಶಕ್ತಿ ಕಾಂಗ್ರೆಸ್ ಪಕ್ಷಕ್ಕೆ ಇಲ್ಲ ಎಂದು ವಿಜಯೇಂದ್ರ ಗುಡುಗಿದ್ದಾರೆ. ಪ್ರಿಯಾಂಕ್ ಖರ್ಗೆಯವರು ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಂತೆ ಕಾಣುತ್ತಿದೆ. ಗಾಂಧಿ ಕುಟುಂಬವನ್ನು ಓಲೈಸುವ ನಿಟ್ಟಿನಲ್ಲಿ ಈ ರೀತಿ ಪತ್ರ ಬರೆದಂತೆ ಕಾಣುತ್ತಿದೆ. ಆರ್‌ಎಸ್‌ಎಸ್ 100 ವರ್ಷ ಪೂರೈಸಿದ ಈ ಶುಭ ಘಳಿಗೆಯಲ್ಲಿ ದೇಶದಾದ್ಯಂತ ಚಟುವಟಿಕೆ, ಪಥ ಸಂಚಲನ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಪ್ರಿಯಾಂಕ್ ಪತ್ರದ ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದೆಲ್ಲದಕ್ಕೂ ಕಾಲ ಉತ್ತರ ಕೊಡಲಿದೆ ಎಂದು ವಿಜಯೇಂದ್ರ ಕುಟುಕಿದ್ದಾರೆ.

ದಾರಿದ್ರ್ಯತನ ತೋರಿಸುತ್ತದೆ

ಅನ್ಯ ಕೋಮಿನ ಹಬ್ಬಗಳಂದು ತಲ್ವಾರ್ ತೋರಿಸಿ ಬೀದಿಗಳಲ್ಲಿ ಹೆಲ್ಮೆಟ್ ಧರಿಸದೇ ಓಡಾಡುವ ಪುಂಡರ ಹೆಡೆಮುರಿ ಕಟ್ಟಲಿ ಎಂದು ಸವಾಲು ಹಾಕಿದ್ದಾರೆ. ಬಕ್ರೀದ್ ಸೇರಿದಂತೆ ಇತರ ಹಬ್ಬಗಳಲ್ಲಿ ಆಗುವ ಪ್ರಾಣಿಬಲಿಯನ್ನು ನಿಷೇಧಿಸಲಿ. ಆಂಗ್ಲ, ವಿಜ್ಞಾನ, ಗಣಿತ, ಸಮಾಜ ಹೇಳಿಕೊಡದೆ ದ್ವೇಷ, ಬೇರೆ ಧರ್ಮಗಳ ಬಗ್ಗೆ ತಪ್ಪು ವಿಚಾರಗಳನ್ನು ಕಲಿಸುವ ಮದರಸಗಳನ್ನು ನಿಷೇಧಿಸಲಿ. ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಕರೆಸಿಕೊಳ್ಳುವ ಹಾಗೂ ಅವರೇ ಪ್ರತಿನಿಧಿಸುವ ಕಲ್ಬುರ್ಗಿಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡಲಿ. ಸಂಘದ ನಿಷೇದ ಕನಸಿನ ಮಾತು ಎಂದು ಯತ್ನಾಳ್ ವಾಗ್ದಾಳಿ ನಡೆಸಿದ್ದಾರೆ.

ಮರ್ಯಾದೆ ತೆಗೆಯುತ್ತಿದ್ದೀರಾ

ಎಂದು ಪಕ್ಷದ ಉನ್ನತ ಮೂಲವೊಂದು ತಿಳಿಸಿದೆ. ಕಾಂಗ್ರೆಸ್ ವಿರುದ್ಧ ಮಾತನಾಡುವುದಕ್ಕೆ ಚಿದಂಬರಂ ಅವರ ಮೇಲೆ ಉಂಟಾಗುತ್ತಿರುವ ಒತ್ತಡ ಏನು ಎಂದು ಕಾಂಗ್ರೆಸ್‌ನ ಮಾಜಿ ಸಂಸದ ರಶೀದ್ ಅಲ್ವಿ ಪ್ರಶ್ನಿಸಿದ್ದಾರೆ. "ಚಿದಂಬರಂ ಬಿಜೆಪಿ ಮಾಡುವಂತೆಯೇ ಮಾಡುತ್ತಿದ್ದಾರೆ. ಅವರ ಹೇಳಿಕೆ ದುರದೃಷ್ಟಕರ. ಚಿದಂಬರಂ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿ ಇದೆ. ಈ ಹೇಳಿಕೆಗಳನ್ನು ನೀಡಲು ಚಿದಂಬರಂ ಅವರ ಮೇಲೆ ಯಾವುದೇ ಒತ್ತಡವಿದೆಯೇ? ಬಿಜೆಪಿ ವಿರುದ್ಧ ಮಾತನಾಡುವ ಬದಲು, ಚಿದಂಬರಂ ಕಾಂಗ್ರೆಸ್‌ನ ನ್ಯೂನತೆಗಳನ್ನು ಎತ್ತಿ ತೋರಿಸುತ್ತಿದ್ದಾರೆ. ಇದು ತಪ್ಪು. ಕಾಂಗ್ರೆಸ್ ಈ ನಾಯಕರಿಗೆ ಇಷ್ಟೊಂದು ನೀಡಿದೆ, ಆದರೆ ಈ ನಾಯಕರು ಈಗ ಪಕ್ಷವನ್ನು ಹಾಳುಮಾಡಲು ಏಕೆ ಪ್ರಯತ್ನಿಸುತ್ತಿದ್ದಾರೆಂದು ನನಗೆ ತಿಳಿದಿಲ್ಲ ಎಂದು ಅವರು ಹೇಳಿದ್ದಾರೆ.

ಸ್ವಯಂ ಸೇವಕರಿಂದ ಭಾರೀ ಪಥ ಸಂಚಲನ



ಮೈಸೂರಿನ ವಿವಿಧ ಭಾಗಗಳಲ್ಲಿ ಪಥಸಂಚಲನ ನಡೆಸಿದ ಗಣವೇಷಧಾರಿ ಸ್ವಯಂ ಸೇವಕರು.

ಪಥ ಸಂಚಲನ ನಡೆಸಿದರು.

ಪಥ ಸಂಚಲನ ಮಾರ್ಗ –1: ಮೊದಲನೇ ಮಾರ್ಗದಲ್ಲಿ ಗೋಕುಲಂ 3ನೇ ಹಂತದ ಮೈಸೂರು ಒನ್ ನಾಗರಿಕ ಸೇವಾ ಕೇಂದ್ರ ಮೈದಾನ ಎಡ ತಿರುವು – 11 ನೇ ಕ್ರಾಸ್ – ನಂದಗೋಕುಲ 6 ನೇ ಮುಖ್ಯ ರಸ್ತೆ – ಕಾಂಟೂರ್ ರಸ್ತೆ – ಮಹದೇಶ್ವರ ಸ್ಕೂಲ್ ರಸ್ತೆ – ಮಹದೇಶ್ವರ ದೇವಸ್ಥಾನ ಕುಂಬಾರ ಕೊಪ್ಪಲು – 1ನೇ ಮುಖ್ಯ ರಸ್ತೆ – ಕೆಂಪೇಗೌಡ ಸ್ಟೇಡಿಯಮ್ ಹಿಂಭಾಗದ ರಸ್ತೆ – ಮಹದೇಶ್ವರ 4ನೇ ಮುಖ್ಯ ರಸ್ತೆ – ತ್ರಿನೇತ್ರ ಸರ್ಕಲ್ – ಬಲ ತಿರುವು – ಗಣಪತಿ ದೇವಸ್ಥಾನದ ಬಳಿ ಎಡ ತಿರುವು ಪಡೆಯುವ ಮೂಲಕ ಮೈದಾನದಲ್ಲಿ ಮುಕ್ತಾಯಗೊಳಿಸಿದರು.



ಪಥಸಂಚಲನದಲ್ಲಿ ಪಾಲ್ಗೊಂಡಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ.

ಪಥ ಸಂಚಲನ ಮಾರ್ಗ –2: ಎರಡನೇ ಮಾರ್ಗದಲ್ಲಿ ಗೋಕುಲಂ 3ನೇ ಹಂತದ ಮೈಸೂರು ಒನ್ ನಾಗರಿಕ ಸೇವಾ ಕೇಂದ್ರ ಮೈದಾನದ – ಬಲ ತಿರುವು – ಡಾಕ್ಟರ್ ಕಾರ್ನರ್ – ಗೋಕುಲಂ 9 ನೇ ಕ್ರಾಸ್ – 8 ಕ್ರಾಸ್ ಬಲ ತಿರುವು – ಬಾಪಟ್ ಮನೆ – ಎಸ್‌ಬಿಐ ಬ್ಯಾಂಕ್ ಎಡ – ಗೋಕುಲಂ ಮುಖ್ಯ ರಸ್ತೆ – ಗೋಕುಲಂ ಆರ್ಚ್ – ಗೋಕುಲಂ 2ನೇ ಕ್ರಾಸ್ – ಸಾಯಿಬಾಬ ದೇವಸ್ಥಾನ ರಸ್ತೆ – ಪಿಕೆ ಕಾಲೋನಿ ಮುಖ್ಯ ರಸ್ತೆ – ಕಾಂಟೂರ್ ಮುಖ್ಯ ರಸ್ತೆ – ಬಸವೇಶ್ವರ ಪಾರ್ಕ್ – ಕಾಂಟೂರ್ ರಸ್ತೆ– ಗಣಪತಿ ದೇವಸ್ಥಾನದಿಂದ ಮೈದಾನ ತಲುಪಿ ಪಥಸಂಚಲನ ಮುಕ್ತಾಯಗೊಳಿಸಿದರು.

ಈ ವೇಳೆ ವಾಮನ್ ಬಾಪಟ್, ಕೆ.ಆರ್.ಕ್ಷೇತ್ರ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ವಿಜಯ ವಿಠ್ಠಲ ಶಾಲೆ ಅಧ್ಯಕ್ಷ ವಾಸುದೇವ ಭಟ್, ರವಿಶಂಕರ್, ಆನಂದ್ ಜೀ, ಗಿರಿಧರ್, ತಿಲಕ್, ಮಾ ವೆಂಕಟ್ ರಾಮ್ ಜೀ, ನಂದನ್, ಮಾಜಿ ಶಾಸಕ ಎಲ್.ನಾಗೇಂದ್ರ, ಸತೀಶ್ ಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಥ ಸಂಚಲನದಲ್ಲಿ ಹೃದಯಾಘಾತದಿಂದ ವ್ಯಕ್ತಿ ಸಾವು



ಮೈಸೂರು, ಅ.12– ಆರ್‌ಎಸ್‌ಎಸ್ ಶತಮಾನೋತ್ಸವ ಹಾಗೂ ವಿಜಯ ದಶಮಿ ನಿಮಿತ್ತ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮೈಸೂರು ಮಹಾನಗರ ವತಿಯಿಂದ ಭಾನುವಾರ ಮೈಸೂರಿನ ಗೋಕುಲಂನ 3ನೇ ಹಂತದಲ್ಲಿ ನಡೆದ ಪಥಸಂಚಲನ ವೇಳೆ ವ್ಯಕ್ತಿಯೊಬ್ಬ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ಮೈಸೂರಿನ ಜಯನಗರದ ನಿವಾಸಿ ಮಹೇಂದ್ರ ಚೋಯಲ್ (37) ಮೃತ ಯುವಕ. ಮೈಸೂರಿನಲ್ಲಿ ಇಂದು ಸಂಜೆ ನಡೆದಿದ್ದ ಆರ್‌ಎಸ್‌ಎಸ್ ಪಥ ಸಂಚಲನ ವೇಳೆಯೆ ಕುಸಿದು ಬಿದ್ದಿದ್ದ ಮಹೇಶ್ ಚೋಯಲ್‌ನನ್ನು ತಕ್ಷಣ ಮನೆಗೆ ಕರೆತರಲಾಗಿತ್ತು. ಮನೆಯಲ್ಲಿ ಸುಧಾರಣೆ ಕಾಣದ ಹಿನ್ನೆಲೆಯಲ್ಲಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ.

ರಾಜ್ಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸಿ

ಇದು ಮಕ್ಕಳು ಮತ್ತು ಯುವಜನರ ಮೇಲೆ ಹಾನಿಕಾರಕ ಮಾನಸಿಕ ಪರಿಣಾಮ ಬೀರಬಹುದು. ದೇಶದ ಮಕ್ಕಳು, ಯುವಕರು, ಸಾರ್ವಜನಿಕರು ಮತ್ತು ಒಟ್ಟಾರೆಯಾಗಿ ಸಮಾಜದ ಯೋಗಕ್ಷೇಮದ ಹಿತದೃಷ್ಟಿಯಿಂದ, 'ಶಾಖೆ', 'ಸಂಘಿಕ್' ಅಥವಾ 'ಬೈಠಕ್' ಹೆಸರಿನಲ್ಲಿ ಆರ್‌ಎಸ್‌ಎಸ್ ನಡೆಸುವ ಎಲ್ಲಾ ರೀತಿಯ ಚಟುವಟಿಕೆಗಳ ಮೇಲೆ ನಿಷೇಧ ಹೇರಬೇಕೆಂದು ಅವರು ಒತ್ತಾಯಿಸಿದ್ದಾರೆ. ಸರ್ಕಾರಿ ಶಾಲೆಗಳು, ಸರ್ಕಾರಿ ಅನುದಾನಿತ ಶಾಲೆಗಳು, ಸಾರ್ವಜನಿಕ ಆಟದ ಮೈದಾನಗಳು, ಉದ್ಯಾನವನಗಳು, ಮುಜರಾಯಿ ಇಲಾಖೆ ಅಡಿಯಲ್ಲಿರುವ ದೇವಾಲಯಗಳು, ಪುರಾತತ್ವ ಇಲಾಖೆ ಅಡಿಯಲ್ಲಿರುವ ಸ್ಥಳಗಳು ಮತ್ತು ಯಾವುದೇ ಇತರ ಸರ್ಕಾರಿ ಆವರಣಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿಷೇಧ ಹೇರಬೇಕು. ಸಂವಿಧಾನವು ನಾಗರಿಕರು ಮತ್ತು ರಾಜ್ಯ ಇಬ್ಬರಿಗೂ ವಿಭಜನೆಯನ್ನು ಹರಡುವ ಶಕ್ತಿಗಳ ವಿರುದ್ಧ ಕಾರ್ಯನಿರ್ವಹಿಸಲು ಅಧಿಕಾರ ನೀಡುತ್ತದೆ. ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸಲಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಅವರು ಸಚಿವರು ಹೇಳಿದ್ದಾರೆ.

ತಪ್ಪಿಗೆ ಇಂದಿರಾ ಗಾಂಧಿ ಪ್ರಾಣ ತೆತ್ತರು

ಹಣಕಾಸು ಸಚಿವರು ಈ ಹೇಳಿಕೆ ನೀಡಿದ್ದಾರೆ. ಎಲ್ಲಾ ಉಗ್ರರನ್ನು ಹೊರ ಹಾಕಲು ಮತ್ತು ಸೆರೆಹಿಡಿಯಲು ಒಂದು ಮಾರ್ಗವಿತ್ತು. ಆದರೆ, ಬ್ಲೂ ಸ್ಟಾರ್ ಆಪರೇಷನ್ ತಪ್ಪು ಮಾರ್ಗವಾಗಿತ್ತು. ಆ ತಪ್ಪಿಗೆ ಇಂದಿರಾ ಗಾಂಧಿ ತಮ್ಮ ಜೀವ ವನ್ನೇ ತೆತ್ತರು ಎಂದು ನಾನು ಒಪ್ಪಿ ಕೊಂಡೆ. ಆದರೆ, ಆ ತಪ್ಪು ನಿರ್ಧಾರವು ಸೇನೆ, ಪೊಲೀಸ್, ಗುಪ್ತಚರ ಮತ್ತು ನಾಗರಿಕ ಸೇವೆಯ ಜಂಟಿ ನಿರ್ಧಾರವಾಗಿತ್ತು. ನಾವು ಇಂದಿರಾ ಗಾಂಧಿಯ ವರನ್ನು ಮಾತ್ರ ದೂಷಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಸಿಖ್ ಧರ್ಮದ ಅತ್ಯಂತ ಪವಿತ್ರ ಸ್ಥಳಗಳಲ್ಲಿ ಒಂದಾದ ಆವರಣಕ್ಕೆ ಭಾರತೀಯ ಸೇನೆ ನುಗ್ಗಿದ ನಂತರ ಸ್ವರ್ಣ ಮಂದಿರದೊಳಗೆ ಅಡಗಿಕೊಂಡಿದ್ದ ಭಿಂದ್ರನ್ ವಾಲೆ ಅವರನ್ನು ಹತ್ಯೆ ಮಾಡಲಾಯಿತು. ಅಕಾಲ್ ತಖ್ತ್ ಅನ್ನು ನಾಶಮಾಡಲು ಕಾರಣವಾದ ಸೇನಾ ಕಾರ್ಯಾಚರಣೆಯು ಸಿಖ್ ಸಮುದಾಯದೊಳಗೆ ಭಾರಿ ಅಸಮಾಧಾನವನ್ನು ಹುಟ್ಟುಹಾಕಿತು.

ತಿಂಗಳುಗಳ ನಂತರ, ಇಂದಿರಾ ಗಾಂಧಿಯನ್ನು ಅವರ ಸಿಖ್ ಅಂಗರಕ್ಷಕರು ಗುಂಡಿಕ್ಕಿ ಕೊಂದರು. ಅವರ ಹತ್ಯೆಯ ನಂತರ ಸಮುದಾಯದ ವಿರುದ್ಧ ವ್ಯಾಪಕ ಹಿಂಸಾಚಾರ ನಡೆಯಿತು. ಈ ಹಿಂಸಾಚಾರಕ್ಕೆ ಹಲವಾರು ಕಾಂಗ್ರೆಸ್ ನಾಯಕರು ಕಾರಣರೆಂದು ಶಂಕಿಸಲಾಗಿತ್ತು.

ತ್ಯಜಿಸಿದ್ದಾರೆ, ತಮ್ಮದು ಯಾವ ಪಾಡೋ...

ಸಂಸ್ಕಾರವನ್ನು ನೀಡುವುದು ಅಪರಾಧವೇ. ನಾವು ರಾಷ್ಟ್ರದ ಘಟಕ ಎನ್ನುವುದನ್ನು ಅರ್ಥ ಮಾಡಿಸಿ ರಾಷ್ಟ್ರಕ್ಕೆ ಸಮರ್ಪಿಸಿಕೊಳ್ಳುವುದು ಸಂವಿಧಾನ ಬಾಹಿರವೇ. ನೀವೇಕೆ ಕಣ್ಣಿದ್ದು ಕುರುಡರಾಗಿದ್ದೀರಿ, ಕಿವಿ ಇದ್ದು ಕಿವುಡರಾಗಿದ್ದೀರಿ. ನಿಮ್ಮ ಕಲ್ಬುರ್ಗಿ ಜಿಲ್ಲೆಯಲ್ಲೇ ಮತಾಂಧರು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ಹಾಡಹಗಲೇ ತೊಡಗಿಸಿಕೊಳ್ಳುತ್ತಿರುವುದು ನಿಮಗೆ ಕಾಣುವುದಿಲ್ಲವೇ. ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ಶಾಸಕ ಮುನಿರತ್ನ ಧರಣಿ

ಸರ್ಕಾರದ ಕಾರ್ಯಕ್ರಮಕ್ಕೆ ಸಂಸದರು, ಶಾಸಕರಿಗೆ ಆಹ್ವಾನ ನೀಡದಿರುವುದು ತಪ್ಪು. ಸರ್ಕಾರದ ಕಾರ್ಯಕ್ರಮದಲ್ಲಿ ಸಂಸದ, ಶಾಸಕರ ಫೋಟೋ ಇಲ್ಲ. ಇದು ಸಾರ್ವಜನಿಕ ಕಾರ್ಯಕ್ರಮ ಅಲ್ಲ, ಕಾಂಗ್ರೆಸ್ ಕಾರ್ಯಕ್ರಮ ಎಂದು ಮುನಿರತ್ನ ಆರೋಪಿಸಿದ್ದರು.

ಕಾಂಗ್ರೆಸ್ ಬಿಜೆಪಿ ಕಾರ್ಯಕರ್ತರ ಜಟಾಪಟಿ: ಈ ವೇಳೆ ಮಧ್ಯಪ್ರವೇಶಿಸಿದ ಮುನಿರತ್ನ ಬೆಂಬಲಿಗರು ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಬಲಿಗರ ನಡುವೆ ವಾಗ್ವಾದ ನಡೆಯಿತು. ವೇದಿಕೆಯಲ್ಲೇ ಗಲಾಟೆ ನಡೆಸಿದ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರಿಂದಾಗಿ ಹೈಡ್ರಾಮಾ ಸೃಷ್ಟಿಯಾಯಿತು. ರಾಜಕೀಯ ಮಾಡಲು ಇಲ್ಲಿಗೆ ಬರಬೇಡಿ ಎಂದು ಕಾಂಗ್ರೆಸ್ ಕಾರ್ಯಕರ್ತರು ಮುನಿರತ್ನ ಬೆಂಬಲಿಗರಿಗೆ ಎಚ್ಚರಿಕೆ ನೀಡಿದರು. ಕಾರ್ಯಕರ್ತರು ಪರಸ್ಪರ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ರೇಪಿಸ್ಟ್ ಮುನಿರತ್ನ ಎಂದ ಕಾಂಗ್ರೆಸ್ ಕಾರ್ಯಕರ್ತರು: ಇದೇ ವೇಳೆ ಮುನಿರತ್ನ ಮತ್ತು ಅವರ ಬೆಂಬಲಿಗರ ವಿರುದ್ಧ ಘೋಷಣೆಗಳನ್ನು ಕೂಗಿದ ಕಾಂಗ್ರೆಸ್ ಕಾರ್ಯಕರ್ತರು, 'ರೇಪಿಸ್ಟ್ ಮುನಿರತ್ನ' ಎಂದು ಟೀಕಿಸಿದರು. ಈ ವೇಳೆ ಗಲಾಟೆ ಹೆಚ್ಚಾಗುತ್ತಿದ್ದಂತೆ ಮುನಿರತ್ನ ಅವರನ್ನು ಪೊಲೀಸರು ಜೆಪಿ ಪಾರ್ಕ್‌ನಿಂದ ಕರೆದೊಯ್ದರು.

ತುಷಾರ್‌ಗೆ ರಾಜ್ಯಮಟ್ಟದ ವಿಜ್ಞಾನ ಪ್ರದರ್ಶನದಲ್ಲಿ ದ್ವಿತೀಯ ಸ್ಥಾನ



ಮೈಸೂರು, ಅ.12– ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್ ಎಜುಕೇಶನ್ ರಿಸರ್ಚ್ ಅಂಡ್ ಟ್ರೈನಿಂಗ್ ವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಸ್ಥಳೀಯ ಬಾಲ ವೈಜ್ಞಾನಿಕ್ ಪ್ರದರ್ಶಿನಿ ಕಾರ್ಯಕ್ರಮದಲ್ಲಿ ಮೈಸೂರಿನ ಜಯನಗರದಲ್ಲಿರುವ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯ ಹತ್ತನೆಯ ತರಗತಿ ವಿದ್ಯಾರ್ಥಿ ತುಷಾರ್ ಮಂಡಿಸಿದ ಪ್ರಕೃತಿ ವಿಕೋಪಗಳ ನಿರ್ವಹಣೆ (ಡಿಸಾಸ್ಟರ್ ಮ್ಯಾನೇಜ್‌ಮೆಂಟ್) ಎಂಬ ಪ್ರಾತ್ಯಕ್ಷಿಕೆಗೆ ರಾಜ್ಯ ಮಟ್ಟದ ದ್ವಿತೀಯ ಬಹುಮಾನವನ್ನು ನೀಡಲಾಗಿದೆ. ಕಾರ್ಯಕ್ರಮದಲ್ಲಿ ರಾಜ್ಯದ ಅನೇಕ ಕಡೆಯಿಂದ ಪ್ರತಿಷ್ಠಿತ ಶಾಲೆಗಳ ವಿದ್ಯಾರ್ಥಿಗಳು ಆಗಮಿಸಿದ್ದು, ಅದರಲ್ಲಿ ತುಷಾರ್ ಮಂಡಿಸಿದ ಪ್ರಾತ್ಯಕ್ಷಿಕೆಯು ಎಲ್ಲಾ ತೀರ್ಪುಗಾರರು ಗಮನವನ್ನು ಸೆಳೆದಿದ್ದು ವಿಶೇಷವಾಗಿದೆ. ದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ.

ಮಡಿಕೇರಿಯಲ್ಲಿ ಆರ್‌ಎಸ್‌ಎಸ್ ಬೃಹತ್ ಪಥ ಸಂಚಲನಾ ಜಾಥಾ



ಮಡಿಕೇರಿಯಲ್ಲಿ ಆರ್‌ಎಸ್‌ಎಸ್ ಗಣವೇಶಧಾರಿಗಳು ಪಥ ಸಂಚಲನಾ ಜಾಥಾ ನಡೆಸಿದರು.

ಮಡಿಕೇರಿ,ಅ.12– ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಶತಮಾನೋತ್ಸವ ಮತ್ತು ವಿಜಯ ದಶಮಿ ಅಂಗವಾಗಿ ನಗರದಲ್ಲಿ ಬೃಹತ್ ಪಥ ಸಂಚಲನಾ ಜಾಥಾ ನಡೆಸಲಾಯಿತು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಸಮಾವೇಶಗೊಂಡ ಸಹಸ್ರಾರು ಸಂಖ್ಯೆ ಗಣವೇಷಧಾರಿಗಳು ಆರ್‌ಎಸ್‌ಎಸ್ ಬ್ಯಾಂಡ್ ಸಹಿತ ತೆರೆದ ಜೀಪಿನಲ್ಲಿ ಭಗವಾ ಧ್ವಜದೊಂದಿಗೆ ಜಾಥಾ ನಡೆಸಿದರು.

ಕಾಲೇಜು ರಸ್ತೆ, ಗಣಪತಿ ಬೀದಿ, ಬನ್ನಿ ಮಂಟಪ, ಚೌಡೇಶ್ವರಿ ದೇವಾಲಯ, ಮಹದೇವಪೇಟೆ, ಇಂದಿರಾಗಾಂಧಿ ವೃತ್ತ, ಹಳೇ ಖಾಸಗಿ ಬಸ್ ನಿಲ್ದಾಣ ಮಾರ್ಗವಾಗಿ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ಗಾಂಧಿ ಮೈದಾನಕ್ಕೆ ಬೃಹತ್ ಪಥ ಸಂಚಲನಾ ಜಾಥಾ ಆಗಮಿಸುವ ಮೂಲಕ ಸಮಾಪ್ತಿಯಾಯಿತು.

ಜಿಲ್ಲೆಯ ವಿವಿಧ ಕಡೆಗಳಿಂದ ಆಗಮಿಸಿದ ಸಹಸ್ರಾರು ರಾಷ್ಟ್ರೀಯ ಸ್ವಯಂ ಸೇವಕರು ದೇಶಕ್ಕಾಗಿ ಸಮರ್ಪಿತ ಭಾವ ಸಂದೇಶದೊಂದಿಗೆ 5 ಕಿ.ಮೀ ಉದ್ದದ ಜಾಥಾದಲ್ಲಿ ಪಾಲ್ಗೊಂಡಿದ್ದರು. ಪಥ ಸಂಚಲನ ಸಾಗಿದ ಮಾರ್ಗದ ಉದ್ದಕ್ಕೂ ಸಾರ್ವಜನಿಕರು ಪುಷ್ಪ ವೃಷ್ಟಿಯ ಮೂಲಕ ಜಾಥಾವನ್ನು ಸ್ವಾಗತಿಸಿದರು. ಮಕ್ಕಳು ಹಾಗೂ ವಯೋವೃದ್ಧ ಗಣವೇಷಧಾರಿಗಳು ಜಾಥಾದಲ್ಲಿ ಶಿಸ್ತು ಬದ್ಧ ಹೆಜ್ಜೆ ಹಾಕಿದರು. ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಪ್ರಮುಖರಾದ ಬಿ.ಬಿ.ಭಾರತೀಶ್ ಸೇರಿದಂತೆ ಬಿಜೆಪಿ ಪಕ್ಷ ಪ್ರಮುಖರು ಗಣವೇಷಧಾರಿಗಳಾಗಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಕೊಡಗಿನಾದ್ಯಂತ ಅ.15, 'ಸ್ವಚ್ಛ ಕೊಡಗು–ಸುಂದರ ಕೊಡಗು' ತ್ಯಾಜ್ಯ ವಿಲೇವಾರಿ ಅಭಿಯಾನ

ಮಡಿಕೇರಿ,ಅ.12– ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್‌ನಿಂದ ಹಲವಾರು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಅ.15ರಂದು ಕೊಡಗು ಜಿಲ್ಲೆಯಾದ್ಯಂತ ಬೃಹತ್ ರೀತಿಯಲ್ಲಿ 'ಸ್ವಚ್ಛ ಕೊಡಗು–ಸುಂದರ ಕೊಡಗು' ತ್ಯಾಜ್ಯ ವಿಲೇವಾರಿ ಅಭಿಯಾನ ಆಯೋಜಿಸಲಾಗಿದೆ.

ಅ.15ರಂದು ಬುಧವಾರ ಬೆಳಗ್ಗೆ 8 ಗಂಟೆಯಿಂದ ಕೊಡಗಿನಾದ್ಯಂತ ರಸ್ತೆ ಬದಿಗಳಲ್ಲಿನ ಕಸ, ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಮೂಲಕ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಪ್ರವಾಸೋದ್ಯಮಕ್ಕೆ ಪೂರಕವಾಗಿ ಸ್ಪಂದಿಸಲಿದೆ.

ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಕೊಡಗು ಹೋಂ ಸ್ಟೇ ಅಸೋಸಿಯೇಷನ್, ಕೊಡಗು ಚೇಂಬರ್ ಆಫ್ ಕಾಮರ್ಸ್, ಕೊಡಗು ಟ್ರಾವಲ್ ಅಸೋಸಿಯೇಷನ್, ರೋಟರಿ, ಲಯನ್ಸ್, ರೆಡ್ ಕ್ರಾಸ್, ಗ್ರೀನ್ ಸಿಟಿ ಫೋರಂ, ಖಾಸಗಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಹಲವಾರು ಸಂಘಸಂಸ್ಥೆಗಳು ಈ ಸ್ವಚ್ಛತಾ ಅಭಿಯಾನಕ್ಕೆ ಕೈ ಜೋಡಿಸಿವೆ ಎಂದು ಕೂರ್ಗ್ ಹೋಟೇಲ್, ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ತಿಳಿಸಿದ್ದಾರೆ. ಇದೇ ಮೊದಲ ಬಾರಿಗೆ ಕೊಡಗಿನಲ್ಲಿ ಇಂತಹ ಬೃಹತ್ ರೀತಿಯ ಸ್ವಚ್ಛತಾ ಅಭಿಯಾನ ಏಕದಿನ, ಏಕಕಾಲದಲ್ಲಿ ಆಯೋಜಿಸಲ್ಪಟ್ಟಿದೆ ಎಂದು ದಿನೇಶ್ ತಿಳಿಸಿದರು. ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ದಿನೇಶ್ ಕಾರ್ಯಪ್ಪ 9844168223, ನಾಸಿರ್ ಅಹಮದ್ 8762345879 ಅವರನ್ನು ಸಂಪರ್ಕಿಸಬಹುದು.

ಮತಗಳ್ಳತನ ನಿಲ್ಲಿಸಿ, ಮತದಾರರ ಹಕ್ಕುಗಳಿಗಾಗಿ ಸಹಿ ಸಂಗ್ರಹ ಅಭಿಯಾನ



ಮಡಿಕೇರಿಯಲ್ಲಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡುತ್ತಿರುವುದು.

ಮಡಿಕೇರಿ,ಅ.12– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸೂಚನೆಯಂತೆ 'ಮತಗಳ್ಳತನ ನಿಲ್ಲಿಸಿ, ಮತದಾರರ ಹಕ್ಕುಗಳಿಗಾಗಿ ಸಹಿ ಸಂಗ್ರಹ' ಅಭಿಯಾನಕ್ಕೆ ನಗರದಲ್ಲಿ ಚಾಲನೆ ನೀಡಲಾಯಿತು. ಇಲ್ಲಿನ ಇಂದಿರಾ ಗಾಂಧಿ ವೃತ್ತದಲ್ಲಿ ವಿರಾಜಪೇಟೆ ಕ್ಷೇತ್ರ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂತರ್ ಗೌಡ ಮತ್ತು ಕಾಂಗ್ರೆಸ್ ಮುಖಂಡರು ಅಭಿಯಾನದಲ್ಲಿ ಸಹಿ ಹಾಕುವ ಮೂಲಕ ಚಾಲನೆ ನೀಡಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಮತಗಳ್ಳತನದ ಮೂಲಕ ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಿರುವುದರ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ವತಿಯಿಂದ 'ವೋಟ್ ಚೋರ್' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಚುನಾವಣಾ ಪಾವಿತ್ರ್ಯತೆ ಕಾಪಾಡಬೇಕಾದ ಜವಾಬ್ದಾರಿ ಹೊಂದಿರುವ ಸಂವಿಧಾನಿಕ ಅಂಗ ಸಂಸ್ಥೆಯಾದ ಚುನಾವಣಾ ಆಯೋಗ ರಾಜಕೀಯ ಷಡ್ಯಂತ್ರಕ್ಕೆ ಬಲಿಯಾಗಿದೆ ಎಂಬುದನ್ನು ನಾಗರಿಕರು ಸಹಿಸಿಕೊಳ್ಳಬಾರದು ಎಂದು ಕರೆ ನೀಡಿದರು.

ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಮತಗಳ್ಳತನ ಬಗ್ಗೆ ಕಾಂಗ್ರೆಸ್ ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರು ದೇಶದ್ಲೆಡೆ ದೊಡ್ಡ ಮಟ್ಟದ ಹೋರಾಟ ಮಾಡಿದ್ದಾರೆ. ಮತಗಳ್ಳತನದ ಬಗ್ಗೆ ಜಿಲ್ಲೆಯಲ್ಲಿಯೂ ಪಕ್ಷದ ಕಾರ್ಯಕರ್ತರು ಎಚ್ಚರ ವಹಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ಮಾತನಾಡಿ ಕೆಪಿಸಿಸಿ ಅಧ್ಯಕ್ಷರ ಕರೆಯ ಮೇರೆಗೆ ವೋಟ್ ಚೋರ್ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಪ್ರತಿ ಬೂತ್ ಮಟ್ಟದಲ್ಲೂ ಸಹಿ ಸಂಗ್ರಹ ಕಾರ್ಯವನ್ನು ಪಕ್ಷದ ಕಾರ್ಯಕರ್ತರು ನಡೆಸಬೇಕು. ಜಿಲ್ಲೆಯ ಪ್ರತಿ ಕ್ಷೇತ್ರದಲ್ಲಿ 75 ಸಾವಿರ ಸಹಿ ಸಂಗ್ರಹ ಮಾಡಬೇಕೆಂದು ಹೇಳಿದರು.

ಈ ಸಂದರ್ಭ ಪಕ್ಷದ ಮುಂಚೂಣಿ ನಾಯಕರು, ವಿವಿಧ ಬ್ಲಾಕ್‌ಗಳ ಅಧ್ಯಕ್ಷರು ಮತ್ತು ಕಾರ್ಯಕರ್ತರು ಹಾಜರಿದ್ದರು.

ಬಲಮುರಿ ಪುಣ್ಯ ಕ್ಷೇತ್ರದಲ್ಲಿ ಅ.18ಕ್ಕೆ ತೀರ್ಥ ಸ್ನಾನ

ನಾಪೋಕ್ಲು, ಅ.12– ಎರಡನೇ ಕಾವೇರಿ, ಹೊದ್ದೂರು ಗ್ರಾಮ ಪಂಚಾಯಿತಿಯ ಬಲಮುರಿ ಪುಣ್ಯ ಕ್ಷೇತ್ರದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಅ.18 ಶನಿವಾರ ತೀರ್ಥಸ್ನಾನ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದೆ.

ಅಂದು ಪೂರ್ವಾಹ್ನ 11 ಗಂಟೆಗೆ ಕಾವೇರಿ ಪುರಾಣ ಬಾಳೋ ಪಾಟ್, 11:30ಕ್ಕೆ ಕಾವೇರಿ ಮಹಾ ಆರತಿ ತದನಂತರ 12.30ಕ್ಕೆ ಆಗಸ್ತ್ಯೇಶ್ವರ ದೇವಸ್ಥಾನದಲ್ಲಿ ಅಗಸ್ತೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ಮಹಾಪೂಜೆ, ತೀರ್ಥ, ಪ್ರಸಾದ ವಿತರಣೆ. ಮಧ್ಯಾಹ್ನ 1 ಗಂಟೆಗೆ ಸೇರಿದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಾಲಯದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಕಾರು ಪಲ್ಟಿ: ಅಪಾಯದಿಂದ ಪಾರಾದ ಕುಟುಂಬ



ನಾಪೋಕ್ಲು: ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಪಲ್ಟಿಯಾಗಿ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಶನಿವಾರ ಇಲ್ಲಿಗೆ ಸಮೀಪದ ಬೆಟ್ಟಗೇರಿಯಲ್ಲಿ ಸಂಭವಿಸಿದೆ.

ಮಡಿಕೇರಿ– ಭಾಗ ಮಂಡಲ ಮುಖ್ಯ ರಸ್ತೆಯ ಬೆಟ್ಟಗೇರಿ ಗ್ರಾಮದಲ್ಲಿ ರಸ್ತೆ ಸಂಪೂರ್ಣವಾಗಿ ಗುಂಡಿಮಯವಾಗಿದ್ದು, ಕಾರೊಂದು ರಸ್ತೆ ಗುಂಡಿಗೆ ಬೀಳುವುದನ್ನು ತಪ್ಪಿಸಲು ಹೋಗಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಅಪಘಾತಕ್ಕೆ ಒಳಗಾದ ಕುಟುಂಬಸ್ಥರನ್ನು ಖಾಸಗಿ ದೃಶ್ಯ ವಾಹಿನಿಯ ತಂಡ ರಕ್ಷಣೆ ಮಾಡಿದೆ. ನಂತರ ಕಾರಿನಲ್ಲಿ ಇದ್ದ ಮಕ್ಕಳು ವಯೋವೃದ್ದೆ ಹಾಗೂ ಕಾರಿನ ಚಾಲಕನನ್ನು ಗ್ರಾಮಸ್ಥರ ನೆರವಿನಿಂದ ಕುಟುಂಬಸ್ಥರನ್ನು ಮಡಿಕೇರಿಯ ಜಿಲ್ಲಾ ಅಸ್ಪತ್ರೆಗೆ ದಾಖಲು ಮಾಡಲಾಯಿತು.

ಬೆಳಿಗ್ಗೆ ಉಡುಪಿಯಿಂದ ಮಡಿಕೇರಿ ತಾಲೂಕಿನ ಎಮ್ಮೆಮಾಡಿನಲ್ಲಿರುವ ದರ್ಗಾಕ್ಕೆ ತೆರಳುವ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು ಕುಟುಂಬ ಸದಸ್ಯರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತದಿಂದ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಘಟನೆಗೆ ಸಂಬಂಧಿಸಿದಂತೆ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಬಡ್ಡಿ ಆಡುವ ಮೂಲಕ ಶಾಸಕರಿಂದ ಕಬಡ್ಡಿ ಪಂದ್ಯಾವಳಿಗೆ ಚಾಲನೆ



ಕಬಡ್ಡಿ ಆಡುವ ಮೂಲಕ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿದ ಶಾಸಕರು.

ಮಡಿಕೇರಿ,ಅ.12– ಮಡಿಕೇರಿ ನಗರ ದಸರಾ ಕ್ರೀಡಾ ಸಮಿತಿ ವತಿಯಿಂದ ಗಾಂಧಿ ಮೈದಾನದಲ್ಲಿ ಆಯೋಜಿಸಿದ್ದ ಹೊನಲು ಬೆಳಕಿನ ಮುಕ್ತ ಕಬಡ್ಡಿ ಪಂದ್ಯಾವಳಿಗೆ ಭಾನುವಾರ ಜಿಲ್ಲೆಯ ಶಾಸಕದ್ವಯರು ಜ್ಯೋತಿ ಬೆಳಗಿ ರೈಡ್ ಮಾಡುವ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು.

ಮಡಿಕೇರಿ ದಸರಾ ಕ್ರೀಡಾ ಸಮಿತಿ ಅಧ್ಯಕ್ಷ ಪ್ರದೀಪ್ ಕರ್ಕೆರ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಕಬಡ್ಡಿ ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿ ಬೆಳಗಿ ಸಮಾರಂಭ ಉದ್ಘಾಟಿಸಿದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ಕೊಡಗು ಜಿಲ್ಲೆ ಅಸಂಖ್ಯ ಕ್ರೀಡಾಪಟುಗಳನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೆ ನೀಡಿದ ಖ್ಯಾತಿಯನ್ನು ಹೊಂದಿದೆ. ಕ್ರೀಡಾ ಚಟುವಟಿಕೆಗಳನ್ನು ಪ್ರತಿಯೊಬ್ಬರು ತೊಡಗಿಸಿಕೊಳ್ಳುವುದು ಅವಶ್ಯ ಎಂದರು. ಇಂತಹ ಕ್ರೀಡಾ ಚಟುವಟಿಕೆಗಳು ನಮ್ಮ ಆರೋಗ್ಯವನ್ನು ಕಾಪಾಡುವುದಲ್ಲದೆ ಸಮ ಚಿತ್ತತೆಯಿಂದ ಬದುಕನ್ನು ಎದುರಿಸಲು ಸಹ ಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಮಳೆಯ ಕಾರಣದಿಂದ ದಸರಾ ಸಂದರ್ಭ ನಡೆಯಬೇಕಿದ್ದ ಕಬಡ್ಡಿ ಪಂದ್ಯಾವಳಿಯನ್ನು ಇಂದು ಆಯೋಜಿಸಲಾಗುತ್ತಿದೆ. ಇಂತಹ ಕ್ರೀಡಾಕೂಟಗಳಲ್ಲಿ ಗೆಲುವು ಸೋಲಿಗೂ ಮಿಗಿಲಾಗಿ ಪಾಲ್ಗೊಳ್ಳುವಿಕೆ ಅತ್ಯಂತ ಪ್ರಮುಖವಾಗುತ್ತದೆ ಎಂದರು. ಮಡಿಕೇರಿ ದಸರಾ ಸಮಿತಿ ಕಾರ್ಯಾಧ್ಯಕ್ಷ ಅರುಣ್‌ಕುಮಾರ್ ಮಾತನಾಡಿದರು.

ಶಾಸಕದ್ವಯರಿಂದ ಕಬಡ್ಡಿ...ಕಬಡ್ಡಿ..!: ಸಭಾ ಕಾರ್ಯಕ್ರಮದ ಬಳಿಕ ಆಯೋಜಿತ ಪತ್ರಕರ್ತರ ತಂಡ ಮತ್ತು ದಸರಾ ಕ್ರೀಡಾ ಸಮಿತಿ ತಂಡಗಳ ನಡುವಣ ಪ್ರದರ್ಶನ ಪಂದ್ಯಕ್ಕೆ ಶಾಸಕದ್ವಯರಾದ ಎ.ಎಸ್. ಪೊನ್ನಣ್ಣ ಮತ್ತು ಡಾ. ಮಂತರ್‌ಗೌಡ ತಾವೇ 'ಕಬಡ್ಡಿ... ಕಬಡ್ಡಿ' ಎನ್ನುತ್ತ ರೈಡ್ ಮಾಡಿ ಗಮನ ಸೆಳೆದರು. ಸಭಾ ಕಾರ್ಯಕ್ರಮದಲ್ಲಿ ಮಹೇಶ್ ಜೈನಿ, ವೀಣಾ ಅಚ್ಚಯ್ಯ, ಬೊಳ್ಳಜಿರ ಅಯ್ಯಪ್ಪ, ಅರುಣ್ ಶೆಟ್ಟಿ ಕುನ್ ಕೊತ್ತೋಳಿ, ಚಿತ್ರಾವತಿ, ಸದಾ ಮುದ್ದಪ್ಪ, ಜಗದೀಶ್ ಇತರರಿದ್ದರು.

ಶತಾಯುಷಿ ಮುತ್ತಮ್ಮ ನಿಧನ



ನಾಪೋಕ್ಲು: ಕಕ್ಕಬೆ ಗ್ರಾಮ ಪಂಚಾಯತಿಯ ಮರಂದೋಡ ಗ್ರಾಮದ ನಿವಾಸಿ ದಿವಂಗತ ಚಂಡೀರ ಮಂದಣ್ಣ ಅವರ ಧರ್ಮಪತ್ನಿ, ಶತಾಯುಷಿ ಮುತ್ತಮ್ಮ ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಮರಂದೋಡ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಯಿತು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಇಂದು ಬ್ರಹ್ಮೋಸ್ ಗಣಪತಿ ವಿಸರ್ಜನೆ

ಚಾಮರಾಜನಗರದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್





ಸಾರ್ವಜನಿಕರಲ್ಲಿ ಆತ್ಮಸ್ಥೈರ್ಯ ತುಂಬಲು ಪೊಲೀಸರಿಂದ ಪಥ ಸಂಚಲನ.

ಚಾಮರಾಜನಗರ, ಅ.12– ಚಾಮರಾಜನಗರ ಪಟ್ಟಣದ ರಥದ ಬೀದಿಯಲ್ಲಿ ಶ್ರೀವಿದ್ಯಾ ಗಣಪತಿ ಮಂಡಳಿಯು ಪ್ರತಿಷ್ಠಾಪಿಸಿರುವ ಗಣೇಶಮೂರ್ತಿ ವಿಸರ್ಜನೆ ಸೋಮವಾರ (ಅ.13) ಮಾಡುತ್ತಿದ್ದು, ವ್ಯಾಪಕ ಬಂದೋಬಸ್ತ್ ಮಾಡಲಾಗಿದೆ.

ಕಳೆದೊಂದು ತಿಂಗಳ ಹಿಂದೆ ಆಪರೇಷನ್ ಸಿಂಧೂರ್ ಕಲ್ಪನೆಯಡಿ ಸುಮಾರು 7 ಅಡಿ ಎತ್ತರದ ರ‍್ಯಾಕೆಟ್ ಬ್ರಹ್ಮೋಸ್ ಮೇಲೆ ವಿರಮಿಸುತ್ತಿರುವ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಅಂದಿನಿಂದ ಪ್ರತಿದಿನ ಗಣೇಶನ ಮೂರ್ತಿಗೆ ವಿಶೇಷ ಪೂಜೆ ಪುನಸ್ಕಾರಗಳು ನಡೆಯಿತು.

10 ದಿನಗಳಿಂದ ರಾಜ್ಯ ಹಾಗೂ ಜಿಲ್ಲೆಯ ಹೆಸರಾಂತ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವ ಮೂಲಕ ಸಂಭ್ರಮದಿಂದ ಗಣೇಶೋತ್ಸವ ಆಚರಿಸಲಾಯಿತು. ಸೋಮವಾರ ಬೆಳಗ್ಗೆ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಆರಂಭವಾಗಲಿದ್ದು, ಖಡಕ್ಪುರ ಮೊಹಲ್ಲಾ, ಡಾ.ಬಿ.ಆರ್. ಅಂಬೇಡ್ಕರ್ ಬೀದಿ, ದೇವಾಂಗ 3ನೇ ಬೀದಿ, ನಾಗಪ್ಪಶೆಟ್ಟರ ಚೌಕ, ಮೇಗಲ ನಾಯಕರ ಬೀದಿ, ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನ, ಗಾಡಿಪೇಟೆ ಚೌಕ, ದೊಡ್ಡ ಅಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ, ಭಗೀರಥ, ಉಪ್ಪಾರ ಬಡಾವಣೆ, ಆದಿಶಕ್ತಿ ದೇವಸ್ಥಾನ, ಬಣಜಿಗರ ಬೀದಿ, ಭ್ರಮರಾಂಬ ಬಡಾವಣೆ, ಕುರುಬರ ಬೀದಿ, ಹಳ್ಳದ ಬೀದಿ, ಅಗ್ರಹಾರದ ಬೀದಿ ಸೇರಿದಂತೆ ನಾನಾ ಬೀದಿಗಳಲ್ಲಿ ಗಣಪತಿಯ ವಿಸರ್ಜನಾ ಶೋಭಾಯಾತ್ರೆ ಸಾಗಲಿದೆ.

ಶೋಭಾಯಾತ್ರೆಯಲ್ಲಿ ನಂದಿ ಕಂಬ, ಗೊರವರ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಮಹಿಳಾ ವೀರಗಾಸೆ, ಪೂಜಾ ಕುಣಿತ, ಸೋಮನ ಕುಣಿತ, ಗಾಡಿಗೊಂಬೆ, ಹುಲಿ ವೇಷಧಾರಿಗಳು, ಚೆಂಡೆ, ವೀರಗಾಸೆ, ಚಿಂಗಾರಿ ಮೇಳ ಸೇರಿದಂತೆ ನಾನಾ ಕಲಾ ತಂಡಗಳು ಪಾಲ್ಗೊಳ್ಳಲಿದೆ.

709 ಪೊಲೀಸರಿಂದ ಪಥ ಸಂಚಲನ: ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆಗಾಗಿ ಶಾಂತಿ ಕಾಪಾಡುವ ಉದ್ದೇಶದಿಂದ ನಗರದ ಎಲ್ಲೆಡೆ ಸುಮಾರು 709 ಪೊಲೀಸರಿಂದ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ನಗರದ ಎಸ್‌ಪಿ ಕಚೇರಿಯಲ್ಲಿ ಎಸ್‌ಪಿ ಡಾ.ಬಿ.ಟಿ. ಕವಿತಾ ನೇತೃತ್ವದಲ್ಲಿ ಸಮಾವೇಶಗೊಂಡ ಪೊಲೀಸರು ಅಲ್ಲಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿದರು.

ಕಟ್ಟಡ, ಮಹಡಿಯಲ್ಲಿ ಗುಂಪುಗೂಡಿ ವೀಕ್ಷಣೆಗೆ ನಿಷೇಧ

ಚಾಮರಾಜನಗರ: ಚಾಮರಾಜನಗರ ಪಟ್ಟಣದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ವಿದ್ಯಾಗಣಪತಿ ವಿಗ್ರಹದ ವಿಸರ್ಜನಾ ಕಾರ್ಯಕ್ರಮದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ವಿಸರ್ಜನಾ ಕಾರ್ಯಕ್ರಮ ಮುಗಿಯುವವರೆಗೆ ವಿಸರ್ಜನಾ ಕಾರ್ಯಕ್ರಮ ನಡೆಯುವ ಸ್ಥಳದ ಸುತ್ತಮುತ್ತಲಿನ ಕಟ್ಟಡಗಳ ಮೇಲೆ ಸಾರ್ವಜನಿಕರು ಹತ್ತಿ ಕುಳಿತುಕೊಳ್ಳುವುದು ಹಾಗೂ ಮಹಡಿ ಮೇಲಿಂದ ಗುಂಪು ಕಟ್ಟಿಕೊಂಡು ವೀಕ್ಷಿಸುವುದನ್ನು ನಿಷೇಧಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಆದೇಶ ಹೊರಡಿಸಿದ್ದಾರೆ.

ಅನೈರ್ಮಲ್ಯದ ತಾಣವಾಗಿರುವ ಹೊಂಗನೂರು ಗ್ರಾಪಂ ಕಚೇರಿ



ಹೊಂಗನೂರು ಗ್ರಾಪಂ ಕಟ್ಟಡದ ಆವರಣದ ಹಿಂಭಾಗದ ದುಸ್ಥಿತಿ.

ಯಳಂದೂರು: ಹೊಂಗನೂರು ಗ್ರಾಮ ಪಂಚಾಯಿತಿ ಆಡಳಿತ ಕಚೇರಿಯಾಗಿರದೆ ಮದ್ಯದ ಬಾಟಲಿಗಳ ಶೇಖರಣೆ, ಅನೈರ್ಮಲ್ಯದ ತಾಣವಾಗಿದೆ.

ಈ ಗ್ರಾಮದಲ್ಲಿ 1858ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿವೆ. ಹೊಂಗನೂರು ಬೆಲ್ಲವತ್ತ, ಮುರಟಿಪಾಳ್ಯ, ಶನವಾರಮುರಟಿ ಗ್ರಾಮಗಳು ಈ ಪಂಚಾಯಿತಿ ವ್ಯಾಪ್ತಿಗೊಳಪಟ್ಟಿವೆ. ಗ್ರಾಮದ ಹೊರ ಭಾಗದಲ್ಲಿರುವ ಪಂಚಾಯಿತಿ ಕಟ್ಟಡದ ಸುತ್ತಲೂ ಕಳೆ ಸಸ್ಯಗಳು ಕಾಡಿನಂತೆ ಹಬ್ಬಿವೆ. ಇದರ ಹಂಬುಗಳು ಕಿಟಕಿ ಒಳಗಿಂದ ತೂರಿ ಕಚೇರಿ ಒಳಗೂ ಹಬ್ಬಿದೆ. ಕಟ್ಟಡದ ಹಿಂಭಾಗದಲ್ಲಿ 2 ಶೌಚಗೃಹವಿದೆ. ಆದರೆ ಇದರ ನಿರ್ವಹಣೆಯಿಲ್ಲದೆ ಇದು ಗಬ್ಬು ನಾರುತ್ತಿದೆ. ಇಲ್ಲಿಗೆ ನೀರಿನ ಸಂಪರ್ಕವೂ ಇಲ್ಲ.

ಪಂಚಾಯಿತಿಯ ಸುತ್ತುಗೋಡೆಯ ಒಳಗೆ ಕುಡಿದು ಬಿಸಾಡಿರುವ ಮದ್ಯದ ಪೌಚ್‌ಗಳು ಸಿಗುತ್ತದೆ. ಕಚೇರಿ ಮುಂಭಾಗ ಆಟೋ ಟಿಪ್ಪರ್ ನಿಂತಿದ್ದು ಗಾಜು ಒಡೆದಿದೆ. ಮನೆ ಮನೆಗೆ ಕಸ ಸಂಗ್ರಹಿಸಲು ನೀಡಲು ಇಟ್ಟಿದ್ದ ಕಸದ ಬುಟ್ಟಿಗಳಿಗೆ ಕಸ ಹಿಡಿದಿದ್ದು ನಿರುಪಯುಕ್ತವಾಗಿ ಬಿದ್ದಿವೆ. ಕಚೇರಿ ಒಳಗೆ ಗ್ರಂಥಾಲಯಕ್ಕೆ ತಂದಿದ್ದ ಪಿಠೋಪಕರಣಗಳು, ಪುಸ್ತಕಗಳು ಧೂಳು ಹಿಡಿಯುತ್ತಿದೆ. ಸಾರ್ವಜನಿಕರು ಬಂದರೆ ಕೂರಲೂ ಸ್ಥಳವಿಲ್ಲವಾಗಿದೆ. ಶೌಚಗೃಹ ನೀರಿಲ್ಲದೆ ಗಬ್ಬು ನಾರುತ್ತಿದ್ದು, ಬಾಗಿಲಿನ ಮುಂಭಾಗದಲ್ಲೂ ಆಳೆತ್ತರದ ಕಳೆಗಳು ಆವರಿಸಿಕೊಂಡಿವೆ. ಇದರ ಪಿಟ್ ಗುಂಡಿ ಕೂಡ ಬಾಯ್ತೆರೆದು ನಿಂತಿದೆ. ಕಳೆದ ಹಲವು ದಿನಗಳಿಂದಲೂ ಇಲ್ಲಿನ ಸಿಸಿ ಕ್ಯಾಮರಾವೂ ಕೆಟ್ಟಿ ನಿಂತಿದೆ. ಅಲ್ಲದೆ ಇಲ್ಲಿಗೆ ತೆರಳುವ ರಸ್ತೆಯ ಸುತ್ತಮುತ್ತಲೂ ಅನೈರ್ಮಲ್ಯ ತಾಂಡವವಾಡುತ್ತಿದೆ. ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸದ ಗ್ರಾಮ ಪಂಚಾಯಿತಿ ಗ್ರಾಮದಲ್ಲಿರುವ ನೂರಾರು ಸಮಸ್ಯೆಗಳನ್ನು ಹೇಗೆ ಬಗೆಹರಿಸಲಿದೆ ಎಂಬುದು ಸ್ಥಳೀಯ ಮಹದೇವಸ್ವಾಮಿಯವರ ಪ್ರಶ್ನೆಯಾಗಿದೆ.

ಕೆಂಪನಪುರ ಗ್ರಾಮ ಪಂಚಾಯಿತಿಯ ಪಿಡಿಒ ರಾಮೇಗೌಡ ಇಲ್ಲಿಗೆ ಪ್ರಭಾರ ಪಿಡಿಒ ಆಗಿದ್ದಾರೆ. ಇಲ್ಲಿಗೆ ಅಪರೂಪಕ್ಕೆ ಬರುತ್ತಾರೆ. ಬಂದರೂ ಇಲ್ಲಿ ಹೆಚ್ಚು ಹೊತ್ತು ನಿಲ್ಲುವುದಿಲ್ಲ, ಗ್ರಾಮದಲ್ಲಿ ಹಲವು ಸಮಸ್ಯೆಗಳಿದ್ದರೂ ಇದನ್ನು ಬಗೆಹರಿಸಿಕೊಳ್ಳಲು ನಮಗೆ ಪಿಡಿಒ ಸಿಗುವುದೇ ಇಲ್ಲ. ಅಲ್ಲದೆ ಇಲ್ಲಿ ಕಾರ್ಯದರ್ಶಿಯೂ ಇಲ್ಲ, ಬಿಲ್ ಕಲೆಕ್ಟರ್ ಕೂಡ ಇಲ್ಲ. ಅಲ್ಲದೆ ಈ ಪಂಚಾಯಿತಿಯಲ್ಲಿ ಪೌರ ಕಾರ್ಮಿಕರೇ ಇಲ್ಲ. ಹಾಗಾಗಿ ಪಂಚಾಯಿತಿ ಕಟ್ಟಡದಂತೆ ಇಡೀ ಪಂಚಾಯಿತಿಯೇ ಗಬ್ಬು ನಾರುತ್ತಿದೆ. ಗ್ರಾಮದ ಕೆಲವೆಡೆ ಕುಡಿಯುವ ನೀರು, ಚರಂಡಿ, ರಸ್ತೆ ಸೇರಿದಂತೆ ಅನೇಕ ಸಮಸ್ಯೆಗಳಿವೆ. ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ವಹಿಸಬೇಕು.

ನಾನು ಇಲ್ಲಿಗೆ ಪ್ರಭಾರ ಪಿಡಿಒ ಆಗಿದ್ದೇನೆ. ಹಾಗಾಗಿ ಇಲ್ಲಿಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಮ್ಮ ಕಚೇರಿಯಲ್ಲಿ ಸಮಸ್ಯೆಗಳ ನಿವಾರಣೆಗೆ ಕ್ರಮ ವಹಿಸಲಾಗುವುದು ಎಂದು ಪಿಡಿಓ ರಾಮೇಗೌಡ ಹೇಳಿದರು.

ಗರ್ಭಿಣಿಯರು ಸಮತೋಲಿತ ಆಹಾರ ಸೇವಿಸಿ



ಯರಿಯೂರು ಗ್ರಾಮದಲ್ಲಿ ಪೋಷಣ್ ಅಭಿಯಾನ್ ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಸೀಮಂತ ಶಾಸ್ತ್ರವನ್ನು ಮಾಡಲಾಯಿತು.

ಯಳಂದೂರು: ಗರ್ಭಿಣಿ, ಬಾಣಂತಿಯರ ಆಹಾರದಲ್ಲಿ ಹೆಚ್ಚು ಪೌಷ್ಟಿಕಾಂಶ, ಸತ್ವಯುತ ಆಹಾರವನ್ನು ಸೇವನೆ ಮಾಡಬೇಕು, ಯಾವುದೇ ಕಾರಣಕ್ಕೂ ಆಹಾರದಲ್ಲಿ ನಿರ್ಲಕ್ಷ್ಯ ವಹಿಸಬಾರದು. ಜೊತೆಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ಹಾಗೂ ಲಸಿಕೆಗಳನ್ನು ಹಾಕಿಸಿಕೊಳ್ಳಬೇಕು ಎಂದು ಎನ್‌ಆರ್‌ಎಲ್‌ಎಂನ ವ್ಯವಸ್ಥಾಪಕ ಶ್ರೀಕಾಂತ್ ಕರೆ ನೀಡಿದರು.

ಗುರುವಾರ ತಾಲೂಕಿನ ಯರಿಯೂರು ಗ್ರಾಮದ ಅಂಬೇಡ್ಕರ್ ಭವನದ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯರಿಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗನವಾಡಿಗಳ ವತಿಯಿಂದ ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ನಾವು ಹೆಚ್ಚಾಗಿ ಬೇಕರಿ ತಿನಿಸಿಗಳು, ಮೈದಾದಿಂದ ಮಾಡಿದ ಆಹಾರ ಸೇವನೆ ಮಾಡುತ್ತೇವೆ. ಇದು ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮೊಟ್ಟೆಯಿಂದ ಅಮೈನೋ ಆಸಿಡ್ ಲಭಿಸುತ್ತದೆ. ಬೆಣ್ಣೆ, ಸೊಪ್ಪು, ತರಕಾರಿ, ಒಣ ಹಣ್ಣುಗಳು, ಪ್ರತಿ ನಿತ್ಯ 8 ಲೋಟಕ್ಕೂ ಹೆಚ್ಚು ನೀರು ಸೇವಿಸುವುದರಿಂದ ನಾರಿನಾಂಶ, ಪ್ರೋಟಿನ್, ಶರ್ಕರ, ಪಿಷ್ಠಾದಿಗಳು ದೇಹಕ್ಕೆ ಲಭಿಸುತ್ತದೆ. ಈ ಬಗ್ಗೆ ವೈದ್ಯರ ಸಲಹೆಯೊಂದಿಗೆ ಆಹಾರದ ಚಾರ್ಟ್ ಮಾಡಿಕೊಂಡು ಸಮತೋಲಿತ ಆಹಾರವನ್ನು ಸೇವನೆ ಮಾಡಬೇಕು. ಇದರಿಂದ ತಾಯಿ ಹಾಗೂ ಮಗು ಹೆಚ್ಚು ಆರೋಗ್ಯವಂತವಾಗಿರುತ್ತಾರೆ. ಆಹಾರದಲ್ಲಿ ಸಕ್ಕರೆ ಹಾಗೂ ಉಪ್ಪಿನ ಬಳಕೆಯನ್ನು ಕಡಿಮೆ ಮಾಡಬೇಕು. ಅಡುಗೆ ಎಣ್ಣೆಯನ್ನು ಆದಷ್ಟು ನಿಗದಿತವಾಗಿ ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಗರ್ಭಿಣಿಯರಿಗೆ ಸೀಮಂತ ಶಾಸ್ತ್ರ, ಮಕ್ಕಳಿಗೆ ಅನ್ನಪ್ರಾಶನ ಹಾಗೂ ಅಕ್ಷರಾಭ್ಯಾಸ ಮಾಡಿಸಲಾಯಿತು.

ಗ್ರಾಪಂ ಸದಸ್ಯರಾದ ಪ್ರವೀಣ್, ಮಹದೇವಯ್ಯ, ಆಶಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಸರಸ್ವತಿ, ಆರೋಗ್ಯ ಕಾರ್ಯಕರ್ತೆ ಗೀತಾ ಮುಖಂಡರಾದ ಮಹದೇವಯ್ಯ, ರವಿ, ಅಂಗನವಾಡಿ ಕಾರ್ಯಕರ್ತೆಯರಾದ ಶಶಿ, ಜ್ಯೋತಿ, ರಾಜೇಶ್ವರಿ, ನಾಗಮ್ಮ, ನಂಜಮ್ಮಣಿ, ಶೋಭಾ, ಮಲ್ಲಾಜಮ್ಮ, ಜಿ. ಮಹದೇವಮ್ಮ, ಮಾಲಾ ಸೇರಿದಂತೆ ಅನೇಕರು ಇದ್ದರು.

ಸಾರ್ವಜನಿಕರ ದೂರಿಗೆ ಸ್ಪಂದನೆ

ಕೊಳ್ಳೇಗಾಲ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರ ಕುಂದು ಕೊರತೆಗಳುಳ್ಳ ದೂರುಗಳನ್ನ ಇಂದಿಲ್ಲಿ ಸ್ವೀಕರಿಸಿದರು.

ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಲೋಹಿತ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ದೂರು ಸ್ವೀಕಾರ. ಸಭೆಯಲ್ಲಿ ಖಾತೆ ವಿಚಾರ, ಇ ಸ್ವತ್ತು ಕುರಿತ ದೂರಿನ ಬಗ್ಗೆ, ಪಿಂಚಣಿ ಸಮಸ್ಯೆ ಹಾಗೂ ಪೆಟ್ರೋಲ್ ಬಂಕ್ ಸ್ಥಳಾಂತರ ಕುರಿತು ಹಾಗೂ ಸರ್ಕಾರಿ ಹಳ್ಳ ಅತಿಕ್ರಮದ ಕುರಿತ ಒಟ್ಟು 6 ದೂರುಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿದರು.

ಈ ಸಂಧರ್ಭದಲ್ಲಿ ಗ್ರೇಡ್ 2 ತಹಸೀಲ್ದಾರ್ ಕುಮಾರ್, ತಾಲೂಕು ಪಂಚಾಯಿತಿ ಇಒ ಗುರುಶಾಂತಪ್ಪ ಬೆಳ್ಳುಂಡಗಿ, ಬಿಇಒ ಮಂಜುಳಾ, ಲೋಕೋಪಯೋಗಿ ಇಲಾಖೆಯ ಎಇಇ ಪುರುಷೋತ್ತಮ್, ನಗರಸಭೆ ಪ್ರಭಾರಿ ಪೌರಾಯುಕ್ತ ನಟರಾಜು ಇನ್ನಿತರಿದ್ದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ ಮೂರು ಕರುಗಳ ರಕ್ಷಣೆ



ಚಾಮರಾಜನಗರದ ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯ ಬೂದಿತಿಟ್ಟು ಬಸ್ ನಿಲ್ದಾಣದ ಮುಂಭಾಗ ಕೂಡ್ಲೂರು ಕ್ರಾಸ್ ಬಳಿ ತಮಿಳುನಾಡಿನ ತಾಳವಾಡಿ ಕಸಾಯಿಖಾನೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಮೂರು ಕರುಗಳನ್ನು ಪೊಲೀಸರು ರಕ್ಷಿಸಿ ಓರ್ವನನ್ನು ಬಂಧಿಸಿದ್ದಾರೆ. ಆಪೆ ಗೂಡ್ಸ್ ವಾಹನದಲ್ಲಿ ಮೂರು ಹಸುವಿನ ಕರುಗಳನ್ನು ಸಾಗಿಸಲಾಗುತ್ತಿತ್ತು. ಪೂರ್ವ ಠಾಣೆ ಪೊಲೀಸರು ದಾಳಿ ನಡೆಸಿ ಕರುಗಳನ್ನು ವಶಕ್ಕೆ ಪಡೆದರು.

ಹುಲಿಯನ್ನು ದ್ವೇಷಕ್ಕಾಗಿ ಕೊಲ್ಲುವುದು ಅಕ್ಷಮ್ಯ ಅಪರಾಧ, ಸಾವಿನ ಸುದ್ದಿ ಕೇಳಿ ಬಹಳ ದುಃಖವಾಯಿತು

ಕೊಳ್ಳೇಗಾಲ, ಅ.12– ಹುಲಿಯನ್ನು ದ್ವೇಷಕ್ಕಾಗಿ ಕೊಲ್ಲುವುದು ಅಕ್ಷಮ್ಯ ಅಪರಾಧ, ಹುಲಿ ರಾಷ್ಟ್ರೀಯ ಪ್ರಾಣಿ. ಅಂತಹ ಹುಲಿಗಳ ಸಾವಿನ ವಿಚಾರ ತಿಳಿದು ನನ್ನ ಮನಸ್ಸಿಗೆ ತೀವ್ರ ಬೇಸರ ಹಾಗೂ ದುಃಖವಾಯಿತು. ಇಂತಹ ಘಟನೆ ಮರುಕಳಿಸದಂತೆ ದಿಟ್ಟ ಕ್ರಮ ಕೈಗೊಳ್ಳುವ ಕುರಿತು ಸಂಬಂಧಿಸಿದವರ ಜೊತೆ ಚರ್ಚಿಸುವೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಹುಲಿ, ಚಿರತೆ ಇನ್ನಿತರೆ ಪ್ರಾಣಿಗಳು ನಮ್ಮ ಆಸ್ತಿ. ಅವೆಲ್ಲವೂ ಕಾಡಿನ ಸಂಪತ್ತುಗಳಾಗಿವೆ ಎಂದರು.

ಜೂನ್ ತಿಂಗಳಲ್ಲಿ ಸಹ ಹುಲಿ ಸಾವಿನ ವಿಚಾರ ನನಗೆ ಬಹಳ ಬೇಸರವನ್ನುಂಟು ಮಾಡಿತ್ತು, ಈಗ ಮತ್ತೆ ಮತ್ತೊಂದು ಹುಲಿಗೆ ವಿಷ ಹಾಕಿ ಕೊಂದು ಬಳಿಕ ಮೂರು ಭಾಗಗಳಾಗಿ ಕತ್ತರಿಸಿರುವ ಕ್ರಮ ಘೋರವಾದುದು, ಇಂತಹ ಘಟನೆ ಮತ್ತೆ ನಡೆಯದಂತೆ ಕಟ್ಟೆಚ್ಚರ ವಹಿಸಬೇಕಿದೆ ಎಂದರು.

ಮೈಸೂರು ಮಿತ್ರ

ಕುತಂತ್ರ ಮಾಡದೇ ಮಾದಿಗರಿಗೆ ಕಡ್ಡಾಯವಾಗಿ ಒಳ ಮೀಸಲಾತಿ ಜಾರಿಗೊಳಿಸಿ

ಒಳ ಮೀಸಲಾತಿ ಕ್ರಾಂತಿಕಾರಿ ಹೋರಾಟಗಾರ ಬಿ.ಆರ್.ಭಾಸ್ಕರ್ ಪ್ರಸಾದ್ ಒತ್ತಾಯ

ತಿ.ನರಸೀಪುರ, ಅ.12– ಕಳೆದ 35 ವರ್ಷಗಳಿಂದ ಒಳ ಮೀಸಲಾತಿಗಾಗಿ ಹೋರಾಡುತ್ತಿರುವ ಮಾದಿಗರ ಹಕ್ಕನ್ನು ಮಾದಿಗರಿಗೆ ಕೊಡಿ. ಅಲ್ಲದೇ ಮಾದಿಗರಿಗೆ ಕೊಟ್ಟ ಒಳ ಮೀಸಲಾತಿಯನ್ನು ಯಾವುದೇ ಕುತಂತ್ರ ಮಾಡದೇ ಕಡ್ಡಾಯವಾಗಿ ಜಾರಿಗೊಳಿಸುವಂತೆ ಒಳ ಮೀಸಲಾತಿ ಕ್ರಾಂತಿಕಾರಿ ಹೋರಾಟಗಾರ ಬಿ.ಆರ್. ಭಾಸ್ಕರ್ ಪ್ರಸಾದ್ ಒತ್ತಾಯಿಸಿದರು.

ಪಟ್ಟಣದ ಗೋಪಾಲಪುರದ ದಿ.ಎನ್. ರಾಚಯ್ಯ ಸ್ಮಾರಕದ ಬಳಿ ಮಾದಿಗ ಕ್ರಾಂತಿಕಾರಿ ಒಳ ಮೀಸಲಾತಿ ಹೋರಾಟ ಸಮಿತಿ ಹಾಗೂ ತಿ.ನರಸೀಪುರ ತಾಲೂಕು ಮಾದಿಗ ಸಂಘಟನೆಗಳು ಭಾನುವಾರ ಸಂಜೆ ಆಯೋಜಿಸಿದ್ದ ಸಂಪೂರ್ಣ ಒಳ ಮೀಸಲಾತಿ ಜಾರಿಗಾಗಿ ಕ್ರಾಂತಿಕಾರಿ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.



ಸಂಪೂರ್ಣ ಒಳ ಮೀಸಲಾತಿ ಜಾರಿಗಾಗಿ ಕ್ರಾಂತಿಕಾರಿ ಪ್ರತಿಭಟನಾ ಸಮಾವೇಶವನ್ನು ಗಣ್ಯರು ಉದ್ಘಾಟಿಸಿದರು.

ರಾಜ್ಯದಲ್ಲಿ ಮಾದಿಗರು ಅಸಹಾಯಕರಾಗಿದ್ದೇವೆ. ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಮಹದೇವಪ್ಪ ಮಾದಿಗರನ್ನು ವಂಚಿಸುತ್ತಿದ್ದಾರೆ. 40 ಲಕ್ಷ ಮಾದಿಗರ ಭವಿಷ್ಯದ ಜೊತೆ ಸರ್ಕಾರ ಹಾಗೂ ಸಚಿವರು ಚೆಲ್ಲಾಟವಾಡುತ್ತಿದ್ದಾರೆ. ನ್ಯಾಯ ಕೇಳಲು ಹೋದ ಮಾದಿಗ ಮುಖಂಡರ ವಿರುದ್ಧ ಸಮಾಜ ಕಲ್ಯಾಣ ಸಚಿವರು ಕುತಂತ್ರ ಮಾಡುತ್ತಾರೆ ಎಂದು ಸಚಿವರ ವಿರುದ್ಧ ವಾಗ್ದಾಳಿ ನಡೆಸಿದರು.

ಒಳ ಮೀಸಲಾತಿ ಬಗ್ಗೆ ಚರ್ಚಿಸಲು ನಮಗೆ ಪ್ರೀತಿಯ, ಸಂವಿಧಾನಿಕ ಆಹ್ವಾನವನ್ನು ಸಚಿವ ಡಾ.ಮಹದೇವಪ್ಪ ಅವರು ನೀಡಿದ್ದಾರೆ. ನಾವು ಹೋಗುತ್ತೇವೆ. ಗೌರವಯುತವಾಗಿ ನಡೆಸಿಕೊಂಡು ನಮ್ಮ ಹಕ್ಕನ್ನು ನಮಗೆ ಕೊಡಿಸಿದರೆ ಸರಿ. ಇಲ್ಲವಾದಲ್ಲಿ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ಎಚ್ಚರಿಸಿದರು.

ಸರ್ಕಾರಿ ನೌಕರ ಚಂದ್ರಶೇಖರಯ್ಯ ಅವರು ವಿದ್ಯಾರ್ಥಿಗಳಿಗೆ ಎಡಿಎಕೆಎಎ ಪ್ರಮಾಣ ಪತ್ರ ಇಟ್ಟುಕೊಂಡು 2 ಕಡೆ ಸೌಲಭ್ಯ ಪಡೆಯುವಂತೆ ಹೇಳಿ ಮಾದಿಗರಿಗೆ ವಂಚಿಸುವ ತಂತ್ರದ ಗುಟ್ಟು ಹೇಳಿಕೊಡುತ್ತಿದ್ದಾರೆ ಎಂದು ಅಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಾಮಾಜಿಕ ನ್ಯಾಯಪರ ವೇದಿಕೆ ಅಧ್ಯಕ್ಷ ಹಾಗೂ ವಕೀಲ ಎಸ್.ಅರುಣ್ ಕುಮಾರ್ ಮಾತನಾಡಿ, ನಾವು ಮಾದಿಗರ ಹಕ್ಕನ್ನು ಮಾದಿಗರಿಗೆ ಕೊಡಿ ಎಂದು 3 ದಶಕಗಳಿಂದ ಹೋರಾಡುತ್ತಾ ಬಂದಿದ್ದೇವೆ. ಆದರೆ ಸರ್ಕಾರದಿಂದ ಎಡಿಎಕೆಎಎ ಎಂಬ ಹೆಸರಲ್ಲಿ 4,74,954 ಮಂದಿ ಮೂಲಜಾತಿ ಹೇಳದೆ ಪ್ರಮಾಣ ಪತ್ರ ಪಡೆದಿದ್ದಾರೆ. ಸರ್ಕಾರ ಅವರಲ್ಲಿ 2,37, 477 ಜನರನ್ನು ಸೇರಿಸಿ ಮಾದಿಗರ ಗುಂಪಿನಲ್ಲಿ ಹಾಗೂ ಹೊಲೆಯರ ಗುಂಪಿನಲ್ಲೂ ಅನುಕೂಲಿತ ಮೀಸಲಾತಿಯಲ್ಲಿ ಸೌಲಭ್ಯ ಪಡೆಯುವಂತೆ ಪ್ರಮಾಣ ಪತ್ರ ನೀಡಿದೆ. ಕಾಂಗ್ರೆಸ್ ಸರ್ಕಾರ ನೀಡಿರುವ ಆ.25ರ ಒಳ ಮೀಸಲಾತಿ ಮಾದಿಗ ಸಮುದಾಯಕ್ಕೆ ಮರಣ ಶಾಸನ. ಹೊಲೆಯ ಸಮಾಜದವರು ಮಾದಿಗರ ಹಕ್ಕಲ್ಲಿ ಸೌಲಭ್ಯ ಪಡೆಯುವಂತಾದಲ್ಲಿ ಮಾದಿಗರಿಗೆ ದೊರಕುವುದು ಸೊನ್ನೆ. ಇಂತಹ ಕುತಂತ್ರವನ್ನು ರಾಜ್ಯ ಸರ್ಕಾರ ಮಾಡಿದ್ದು ಈ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕಿದೆ ಎಂದು ಅವರು ಸಮುದಾಯದವರಿಗೆ ಕರೆ ನೀಡಿದರು.

> ಒಳ ಮೀಸಲಾತಿ ವಿಚಾರದಲ್ಲಿ ಸಚಿವ ಡಾ.ಮಹದೇವಪ್ಪ ಅವರು ಮಾದಿಗರಿಗೆ ಅನ್ಯಾಯ ಮಾಡುತ್ತಿದ್ದಾರೆ. ಪ್ರತಿ ಸೌಲಭ್ಯದಲ್ಲೂ ಮಾದಿಗರನ್ನು ವಂಚಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖರ್ಗೆ, ಪರಮೇಶ್ವರ್, ಮಹದೇವಪ್ಪನವರು ಜೊತೆ ಸೇರಿ ನಮ್ಮ ಸಮಾಜಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಸಿದ್ದರಾಮಯ್ಯನವರು ಈಗ ತಮ್ಮ ಸಾಮರ್ಥ್ಯ ಕಳೆದುಕೊಂಡಿದ್ದಾರೆ.–ಸಿ.ರಮೇಶ್, ಮಾಜಿ ಎಂಎಲ್ಸಿ

ಮಾದಿಗ ಸಮಾಜದ ಶ್ರೀಷಡಕ್ಷರ ಮುನಿ ಸ್ವಾಮೀಜಿ ಮಾತನಾಡಿ, ಒಳ ಮೀಸಲಾತಿ ಕೊಟ್ಟು ಅದರಲ್ಲಿ ತಾರತಮ್ಯ ಮಾಡುತ್ತಿರುವ ಸರ್ಕಾರದ ಕ್ರಮ ಸರಿಯಲ್ಲ. ಎಡಿಎಕೆಎಎ ಪ್ರಮಾಣ ಪತ್ರ ಪಡೆದು 2 ಕಡೆ ಸೌಲಭ್ಯ ಪಡೆದರೆ, ಮಾದಿಗ ಸಮಾಜಕ್ಕೆ ನಿಜಕ್ಕೂ ಅನ್ಯಾಯವಾಗುತ್ತದೆ. ಈ ಸಮಾಜಕ್ಕೆ ಅನ್ಯಾಯ ಮಾಡಬೇಡಿ. ನಮಗೆ ಸಿಗಬೇಕಾದ ಹಕ್ಕು ಸಿಗಬೇಕು. ಅದಕ್ಕಾಗಿ ಹೋರಾಟ ಹೀಗೆ ಮುಂದುವರಿಯಲಿ ಎಂದು ಕರೆ ನೀಡಿದರು.

ಈ ವೇಳೆ ಪ್ರಗತಿಪರ ಚಿಂತಕ ಅರಕಲವಾಡಿ ನಾಗೇಂದ್ರ, ಕೋಡಿಹಳ್ಳಿ ಸಂತೋಷ, ಕೆ.ಪ್ರಭುರಾಜ್, ಕೊಡಲಿ ಅರುಂಧತಿ ಸಹಕಾರ ಸಂಘದ ಅಧ್ಯಕ್ಷ ಕೆಂಚಪ್ಪ, ಡಾ.ಬಾಬು ಜಗಜೀವನ್ ರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಮಾಜಿ ಅಧ್ಯಕ್ಷ ಮೂಗೂರು ಸಿದ್ದರಾಜು, ಹುಣಸೂರು ಪುಟ್ಟಯ್ಯ, ಬೆಂಗಳೂರಿನ ಮುನಿರಾಜ್, ಹಾಸನದ ಮಂಜುನಾಥ್, ಹೆಚ್.ಡಿ. ಕೋಟೆ ತಿಮ್ಮಯ್ಯ, ಕೆ.ಆರ್.ನಗರ ತಾಪಂ ಮಾಜಿ ಅಧ್ಯಕ್ಷ ಸ್ವಾಮಿ, ಡಿಎಸ್ಎಸ್ ಸಂಚಾಲಕ ಬೆಳ್ಳಿಯಪ್ಪ, ಬಸವನಪುರ ರಾಜಶೇಖರ್, ಗಾಂಧಿನಗರದ ಇಂದ್ರಮ್ಮ, ನಾರಾಯಣ, ಜವರಪ್ಪ, ಬೂದಬಾಳು ಮಹದೇವ, ಗುಂಡ್ಲುಪೇಟೆ ಹಸಗುಲಿ ಸಿದ್ದಯ್ಯ, ಮಾಜಿ ಪುರಸಭಾ ಸದಸ್ಯ ಗೋಪಿ, ಸುರೇಶ್, ಎಲ್ಐಸಿ ರಾಜಣ್ಣ, ಸಾಮಾಜಿಕ ನ್ಯಾಯಪರ ವೇದಿಕೆ ಅಧ್ಯಕ್ಷ ಮರಡೀಪುರ ರವಿಕುಮಾರ್, ಅರುಂಧತಿ ಸಾಗರ ಸಂಘದ ನಿರ್ದೇಶಕರಾದ ಗೋಪಾಲಪುರ ಮಂಜುನಾಥ್, ಕೆಬ್ಬೆ ಪ್ರಸಾದ್, ಸಿದ್ದನಹುಂಡಿ ಗೋಪಿ, ರವೀಶ್, ಹುಣಸೂರು ರಾಚಪ್ಪ, ಪತ್ರಕರ್ತ ಮೂಗೂರು ಸಿದ್ದರಾಜು, ಭೈರಾಪುರ ಬಾಲು, ಪಾಳ್ಯ ರಾಚಪ್ಪ, ಭೀಮ ಸೇನಾನಿಗಳಾದ ರಾಯಚೂರು ಮಲ್ಲಿಯಪ್ಪ, ಕೊಡೆ ಕೊಡೆಮಾರನಹಳ್ಳಿ ಮಾರನಹಳ್ಳಿ ನಾಗರಾಜು, ರಾಯಚೂರು ಸುರೇಶ್, ವಕೀಲರು ರಾಜೇಂದ್ರ, ಪ್ರಕಾಶ್ ಇತರರಿದ್ದರು.

ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿ

ನಂಜನಗೂಡು, ಅ.12– ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಸರ್ಕಾರ 98 ಸಾವಿರ ಕೋಟಿ ರೂ.ಗಳನ್ನು ನೀಡಿದೆ. ರಾಜ್ಯದ ಪ್ರತಿ ಕುಟುಂಬಕ್ಕೆ ಮಾಸಿಕ 4 ರಿಂದ 8 ಸಾವಿರದವರೆಗೆ ನೇರವಾಗಿ ಆರ್ಥಿಕ ಸಹಾಯ ದೊರಕುತ್ತಿದ್ದು, ದೇಶದಲ್ಲಿ ರಾಜ್ಯದ ಜನರ ತಲಾ ಆದಾಯ ಮೊದಲ ಸ್ಥಾನದಲ್ಲಿದೆ ಎಂದು ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರ್‌ನಾಥ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣಾ ಸಮಯದಲ್ಲಿ ಜನರಿಗೆ ಭರವಸೆ ನೀಡಿದ್ದಂತೆ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ.



ಪುಷ್ಪಾ ಅಮರ್‌ನಾಥ್ ಶ್ರೀಕಂಠೇಶ್ವರನ ದರ್ಶನ ಪಡೆದರು.

ಇದರಿಂದಾಗಿ ರಾಜ್ಯದ ಜಿಡಿಪಿ ಉತ್ತಮ ಸ್ಥಿತಿಗೆ ತಲುಪಿದ್ದು, ದೇಶಕ್ಕೆ ಗುಜರಾತ್ ಮಾದರಿಯಲ್ಲ ಕರ್ನಾಟಕ ಮಾದರಿಯಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 21 ತಿಂಗಳ 42 ಸಾವಿರ ರೂ.ಗಳನ್ನು ಮಹಿಳೆಯರ ಖಾತೆಗೆ ನೇರವಾಗಿ ಜಮೆ ಮಾಡಲಾಗಿದ್ದು, ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಗೃಹಜ್ಯೋತಿ ಯೋಜನೆಯಿಂದಾಗಿ ಪ್ರತಿ ಕುಟುಂಬಕ್ಕೆ 600 ರೂಪಾಯಿ ಉಳಿತಾಯವಾಗುತ್ತಿದೆ. ಕಾಂಗ್ರೆಸ್ ಯಶಸ್ವಿಯಾಗಿ ಜಾರಿಗೆ ತಂದ ಗ್ಯಾರಂಟಿ ಯೋಜನೆಯನ್ನು ಸಹಿಸಲಾಗದೆ ಬಿಜೆಪಿಯವರು ರಾಜ್ಯದ ಬೊಕ್ಕಸ ಬರಿದಾಗಿದೆ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ. ಅಲ್ಲದೇ ಚುನಾವಣೆಗಳಲ್ಲಿ ಕಾಂಗ್ರೆಸ್ ಸರ್ಕಾರ ನೀಡಿದ ಗ್ಯಾರಂಟಿ ಯೋಜನೆಗಳನ್ನು ಕಾಪಿ ಮಾಡಿಕೊಂಡು ಸವಲತ್ತುಗಳನ್ನು ನೀಡುವುದಾಗಿ ಪ್ರಚಾರ ಮಾಡುತ್ತಿದೆ. ರಾಜ್ಯ ಸರ್ಕಾರ ಸುಭದ್ರವಾಗಿದೆ. ಬಿಜೆಪಿಯವರು ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆ ಬಾಕಿಯನ್ನು ಪ್ರಧಾನಿ ಮೋದಿ ಹಾಗೂ ನಿರ್ಮಲ ಸೀತಾರಾಮನ್ ಅವರಿಗೆ ಮನವರಿಕೆ ಮಾಡಿ ರಾಜ್ಯಕ್ಕೆ ತಂದು ಕೊಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಅಮರ್‌ನಾಥ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ, ಗ್ರಾಮಾಂತರ ಅಧ್ಯಕ್ಷ ಕರಳಪುರ ವಿಜಯ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿವಿಧೋದ್ದೇಶ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರು ಸಂಭ್ರಮಾಚರಣೆ ನಡೆಸಿದರು.

ಪಿರಿಯಾಪಟ್ಟಣ, ಅ.12– ತಾಲೂಕು ಸರ್ಕಾರಿ ನೌಕರರ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ನಡೆಯಿತು.

ಪಟ್ಟಣದ ಬಾಲಕರ ಪೇಟೆ ಶಾಲೆಯಲ್ಲಿ ನಡೆದ ಚುನಾವಣೆಯಲ್ಲಿ 15 ನಿರ್ದೇಶಕರ ಪೈಕಿ 4 ಸ್ಥಾನಗಳಿಗೆ ಕಂದಾಯ ಇಲಾಖೆಯ ಗಿರೀಶ್, ತಾಲೂಕು ಪಂಚಾಯತ್ ರಾಜ್ ಇಲಾಖೆ ಸಂದೇಶ್, ಶಿಕ್ಷಣ ಇಲಾಖೆಯ ಪರಿಶಿಷ್ಟ ವಿಭಾಗದಿಂದ ಸಿ.ಮಂಜುನಾಥ್, ಹಿಂದುಳಿದ ವರ್ಗ ಬಿ ಕ್ಷೇತ್ರದಿಂದ ಭವಾನಿ.ಆರ್ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆಯಲ್ಲಿ ವಿವಿಧ ಇಲಾಖೆಯಿಂದ ನೂತನ ನಿರ್ದೇಶಕರಾಗಿ ವರದೇಶ್. ಹೆಚ್.ಜೆ, ಕೈಲಾಶ್ ಪತಿ. ಕೆ.ಟಿ, ಬಸವರಾಜ್ ಹೆಚ್, ರವಿಕುಮಾರ್ ಪಿ. ಎನ್, ರಮೇಶ್. ಆರ್, ಉದಯ ಹೆಚ್.ಪಿ, ಚಿಕ್ಕೇಗೌಡ.ಟಿ, ಲೋಕೇಶ್.ಪಿ, ಸರ್ವ ಮಂಗಳ ವಿ.ಎನ್, ಚೈತ್ರಾ.ಪಿ, ಸಿ.ಕೆ.ಗಣೇಶ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಇಲಾಖೆ ಅಧಿಕಾರಿ ಹಿತೇಂದ್ರ ಕಾರ್ಯ ನಿರ್ವಹಿಸಿದರು.


ಈ ವೇಳೆ ವಿವಿಧ ಇಲಾಖೆಯ ಸರ್ಕಾರಿ ನೌಕರರಾದ ರಾಮಚಂದ್ರ, ಪ್ರಶಾಂತ್, ಸುರೇಶ್, ನಟರಾಜ್, ರಘು, ಕೆ.ಎಲ್.ಸುರೇಶ, ರಮೇಶ್ ಸೀಗೂರು, ಅನಂತ್, ಮಧುರೇಶ್, ನಾಗಣ್ಣಗೌಡ, ಎ.ಚಂದ್ರು, ಎಂ.ಕೆ.ಸುರೇಶ, ಸೋಮಶೇಖರ್, ಗಣೇಶ್ ಕುಮಾರ್, ಕೆ.ಹೆಚ್. ನಾಗರಾಜ ಸೇರಿದಂತೆ ಇತರರಿದ್ದರು.

ಪ್ರಮುಖ ಪ್ರವಾಸಿ ಕ್ಷೇತ್ರವಾಗಿ ಬೆಟ್ಟದಪುರ ಅಭಿವೃದ್ಧಿ

ಸಚಿವ ಕೆ.ವೆಂಕಟೇಶ್ ಭರವಸೆ

ಬೆಟ್ಟದಪುರ, ಅ.12– ಬೆಟ್ಟದಪುರವನ್ನು ಜಿಲ್ಲೆಯ ಪ್ರಮುಖ ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಸಚಿವ ಕೆ.ವೆಂಕಟೇಶ್ ಭರವಸೆ ನೀಡಿದರು.

ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ದೇವಾಲಯ, ರಸ್ತೆ ಅಭಿವೃದ್ಧಿಗೆ ಸರ್ಕಾರದಿಂದ 50 ಕೋಟಿ ರೂ. ಮಂಜೂರು ಮಾಡಿಸಿದ ಹಿನ್ನೆಲೆಯಲ್ಲಿ ಬೆಟ್ಟದತುಂಗಾ ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರು, ಮುಖಂಡರು ಮತ್ತು ಜನ ಪ್ರತಿನಿಧಿಗಳಿಂದ ನೆನಪಿನ ಕಾಣಿಕೆ ಹಾಗೂ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡಲಾಗುವುದು. ಅಲ್ಲದೇ ಬೆಟ್ಟದಪುರದ ಮೂಡಲ ಗವಿ ಸಿದ್ದೇಶ್ವರ ದೇವಾಲಯ, ಏಣಿ ಆಂಜನೇಯಸ್ವಾಮಿ ಹಾಗೂ ಚೋಳರ ಕಾಲದ ಗುಹೆಗಳನ್ನು ಅಭಿವೃದ್ಧಿಪಡಿಸಿ ಬೆಟ್ಟದಪುರವನ್ನು ಮೈಸೂರು ಜಿಲ್ಲೆಯ ಪ್ರಮುಖ ಪ್ರವಾಸಿ ಕ್ಷೇತ್ರವಾಗಿ ಮಾಡಲಾಗುವುದೆಂದು ತಿಳಿಸಿದರು.



ಸಚಿವ ಕೆ.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕುಡಕೂರು ಪ್ರಕಾಶ್‌ರಾಜ್ ಅರಸ್, ಮಾಜಿ ಗ್ರಾಪ ಸದಸ್ಯರಾದ ಚಿಕ್ಕೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಪ್ಪ, ಗ್ರಾಪಂ ಮಾಜಿ ಸದಸ್ಯರಾದ ಯಶೋಧರ, ಗ್ರಾಪಂ ಸದಸ್ಯ ಸಣ್ಣಪ್ಪಾಜಿಗೌಡ, ಗ್ಯಾರಂಟಿ ಸಮಿತಿ ಸದಸ್ಯರಾದ ಕೃಷ್ಣೇಗೌಡ, ಹಾಲು ಡೈರಿ ಅಧ್ಯಕ್ಷ ರಾಮೇಗೌಡ ಸದಸ್ಯರಾದ ಶೇಖರ್, ಪ್ರಸನ್ನ, ನಿರ್ದೇಶಕ ಬಲರಾಮೇಗೌಡ, ಮಾಜಿ ಎಪಿಎಂಸಿ ನಿರ್ದೇಶಕ ಸ್ವಾಮಿಗೌಡ ಹಾಜರಿದ್ದರು.

ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ

ಬನ್ನೂರು, ಅ.12– ಸೋಲು ಗೆಲುವು ಒಂದೇ ನಾಣ್ಯದ ಎರಡು ಮುಖಗಳು. ಸೋತಾಗ ಕುಗ್ಗದೇ, ಗೆದ್ದಾಗ ಹಿಗ್ಗದೇ ಎರಡನ್ನು ಸಮನವಾಗಿ ಸ್ವೀಕರಿಸಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದು ವಕೀಲ ಶಿವಮೂರ್ತಿ ತಿಳಿಸಿದರು.

ಪಟ್ಟಣದ ಪುಟ್ಬಾಲ್ ಮೈದಾನದ ಆವರಣದಲ್ಲಿ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಟೀಮ್ ಸುನೀಲ್ ಬೋಸ್ ವತಿಯಿಂದ ಎಸ್.ಎಲ್.ಧನುಷ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಸುನೀಲ್ ಬೋಸ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬನ್ನೂರು ಶಾಂತಿಗೆ ಹೆಸರಾಗಿದೆ. ಇಲ್ಲಿ ಯಾವುದೇ ಕ್ರೀಡೆ ನಡೆದರೂ ಅದು ಯಶಸ್ವಿಯಾಗಿ ನಡೆಯುತ್ತದೆ. ಸೋತವರು ಹತಾಶರಾಗದೇ ಮುಂದಿನ ದಿನಗಳಲ್ಲೂ ಕ್ರೀಡೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು.



ಪ್ರಥಮ ಸ್ಥಾನ ಪಡೆದ ಬನ್ನೂರು ಬ್ಲಾಸ್ಟರ್ ತಂಡಕ್ಕೆ ಬಹುಮಾನ ವಿತರಿಸಲಾಯಿತು.


ಕಾಂಗ್ರೆಸ್ ಮುಖಂಡ ಸೈಯದ್ ಜಮ್ರಾನ್ ಮಾತನಾಡಿ, ಮನುಷ್ಯನಿಗೆ ಮನರಂಜನೆ ನೀಡುವಲ್ಲಿ ಕ್ರೀಡೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಕ್ರೀಡೆಗಳಿಂದ ಮನುಷ್ಯನ ವ್ಯಕ್ತಿತ್ವ ಹಾಗೂ ದೈಹಿಕ ಸಾಮರ್ಥ್ಯ ವಿಕಸನವಾಗಲಿದ್ದು, ಯುವಕರು ಹೆಚ್ಚಾಗಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಬಹುಮಾನವೇ ಯಶಸ್ಸಿನ ಅಂತಿಮ ಹಂತವಲ್ಲ. ಸೋತ ಸಂದರ್ಭದಲ್ಲಿನ ತಪ್ಪುಗಳನ್ನು ಸರಿಪಡಿಸಿಕೊಂಡರೆ ಯಶಸ್ಸಿನ ಮೆಟ್ಟಿಲು ದೂರವಾಗುವುದಿಲ್ಲ ಮುಂದಿನ ದಿನಗಳಲ್ಲೂ ಎಲ್ಲರೂ ಸಹಕಾರ ನೀಡುವಂತೆ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವಂತೆ ಕೋರಿದರು.

ತೀವ್ರ ಕುತೂಹಲ ಕೆರಳಿಸಿದ್ದ ಫೈನಲ್ ಪಂದ್ಯದಲ್ಲಿ ಬನ್ನೂರು ಬ್ಲಾಸ್ಟರ್, ಸೂರಿ ಕಿಲ್ಲರ್ ತಂಡವನ್ನು ಮಣಿಸಿ ಪ್ರಥಮ ಸ್ಥಾನದೊಂದಿಗೆ 30 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ತನ್ನದಾಗಿಸಿಕೊಂಡಿತು. ದ್ವಿತೀಯ ಸ್ಥಾನ ಪಡೆದ ಸೂರಿ ಕಿಲ್ಲರ್ ತಂಡ 15 ಸಾವಿರ ಹಾಗೂ ಆಕರ್ಷಕ ಟ್ರೋಫಿ, ಹಾಸನಾಂಬೆ ತಂಡ ತೃತೀಯ ಸ್ಥಾನದೊಂದಿಗೆ 5 ಸಾವಿರ ಹಾಗೂ ಟ್ರೋಫಿಯನ್ನು ಪಡೆಯಿತು.


ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಮಾಜಿ ಪುರಸಭಾ ಉಪಾಧ್ಯಕ್ಷ ರಾಮಲಿಂಗೇಗೌಡ, ಡಿ.ಪದ್ಮನಾಭ್, ಪುರಸಭಾ ಸದಸ್ಯರಾದ ಲೋಕಾಂಬಿಕಾ, ಶಿವಣ್ಣ, ಆರ್.ಶಿವಣ್ಣ, ಯಜಮಾನರಾದ ಜಯಮುತ್ತು, ನಂಜುಂಡಸ್ವಾಮಿ, ವಕೀಲ ಸಂಘದ ಖಜಾಂಚಿ, ಮಹದೇವಸ್ವಾಮಿ, ಸುಹೇಲ್ ಸೇರಿದಂತೆ ಪ್ರಮುಖರಿದ್ದರು.

ದೇವೇಗೌಡರ ಆರೋಗ್ಯ ವಿಚಾರಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ



ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಶಾಸಕ ಜಿ.ಡಿ.ಹರೀಶ್ ಗೌಡರು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಆಶೀರ್ವಾದ ಪಡೆದು ಮಾತನಾಡಿ, ವೈದ್ಯರ ಸಲಹೆಯಂತೆ ಈಗ ಅವರು ಗುಣಮುಖರಾಗಿದ್ದು, ಶೀಘ್ರ ಮನೆಗೆ ಬರಲಿದ್ದಾರೆಂದು ತಿಳಿಸಿದರು.


ನೂತನ ಇನ್ಸ್‌ಪೆಕ್ಟರ್ ಆನಂದ್ ಅಧಿಕಾರ ಸ್ವೀಕಾರ



ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ನೂತನ ಇನ್ಸ್‌ಪೆಕ್ಟರ್ ಆಗಿ ಆನಂದ್ ಅಧಿಕಾರ ಸ್ವೀಕರಿಸಿದರು. ನಿರ್ಗಮಿತ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಅಧಿಕಾರ ಹಸ್ತಾಂತರಿಸಿದರು.

ಸಾಲು ಮರದ ತಿಮ್ಮಕ್ಕ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

ಹುಣಸೂರು, ಅ.12–ಹುಣಸೂರಿನ ರಂಗ ಕಲಾವಿದ, ಚಿತ್ರನಟ ಕುಮಾರ್ ಅರಸೇಗೌಡರು



'ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ರಾಷ್ಟ್ರೀಯ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ (ರಿ) ಕರ್ನಾಟಕ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಅ.19 ರಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬನ್ನೂರು ಪುರಸಭೆಗೆ ಆಡಳಿತಾಧಿಕಾರಿ ನೇಮಿಸದಂತೆ ಹೈಕೋರ್ಟ್ ಸೂಚನೆ: ಸ್ವಾಗತ

ಬನ್ನೂರು, ಅ.12– ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಸಭೆ, ಹಾಸನ ಜಿಲ್ಲೆ ಹೊಳೆನರಸೀಪುರ ಪುರಸಭೆ, ಮಂಡ್ಯ ಜಿಲ್ಲೆಯ ಮಳವಳ್ಳಿ ಪುರಸಭೆ, ಮೈಸೂರು ಜಿಲ್ಲೆಯ ಬನ್ನೂರು ಪುರಸಭೆ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವವರೆಗೂ ಆಡಳಿತಾಧಿಕಾರಿ ನೇಮಕ ಮಾಡದಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿರುವುದನ್ನು ಇಲ್ಲಿನ ಬನ್ನೂರು ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸದಸ್ಯರು ಸ್ವಾಗತಿಸಿದ್ದಾರೆ.

ಪುರಸಭೆಯ 5 ವರ್ಷದ ಅವಧಿಗೆ ಚುನಾವಣೆ ನಡೆದು ಅಧ್ಯಕ್ಷ, ಉಪಾಧ್ಯಕ್ಷ ಅಧಿಕಾರವಧಿ 30 ತಿಂಗಳಂತೆ 2 ಅವಧಿ ನಿಗದಿಯಾಗಿತ್ತು. ಮೊದಲ ಅವಧಿಗೆ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ ನಡೆದು ಮೊದಲ ಸಭೆ ನಡೆದ ದಿನದಿಂದ ಮುಂದಿನ 5 ವರ್ಷ ಚುನಾಯಿತ ಸದಸ್ಯರ ಅವಧಿ ಇರುತ್ತದೆ. ಮೊದಲ ಅವಧಿಯ 30 ತಿಂಗಳ ಬಳಿಕ 2ನೇ ಅವಧಿಯ 30 ತಿಂಗಳಿಗೆ ಅಧ್ಯಕ್ಷ ಉಪಾಧ್ಯಕ್ಷರ ಹುದ್ದೆಯ ಮೀಸಲು ನಿಗದಿ ವಿಳಂಬದಿಂದಾಗಿ 16 ತಿಂಗಳವರೆಗೂ ಆಯಾ ಪುರಸಭೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡಿತ್ತು. ಬಳಿಕ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದಿದೆ. ಹೀಗಾಗಿ 2ನೇ ಅವಧಿ 30 ತಿಂಗಳು ಅಧಿಕಾರ ಅವಧಿ ಸಿಗುವುದಿಲ್ಲ. ಹೀಗಾಗಿ ನ.9 ರಂದು ಈಗಿನ ಅಧ್ಯಕ್ಷ, ಉಪಾಧ್ಯಕ್ಷರ ಅವಧಿ ಮುಗಿಯುತ್ತಿತ್ತು. ಆದ್ದರಿಂದ ಅವಧಿ ಮುಗಿಯುವ ಮುನ್ನವೇ ಪುರಸಭೆಗೆ ಆಡಳಿತಾಧಿ ಕಾರಿಯನ್ನು ನೇಮಿ ಸಬಾರದೆಂದು ಬನ್ನೂರು ಪುರಸಭೆಯ ಸರ್ವ ಸದಸ್ಯರು ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಕೋರ್ಟ್ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವವರೆಗೂ ಆಡಳಿತಾಧಿಕಾರಿ ನೇಮಕ ಮಾಡದಂತೆ ಸೂಚನೆ ನೀಡಿರುವುದನ್ನು ಸ್ವಾಗತಿಸಿದ್ದಾರೆ.

ಧನಸಹಾಯ ವಿತರಣೆ



ಅನಾರೋಗ್ಯದಿಂದ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹೆಚ್.ಡಿ.ಕೋಟೆ ತಾಲೂಕಿನ ದಸಂಸ ಸಂಚಾಲಕ ದೇವರಾಜು ಅವರ ಆರೋಗ್ಯವನ್ನು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕ ವಿಚಾರಿಸಿ, ಬಳಿಕ ಧನ ಸಹಾಯ ಮಾಡಿದರು. ಈ ವೇಳೆ ಡಾ.ರಾಮರಾಜು, ಕುಮಾರ್, ರೇವಣ್ಣ, ಲೇಖನ್ ಗೌಡ, ನರಸಿಂಹರಾಜು, ವಕೀಲರಾದ ಪ್ರಶಾಂತ್, ಪ್ರಸನ್ನ ಇತರರಿದ್ದರು.

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ನಂಜನಗೂಡು ತಾಲೂಕಿನ ಹುರದಲ್ಲಿ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್ ವತಿಯಿಂದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಡೆಯಿತು. ಈ ವೇಳೆ ಹುರಾ ಆಸ್ಪತ್ರೆ ವೈದ್ಯಾಧಿಕಾರಿ ಪ್ರದೀಪ್, ಸ್ವರ್ಣಲತಾ, ಮ್ಯಾಜಿಕ್ ಬಸ್ ಸಂಸ್ಥೆಯ ದೀಪು, ಸವಿತ, ವಿಜಯ್, ಹುಚ್ಚಪ್ಪ ಪ್ರದೀಪ್ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ಇತರರಿದ್ದರು.

ಸಮಾಜಮುಖಿ ಕಾರ್ಯಗಳೊಂದಿಗೆ

ದೊಡ್ಡಸ್ವಾಮೇಗೌಡರ ಹುಟ್ಟುಹಬ್ಬ ಆಚರಣೆ

ಕೆ.ಆರ್.ನಗರ, ಅ.12– ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರು ಹಾಗೂ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರ 75ನೇ ಜನ್ಮ ದಿನೋತ್ಸವವನ್ನು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಂಭ್ರಮದಿಂದ ಆಚರಿಸಿದರು.

ಹುಟ್ಟುಹಬ್ಬದ ಅಂಗವಾಗಿ ಮುಂಜಾನೆಯೇ ಹುಟ್ಟೂರು ಕೆಸ್ತೂರು ಕೊಪ್ಪಲಿಗೆ ತೆರಳಿದ ದೊಡ್ಡಸ್ವಾಮೇಗೌಡರು ಮನೆ ದೇವರಿಗೆ ಪೂಜೆ ಸಲ್ಲಿಸಿ, ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿದರು. ಬಳಿಕ ಚುಂಚನಕಟ್ಟೆ ಶ್ರೀರಾಮ ದೇವಾಲಯ, ಕೆ.ಆರ್. ನಗರದ ಹಳೆ ಎಡತೊರೆಯ ಅರ್ಕೇಶ್ವರ ಸ್ವಾಮಿ ದೇವಾಲಯ, ಖಾದರ್ ಲಿಂಗಾವಲಿಯವರ ಸಮಾಧಿ, ಆಂಜನೇಯ ಬಡಾವಣೆಯ ಆಂಜನೇಯಸ್ವಾಮಿ ದೇವಾಲಯ, ಬಸವೇಶ್ವರ ಬಡಾವಣೆಯ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ಡಾ.ರಾಜಕುಮಾರ್ ಬಾನಾಂಗಳದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಆಗಮಿಸಿದರು. ಬಳಿಕ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಬೃಹತ್ ಉದ್ಯೋಗ ಮೇಳ ಹಾಗೂ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಲಾಯಿತು.



ಉದ್ಯೋಗ ಮೇಳ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಶ್ರೀನಟರಾಜ ಸ್ವಾಮೀಜಿ ಉದ್ಘಾಟಿಸಿದರು.

ಈ ವೇಳೆ ಕಾಗಿನೆಲೆ ಕನಕ ಗುರು ಪೀಠದ ಶ್ರೀಶಿವಾನಂದಪುರಿ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜಸ್ವಾಮಿ ಸ್ವಾಮೀಜಿ ಮಾತನಾಡಿದರು. ಉದ್ಯೋಗಮೇಳದಲ್ಲಿ ನೂರಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದವು.

ಕಾರ್ಯಕ್ರಮದಲ್ಲಿ ಅರಕೆರೆ ವಿರಕ್ತ ಮಠದ ಶ್ರೀಸಿದ್ದೇಶ್ವರ ಸ್ವಾಮೀಜಿ, ಶ್ರೀಮೃತ್ಯುಂಜಯ ಸ್ವಾಮೀಜಿ, ಪಿರಿಯಾಪಟ್ಟಣದ ಕಗ್ಗುಂಡಿ ಶ್ರೀಗುರು ಅರಳಯ್ಯನವರ ಮಠದ ಶ್ರೀರುದ್ರಮುನಿ ಸ್ವಾಮೀಜಿ, ವಿವಿಧ ಮಠಾಧೀಶರು, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಸಂಗೊಳ್ಳಿ ರಾಯಣ್ಣ ಸ್ನೇಹ ಬಳಗ ನಾಮಫಲಕ ಅನಾವರಣ

ಕಂಪಲಾಪುರ, ಅ.12– ಸಂಘ ಸಂಸ್ಥೆಗಳು ರಚನೆಯಾಗುವುದು ಎಷ್ಟು ಮುಖ್ಯವೋ, ಅವುಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಅಷ್ಟೇ ಮುಖ್ಯ ಎಂದು ವಕೀಲ ಕೆ.ಭಾಸ್ಕರ್ ತಿಳಿಸಿದರು.

ಇಲ್ಲಿನ ಕಂಪಲಾಪುರ ಕೊಪ್ಪಲಿನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಂಗೊಳ್ಳಿ ರಾಯಣ್ಣ ಸ್ನೇಹ ಬಳಗದ ನಾಮಫಲಕವನ್ನು ಭಾನುವಾರ ಅನಾವರಣಗೊಳಿಸಿ ಮಾತನಾಡಿದ ಅವರು, ಸಂಘ ಸಂಸ್ಥೆಗಳು ಸಮಾಜದ ಆಗು ಹೋಗುಗಳಿಗೆ ಸ್ಪಂದಿಸಬೇಕು. ಜೊತೆಗೆ ಇದರಲ್ಲಿ ಯಾವುದೇ ರಾಜಕೀಯ ಬೆರೆಸಬಾರದು. ರಾಜಕೀಯ ಹೊರತುಪಡಿಸಿ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕು. ಸಂಘದ ವಿಚಾರ ಬಂದಾಗ ಎಲ್ಲರೂ ಕೈ ಜೋಡಿಸಬೇಕು. ಆಗ ಮಾತ್ರ ಸಂಘ ಮುನ್ನಡೆಯಲು ಸಾಧ್ಯ ಎಂದರು.



ಸಂಗೊಳ್ಳಿ ರಾಯಣ್ಣ ಸ್ನೇಹ ಬಳಗದ ನಾಮಫಲಕ ಅನಾವರಣಗೊಳಿಸಲಾಯಿತು.

ಇದೇ ವೇಳೆ ಸಂಗೊಳ್ಳಿ ರಾಯಣ್ಣ ಸ್ನೇಹ ಬಳಗದ ನೂತನ ಪದಾಧಿಕಾರಿ ಗಳಾಗಿ ಕೆ.ಆರ್.ಶ್ರೀನಿವಾಸ್ (ಅಧ್ಯಕ್ಷ), ಎಂ.ಎನ್. ಅನಿಲ್ ಕುಮಾರ್ (ಗೌರವಾಧ್ಯಕ್ಷ), ಕೆ.ಎಂ. ನಾರಾಯಣ, ಚಂದ್ರ, ಕೀರ್ತಿ(ಉಪಾಧ್ಯಕ್ಷರು), ಮೋಹನ್ (ಕಾರ್ಯ ದರ್ಶಿ), ದೀಪು (ಸಹ ಕಾರ್ಯದರ್ಶಿ), ತಮ್ಮಯ್ಯ (ಖಜಾಂಚಿ), ಮಂಜುನಾಥ್ (ಸಂಘಟನಾ ಕಾರ್ಯದರ್ಶಿ), ಚಿಕ್ಕಣ್ಣ (ಸಂಚಾಲಕ), ಕೆ.ಎನ್.ಗಿರೀಶ್ (ಸಹ ಸಂಚಾಲಕ), ಕೆ.ಭಾಸ್ಕರ್ (ಕಾನೂನು ಸಲಹೆಗಾರರು), ಕೆ.ಎಂ.ಲಕ್ಷ್ಮಣ್, ಚಂದ್ರ, ಕೆ.ಆರ್.ನವೀನ್, (ಸಲಹೆಗಾರರು), ರಮೇಶ್, ಮಂಜುನಾಥ್, ನಾಗರಾಜು, ರಾಮಮೂರ್ತಿ, ಪುಟ್ಟರಾಜು (ನಿರ್ದೇಶಕರು) ಆಯ್ಕೆಯಾದರು.

ಕಾರ್ಯಕ್ರಮಕ್ಕೂ ಮುನ್ನ ಭಕ್ತ ಕನಕದಾಸರು ಹಾಗೂ ಸಂಗೊಳ್ಳಿ ರಾಯಣ್ಣ ನಾಮಫಲಕಕ್ಕೆ ಪೂಜೆ ನೆರವೇರಿಸಲಾಯಿತು. ಇದೇ ವೇಳೆ ಸಮಾಜದ ಹಿರಿಯರಾದ ಮಹದೇವ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಹಾಲಿನ ಡೇರಿ ಅಧ್ಯಕ್ಷ ಕೆ.ಗೋಪಾಲ್, ಚಂದ್ರಣ್ಣ ಸೇರಿದಂತೆ ಕುರುಬ ಸಮಾಜದ ಬಾಂಧವರು ಹಾಜರಿದ್ದರು.

ಫಿಟ್ ಇಂಡಿಯಾ ಅಭಿಯಾನ ಹಿನ್ನೆಲೆಯ

ಹಾಫ್ ಮ್ಯಾರಥಾನ್‌ನಲ್ಲಿ ಸಾವಿರಾರು ಮಂದಿ ಭಾಗಿ

ಮೈಸೂರು,ಅ.12(ಎಂಟಿವೈ)– ಫಿಟ್ ಇಂಡಿಯಾ ಅಭಿಯಾನದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಭಾನುವಾರ ಬೆಳಗ್ಗೆ ಆಯೋಜಿಸಿದ್ದ ಹಾಫ್ ಮ್ಯಾರಥಾನ್ ಹಾಗೂ 10 ಕಿಮಿ ಓಟದ ಸ್ಪರ್ಧೆಯಲ್ಲಿ 3 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಲೈಫ್ ಈಸ್ ಕಾಲಿಂಗ್ ಸ್ಪೋರ್ಟ್ಸ್ ಸಂಸ್ಥೆ ಆಯೋಜಿಸಿದ್ದ 15ನೇ ಆವೃತ್ತಿಯ ಮೈಸೂರು ಹಾಫ್ ಮ್ಯಾರಥಾನ್ ಹಾಗೂ 10 ಕಿಮಿ, 5 ಕಿಮಿ ಓಟದ ಸ್ಪರ್ಧೆಗೆ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಭಾನುವಾರ ಬೆಳಗ್ಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡಾ ಚಟುಚಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮೈಸೂರಲ್ಲಿ ಆಯೋಜಿಸಿರುವ ಹಾಫ್ ಮ್ಯಾರಥಾನ್‌ನಲ್ಲಿ ಅಪಾರ ಸಂಖ್ಯೆಯ ಕ್ರೀಡಾಸಕ್ತರು ಪಾಲ್ಗೊಂಡಿರುವುದು ಶ್ಲಾಘನೀಯ. ಎಲ್ಲರೂ ಆರೋಗ್ಯ ಕಾಪಾಡಿಕೊಂಡರೆ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಫಿಟ್ ಇಂಡಿಯಾ ಅಭಿಯಾನ ಆಯೋಜಿಸಿ, ಕ್ರೀಡಾ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸುತ್ತಿದೆ ಎಂದರು.



ಮೈಸೂರಲ್ಲಿ ಭಾನುವಾರ ನಡೆದ ಹಾಫ್ ಮ್ಯಾರಥಾನ್‌ಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿ, ಸ್ಪರ್ಧಿಗಳೊಂದಿಗೆ ಓಡುವ ಮೂಲಕ ಗಮನ ಸೆಳೆದರು

ಬಳಿಕ ಇತರೆ ಸ್ಪರ್ಧಿಗಳಂತೆ ಓಟದ ಸ್ಪರ್ಧೆಯಲ್ಲಿ ಓಡುವ ಮೂಲಕ ಗಮನ ಸೆಳೆದರು. ಈ ಸಂದರ್ಭದಲ್ಲಿ ಅಪೊಲೋ ಬಿಜಿಎಸ್ ಆಸ್ಪತ್ರೆಗಳ ಉಪಾಧ್ಯಕ್ಷ ಭಾರತೀಶ್ ರೆಡ್ಡಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಪುರುಷರ ಹಾಫ್ ಮ್ಯಾರಾಥಾನ್: ಮುಕ್ತ ವಿಭಾಗದ 16 ರಿಂದ 45 ವರ್ಷದೊಳಗಿನ ಸ್ಪರ್ಧಿಗಳಲ್ಲಿ ಕೆ.ಜಿ.ಬಾಲಾಜಿ (ಪ್ರ), ಟಿ.ಡಿ.ಅರುಣ್ (ದ್ವಿ), ಮಣಿಕಂಠನ್ ನಾರಾಯಣನ್ (ತೃ).

ಪುರುಷರ ಹಿರಿಯರ ವಿಭಾಗದಲ್ಲಿ (46 ರಿಂದ 60 ವರ್ಷ) ವೀರ ಮಣಿಕಂಠ (ಪ್ರ), ನಾಗೇಶ್ ಕುಮಾರ್ (ದ್ವಿ), ಸುಧಾಕರ್ ರಾಜಶೇಖರ್ (ತೃ).

ಹಿರಿಯ ನಾಗರಿಕರ ಪುರುಷರ ವಿಭಾಗ (61 ವರ್ಷ ಮೇಲ್ಪಟ್ಟವರು)ದಲ್ಲಿ ತಿರುವೆಂಗಡಂ ಅಶೋಕ (ಪ್ರ), ಜಿ.ಡಿ.ಗಿರೀಶ್ (ದ್ವಿ), ಮುರುಳೀಧರ ರಾಮಮೂರ್ತಿ ತೃತೀಯ ಬಹುಮಾನ ಪಡೆದರು.

ಮಹಿಳೆಯರ ಹಾಫ್ ಮ್ಯಾರಥಾನ್: ಮುಕ್ತ ವಿಭಾಗ (16 ರಿಂದ 45 ವರ್ಷ)ದಲ್ಲಿ ರಾಜಲಕ್ಷ್ಮಿ ಸ್ವಾಮಿನಾಥನ್ (ಪ್ರ), ಮಮತಾ ಯಾದವ್ (ದ್ವಿ), ಗೀತಾಂಜಲಿ ಗುಬ್ಬಿವಾಡ್ ತೃತೀಯ ಬಹುಮಾನ ಪಡೆದರು.

ಹಿರಿಯ ಮಹಿಳಾ ವಿಭಾಗ (46 ರಿಂದ 60 ವರ್ಷ)ದಲ್ಲಿ ದಿವ್ಯಾ ಮಾದಯ್ಯ (ಪ್ರ), ಸಿಂಧು ಶರ್ಮಾ (ದ್ವಿ), ಸೋನಿ ಶಶಿ ತೃತೀಯ ಬಹುಮಾನ ತನ್ನದಾಗಿಸಿಕೊಂಡರು.

10 ಕಿ.ಮೀ. ಓಟದ ಸ್ಪರ್ಧೆ: ಮುಕ್ತ ವಿಭಾಗದಲ್ಲಿ (16ರಿಂದ 45 ವರ್ಷ) ಕೆ.ಕಿರಣ್ (ಪ್ರ), ಎಸ್.ಆಕಾಶ್ (ದ್ವಿ), ಧೃವ ರಂಗಿನ್ ತೃತೀಯ ಬಹುಮಾನ ಪಡೆದಿದ್ದಾರೆ.

ಹಿರಿಯರ ವಿಭಾಗ (46 ರಿಂದ 60 ವರ್ಷ) ಓಟದ ಸ್ಪರ್ಧೆಯಲ್ಲಿ ಆರ್.ಕೆ. ಮೂರ್ತಿ (ಪ್ರ), ಸಾಯಿ ರೈ (ದ್ವಿ), ಪ್ರಶಾಂತ್ ತೃತೀಯ ಬಹುಮಾನ ಪಡೆದರು.

ಹಿರಿಯ ನಾಗರಿಕರ ವಿಭಾಗ (61 ವರ್ಷ ಮೇಲ್ಪಟ್ಟವರು)ದಲ್ಲಿ ಚಂದ್ರಶೇಖರನ್ ಸುಬ್ರಮಣಿಯನ್ (ಪ್ರ), ಕೆ.ಪಿ. ಜಯರಾಮು (ದ್ವಿ), ಎನ್.ಮೋಹನ್ ತೃತೀಯ ಬಹುಮಾನ ಪಡೆದರು.

10 ಕಿ.ಮೀ. ಮಹಿಳೆಯರ ಓಟದ ಸ್ಪರ್ಧೆ: ಮಹಿಳೆಯರ ಓಟದ ಮುಕ್ತ ವಿಭಾಗದ ಸ್ಪರ್ಧೆಯಲ್ಲಿ (16 ರಿಂದ 45 ವರ್ಷ) ಅನುಷಾ ಪಾಠಕ್ (ಪ್ರ), ಕ್ಲಾರಾ ಥುನ್‌ಸೇನ್ (ದ್ವಿ), ರೋಷಿಕಾ ಚಂಗಪ್ಪ ತೃತೀಯ ಬಹುಮಾನ ಪಡೆದರು.

ಮಹಿಳಾ ವಿಭಾಗದಲ್ಲಿ (46 ರಿಂದ 60 ವರ್ಷ) ಓಟದ ಸ್ಪರ್ಧೆಯಲ್ಲಿ ಬಿ.ಎಲ್. ಮಂಜುಳಾ (ಪ್ರ), ಶ್ರೀವಿದ್ಯಾ ಚಿತ್ರ (ದ್ವಿ), ಆರ್. ಕುಸುಮ ತೃತೀಯ ಬಹುಮಾನ ಪಡೆದರು.

ಹಿರಿಯ ನಾಗರಿಕ ಮಹಿಳಾ ವಿಭಾಗದಲ್ಲಿ ಶ್ಯಾಮಲಾ ಪದ್ಮನಾಭನ್ ನಿಗದಿತ ಗುರಿ ತಲುಪಿದ ಏಕೈಕ ಹಿರಿಯ ಮಹಿಳಾ ಸ್ಪರ್ಧಿಯಾಗಿದ್ದು, ಅವರಿಗೆ ಪ್ರಥಮ ಬಹುಮಾನ ಘೋಷಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೆ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಎರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕರಿಟೋಪಿ ಮಾತಿನ ಕಲಹ: ಮುನಿರತ್ನ ಬೆಂಬಲಕ್ಕೆ ನಿಂತ ಬಿಜೆಪಿ ನಾಯಕರು

ಬೆಂಗಳೂರು, ಅ.12– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ – ಮುನಿರತ್ನ ನಡುವೇ ಜೆ.ಪಿ.ಪಾರ್ಕ್‌ನಲ್ಲಿ ನಡೆದ ಕರಿಟೋಪಿ ಕಲಹಕ್ಕೆ ಬಿಜೆಪಿ ನಾಯಕರು ಕೆಂಡಕಾರಿದ್ದಾರೆ. ಡಿಕೆಶಿ ವಿರುದ್ಧ ಮುನಿರತ್ನ ಆಕ್ರೋಶ ಹೊರಹಾಕಿದ್ದಾರೆ. ಗಲಾಟೆ ಮಾಡಲು ಬಂದಿದ್ದಾರೆ ಎಂದು ಡಿಕೆಶಿ ಟಾಂಗ್ ಕೊಟ್ಟಿದ್ದಾರೆ.

ಜೆ.ಪಿ.ಪಾರ್ಕ್‌ನಲ್ಲಿ ನಡೆದ ಕರಿಟೋಪಿ ಕಲಹ ಘಟನೆಗೆ ಡಿಕೆಶಿ ಟಕ್ಕರ್ ಕೊಟ್ಟಿದ್ದಾರೆ. ವೇದಿಕೆಯಲ್ಲಿ ಡಿಕೆಶಿ ಕೈಯಿಂದಲೇ ಮೈಕ್ ಕಿತ್ತುಕೊಂಡು ಆಕ್ರೋಶ ಹೊರಹಾಕಿದ ಮುನಿರತ್ನ ವಿರುದ್ಧ ಡಿಕೆಶಿ ಮಾತನಾಡಿದ್ದಾರೆ. ಸ್ಥಳೀಯ ಎಂಎಲ್‌ಎಗೆ ತಾಳ್ಮೆ ಕಡಿಮೆ. ಈ ಕಾರ್ಯಕ್ರಮ ಹಾಳು ಮಾಡೋಕೆ ಬಂದಿದ್ದಾರೆ. ಇಂತಹವರನ್ನು ಗೆಲ್ಲಿಸಿದ್ದೀರಲ್ಲ ನಿಮ್ಮ ತಪ್ಪು. ಮುಂದೆ ಹೀಗೆ ಮಾಡಬೇಡಿ ಎಂದು ತಿರುಗೇಟು ನೀಡಿದರು.

ಇದೇ ವೇಳೆ ರಾಜರಾಜೇಶ್ವರಿನಗರದ ಪರಾಜಿತ ಅಭ್ಯರ್ಥಿ ಕುಸುಮಾ ಮಾತನಾಡಿ, ಕಾರ್ಯಕ್ರಮಕ್ಕೆ ಶಾಸಕರು ಗಲಾಟೆ ಮಾಡಲೆಂದೇ ಬಂದಿದ್ದಾರೆ. ಗಲಾಟೆ ಮಾಡುವುದು ಅವರಿಗೆ ಅಭ್ಯಾಸ ಆಗಿದೆ. ಅವಮಾನ ಮಾಡುವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಇದೆಲ್ಲದರ ನಡುವೆ ಡಿಕೆಶಿ ವಿರುದ್ಧ ಆಕ್ರೋಶ ಹೊರಹಾಕಿ, ನನ್ನ ಕರಿಟೋಪಿಯನ್ನು ಕಿತ್ತುಕೊಂಡಿದ್ದಾರೆ, ಹಲ್ಲೆ ಮಾಡಿದ್ದಾರೆ. ಚನ್ನಪಟ್ಟಣ, ಕನಕಪುರದಿಂದ ರೌಡಿಶೀಟರ್‌ಗಳನ್ನು ಕರೆಸಿದ್ದಾರೆ ಎಂದು ಮುನಿರತ್ನ ಗಂಭೀರವಾಗಿ ಆರೋಪಿಸಿದರು. ಇದು ಕಾಂಗ್ರೆಸ್ ಫಂಕ್ಷನ್. ಏಯ್ ಕರಿಟೋಪಿ ಬಾರೋ ಇಲ್ಲಿ ಅಂತಾ ಅವಮಾನ ಮಾಡಿದ್ದಾರೆ. ನಾನು ಇವತ್ತು ಬದುಕಿದ್ದೀನಿ ಅಂದ್ರೆ ಅದಕ್ಕೆ ಪೊಲೀಸರೇ ಕಾರಣ ಎಂದರು.

ಇದೇ ವೇಳೆ ಮುನಿರತ್ನ ಬೆಂಬಲಕ್ಕೆ ಬಿಜೆಪಿ ನಾಯಕರು ನಿಂತಿದ್ದು, ಕರಿಟೋಪಿ ಕೂಗಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಮಾಜಿ ಡಿಸಿಎಂ ಅಶ್ವತ್ಥನಾರಾಯಣ್ ಡಿಕೆಶಿ ವಿರುದ್ಧ ಕಿಡಿಕಾರಿದ್ದಾರೆ. ಮುಸ್ಲಿಂ ಟೋಪಿಗೆ ಜಾಲರಿ ಟೋಪಿ ಅಂತಾ ಕರೀರಿ ಎಂದು ಜೋಷಿ ಟಕ್ಕರ್ ಕೊಟ್ಟರೆ, ಡಿಕೆಶಿಗೆ ಮದ ಎಂದು ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಭಾರತದ ಶೆರಿ ಸಿಂಗ್‌ಗೆ 'ಮಿಸ್ ಯೂನಿವರ್ಸ್' ಕಿರೀಟ



ವಾಷಿಂಗ್ಟನ್, ಅ.12– ಫಿಲಿಪ್ಪೀನ್ಸ್‌ನ ಮನಿಲಾದಲ್ಲಿ ನಡೆದ 48ನೇ ಆವೃತ್ತಿಯ ಮಿಸ್ ಯೂನಿವರ್ಸ್ ಸೌಂದರ್ಯ ಸ್ಪರ್ಧೆಯಲ್ಲಿ ಭಾರತದ ಶೆರಿ ಸಿಂಗ್ ವಿಜೇತರಾಗಿದ್ದಾರೆ. 120 ಸ್ಪರ್ಧಿಗಳು ಭಾಗಿಯಾಗಿದ್ದ ಸ್ಪರ್ಧೆಯಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನ ಸ್ಪರ್ಧಿ ಮೊದಲ ರನ್ನರ್ ಅಪ್, ಫಿಲಿಪ್ಪೀನ್ಸ್‌ನ ಸ್ಪರ್ಧಿ 2ನೇ ರನ್ನರ್ ಅಪ್ ಆಗಿದ್ದಾರೆ.

ಗೆಲುವಿನ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಶೆರಿ, ತನ್ನ ಮಿತಿಯಿಂದ ಹೊರಗೆ ಕನಸು ಕಾಣುವ ಧೈರ್ಯ ಮಾಡುವ ಎಲ್ಲ ಮಹಿಳೆಗೂ ಈ ಗೆಲುವು ಸಲ್ಲುತ್ತದೆ ಎಂದಿದ್ದಾರೆ. ಈ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಸ್ಪರ್ಧಿ ಶೆರಿ ಸಿಂಗ್ ಆಗಿದ್ದಾರೆ. ಇತರ ಅಂತಿಮ ಸ್ಪರ್ಧಿಗಳು ಯುಎಸ್‌ಎ, ಜಪಾನ್, ಮ್ಯಾನ್ಮಾರ್, ಬಲ್ಗೇರಿಯಾ, ಯುಎಇ, ಆಫ್ರಿಕಾ ಮತ್ತು ಉಕ್ರೇನ್‌ನಂತಹ ರಾಷ್ಟ್ರಗಳು ಮತ್ತು ಪ್ರದೇಶಗಳನ್ನು ಪ್ರತಿನಿಧಿಸಿದರು.

ವಿಷಯ ಪರಿಣಿತರಿಗೆ ವಿದೇಶಗಳಲ್ಲಿ ಹೆಚ್ಚಿನ ಅವಕಾಶ

ದುಬೈನ ಖಾಸಗಿ ಕಾನೂನು ಸಲಹೆಗಾರರಾದ ಗೀತಾಲಕ್ಷ್ಮಿ ರಾಮಚಂದ್ರನ್ ಅಭಿಮತ

ವೈಸೂರು, ಅ.12(ಎಂಟಿವೈ)– ವಿದೇಶಗಳಲ್ಲಿ ವಿಷಯ ಪರಿಣಿತರಿಗೆ ಹೆಚ್ಚಿನ ಅವಕಾಶವಿದ್ದು, ವಿದ್ಯಾರ್ಥಿಗಳು ಯಾವುದೇ ವಿಷಯದಲ್ಲಾದರೂ ಪ್ರಾವಿಣ್ಯತೆ ಗಳಿಸಬೇಕು ಎಂದು ದುಬೈನಲ್ಲಿ ಖಾಸಗಿ ಕಾನೂನು ಸಲಹೆಗಾರರಾಗಿರುವ ಗೀತಾಲಕ್ಷ್ಮಿ ರಾಮಚಂದ್ರನ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದಿಂದ ಆಯೋಜಿಸಿದ್ದ 'ಭಾಷೆ ಬಳಕೆ ಹಾಗೂ ಸಮಕಾಲೀನ ಸಮಾಜದಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆಯ ಒಳಿತು– ಕೆಡುಕು' ವಿಷಯ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಖಾಸಗಿ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಅವಕಾಶಗಳ ಮಹಾಪೂರವೇ ಇದೆ. ಆದರೆ, ಅದಕ್ಕೆ ಅಗತ್ಯವಾದ ಪರಿಣಿತಿ ಅಗತ್ಯವಿದೆ. ಪರಿಣಿತಿ ಇದ್ದವರಿಗೆ ಅವಕಾಶ ಸಿಗಲಿದೆ. ಹಾಗಾಗಿ ಆ ಪರಿಣಿತಿ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಸಂಸ್ಥೆಗಳಿಗಿಂತ ಖಾಸಗಿ, ಕಾರ್ಪೊರೇಟ್ ಸಂಸ್ಥೆಗಳಲ್ಲಿ ಅವಕಾಶ ಹೆಚ್ಚಾಗಿವೆ. ಅದರಲ್ಲೂ ಕಾನೂನು ವಿಭಾಗದಲ್ಲಿ ಹೇರಳವಾಗಿವೆ. ಆದರಿಂದ ಕಾನೂನು ಅಧ್ಯಯನ ಮಾಡುವ ಮೂಲಕ ಅದರ ಅರಿವು ಪಡೆದುಕೊಳ್ಳಬೇಕು ಎಂದರು.

ಬದಲಾದ ಕಾಲಕ್ಕೆ ತಕ್ಕಂತೆ ಅಂತರ್ಜಾಲ ತಾಣಗಳ ಕುರಿತು ಕಾನೂನು, ಕ್ಲೌಡ್ ಕಾನೂನು, ಡಾಟಾ ಸಂರಕ್ಷಣೆ ಕಾನೂನು ಮತ್ತು ಕೃತಕ ಬುದ್ಧಿಮತ್ತೆ ಕಾನೂನು ಬಗ್ಗೆ ತಿಳಿದುಕೊಳ್ಳಲು ಮುಂದಾಗಬೇಕು. ಇದನ್ನು ಮಾತೃ ಭಾಷೆಯೊಂದಿಗೆ ಇಂಗ್ಲಿಷ್ ಮತ್ತು ಬೇರೆ ಬೇರೆ ಭಾಷೆಗಳಲ್ಲಿ ಜ್ಞಾನ ಸಂಪಾದಿಸಿಕೊಳ್ಳಬೇಕು. ತಂತ್ರಜ್ಞಾನದ ಹೊಸ ಆವಿಷ್ಕಾರಗಳ ಜತೆ ಜತೆಗೆ ಭಾಷೆ ಬದಲಾಗುತ್ತದೆ. ಅವುಗಳೊಂದಿಗೆ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ಭಾಷೆ ಬಳಕೆ ಹಾಗೂ ಸಮಕಾಲೀನ ಸಮಾಜದಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆಯ ಒಳಿತು–ಕೆಡುಕು ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ದುಬೈನಲ್ಲಿ ಕಾನೂನು ಸಲಹೆಗಾರರಾಗಿರುವ ಗೀತಾಲಕ್ಷ್ಮೀ ರಾಮಚಂದ್ರನ್ ಮಾತನಾಡಿದರು.

ತೊಂದರೆಗಳು ಎದುರಾಗುತ್ತವೆ. ಹಾಗಾಗಿ, ತಂತ್ರಜ್ಞಾನ ಬಳಸಿ ಉನ್ನತೀಕರಿಸಿಕೊಳ್ಳುವ ಜತೆಗೆ ಅಪಾಯದ ಬಗ್ಗೆ ಅರಿತು ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದರು.

ಮಹಾರಾಣಿ ವಿಜ್ಞಾನ ಕಾಲೇಜು ಪ್ರಾಂಶುಪಾಲ ಪ್ರೊ.ಎಂ.ಅಬ್ದುಲ್ ರಹಿಮಾನ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ಅಪಾಯಕಾರಿ ಬೆಳವಣಿಗೆಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಹೆಣ್ಣು ಮಕ್ಕಳಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಇಲ್ಲದಿದ್ದರೆ ಸಮಾಜವನ್ನು ಎದುರಿಸುವುದು ಕಷ್ಟ ಆಗಲಿದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ವಿಭಾಗದ ಪ್ರಾಧ್ಯಾಪಕ ಡಾ.ಹೆಚ್.ಎಸ್.ಪರಶಿವಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಸಹಪ್ರಾಧ್ಯಾಪಕಿ ಡಾ.ಎನ್.ಶೋಭಲತಾ ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಅಧ್ಯಾಪಕ ಹೆಚ್.ಎಸ್. ರಂಗನಾಥ ವಂದಿಸಿದರು. ಅಧ್ಯಾಪಕ ಹೆಚ್. ಆರ್.ದಿನೇಶ್ ಅತಿಥಿಗಳನ್ನು ಪರಿಚಯಿಸಿದರೆ, ವಿಭಾಗದ ಮುಖ್ಯಸ್ಥ ಗೋವಿಂದ ರಾಜು ನಿರೂಪಿಸಿದರು. ಡಾ. ಹೆಚ್.ಸಿ. ಆನಂದ್, ಬಿಸಿಎ ಮತ್ತು ಬಿಎಸ್ಸಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಛಾಯಾಗ್ರಾಹಕ ಕೆ.ಜಿ.ಸಿದ್ದಲಿಂಗ ಪ್ರಸಾದ್‌ಗೆ ಪ್ರಶಸ್ತಿ



ಮೈಸೂರು ಅ.12–ಮೈಸೂರಿನ ಛಾಯಾಗ್ರಾಹಕ ಕೆ.ಜಿ.ಸಿದ್ದಲಿಂಗ ಪ್ರಸಾದ್ ಅವರಿಗೆ ರೊಮೇನಿಯಾ ದೇಶದ ಫೋಟೋಗ್ರಫಿಕ್ ಎಗ್ಸಿಬಿಷನ್ ಸೊಸೈಟಿ ವತಿಯಿಂದ ಹಾನರರಿ ಡಿಸ್ಟಿಂಕ್ಷನ್ ಗೌರವ ಪ್ರಶಸ್ತಿ ಲಭಿಸಿದೆ. ಇವರು ವಿವಿಧ ದೇಶಗಳಲ್ಲಿ ನಡೆದ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಹಲವು ಬಹುಮಾನಗಳನ್ನು ತನ್ನದಾಗಿಸಿಕೊಂಡಿದ್ದಾರೆ.

ಹಾಸನಾಂಬ ದರ್ಶನಕ್ಕೆ ಭಕ್ತರ ಸಂಖ್ಯೆ ಹೆಚ್ಚಳ

ಎರಡೇ ದಿನಗಳಲ್ಲಿ ರೂ. 2.24 ಕೋಟಿ ಆದಾಯ: ಆರು ಸಿಬ್ಬಂದಿ ಅಮಾನತು





ಹಾಸನ, ಅ.12– ಹಾಸನದಲ್ಲಿ ನಡೆಯುತ್ತಿರುವ ಹಾಸನಾಂಬ ಹಾಗೂ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ವಾರಾಂತ್ಯದ ಹಿನ್ನೆಲೆಯಲ್ಲಿ ಭಾನುವಾರ ಭಾರಿ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದಿದ್ದಾರೆ.

ಇಂದು ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದರೆ, ನಿಗದಿತ ಅವಧಿಯಲ್ಲಿ ಗಣ್ಯರು ಕೂಡ ಆಗಮಿಸಿ ದೇವರ ದರ್ಶನ ಪಡೆದರು. ದರ್ಶನಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿದ್ದು ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ ಅವರು ಖುದ್ದು ದೇವಾಲದಲ್ಲೇ ಹಾಜರಿದ್ದು ಭಕ್ತರ ಕುಂದುಕೊರತೆಗಳನ್ನು ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ.


ಶುಕ್ರವಾರದಿಂದ ಆರಂಭವಾದ ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಭಕ್ತರ ಅಪಾರ ದರ್ಶನದಿಂದ ಕೇವಲ ಎರಡೇ ದಿನಗಳಲ್ಲಿ 2.24 ಕೋಟಿರೂ. ಆದಾಯ ದಾಖಲಿಸಿದೆ. ಭಾನುವಾರ ಬೆಳಿಗ್ಗೆ 8 ಗಂಟೆಯವರೆಗೆ 300 ವಿಶೇಷ ದರ್ಶನದಲ್ಲಿ ಒಟ್ಟು 27,759 ಟಿಕೆಟ್‌ಗಳು ಮಾರಾಟವಾಗಿವೆ. ಅದೇ ರೀತಿ 1000 ವಿಶೇಷ ದರ್ಶನದಲ್ಲಿ ಒಟ್ಟು 12,396 ಮಾರಾಟವಾಗಿವೆ.

ಇದೇ ವೇಳೆ ಲಾಡು ಪ್ರಸಾದ ಮಾರಾಟದ ಸಂಖ್ಯೆ 17,337 ಆಗಿದ್ದು, ಮೂರು ದಿನಗಳಲ್ಲಿ ಭಾರಿ ಆದಾಯ ಲಭಿಸಿದೆ. 300ರೂ. ವಿಶೇಷ ದರ್ಶನ ಟಿಕೆಟ್‌ಗಳಿಂದ ಒಟ್ಟು 83,27,700 ರೂ ಹಾಗೂ 1000 ರೂ. ವಿಶೇಷ ದರ್ಶನ ಟಿಕೆಟ್‌ಗಳಿಂದ 1,23,96,000 ರೂ. ಲಾಡು ಪ್ರಸಾದ ಮಾರಾಟದಿಂದ 17,33,700 ರೂ. ಸೇರಿ ಒಟ್ಟು ಆದಾಯ: 2 ಕೋಟಿ 24 ಲಕ್ಷ 57 ಸಾವಿರ 400 ರೂ. ಸಂಗ್ರಹವಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಆರು ಸಿಬ್ಬಂದಿ ಅಮಾನತು: ಈ ಮಧ್ಯೆ ಹಾಸನಾಂಬೆ ದರ್ಶನದ ವೇಳೆ ಕರ್ತವ್ಯ ಲೋಪ ಆರೋಪದ ಮೇಲೆ ಇಬ್ಬರು ಸಮಾಜ ಕಲ್ಯಾಣ ಇಲಾಖೆ ಹಾಗೂ ನಾಲ್ವರು ಕಂದಾಯ ಇಲಾಖೆ ಸಿಬ್ಬಂದಿ ಅಮಾನತು ಮಾಡಲಾಗಿದೆ. ಗುರುತಿನ ಚೀಟಿ ದುರುಪಯೋಗದ ಆರೋಪದ ಮೇರೆಗೆ ಸಮಾಜ ಕಲ್ಯಾಣ ಇಲಾಖೆಯ ವಾರ್ಡನ್‌ಗಳಾದ ರಮೇಶ್ ಮತ್ತು ಆನಂದ್ ಎಂಬ ಇಬ್ಬರು ಸಿಬ್ಬಂದಿಯನ್ನು ಜಿಲ್ಲಾಧಿಕಾರಿ ಕೆಎಸ್ ಲತಾ ಅಮಾನತುಗೊಳಿಸಿದ್ದಾರೆ.

ಅಲ್ಲದೇ ಗೋಲ್ಡ್ ಕಾರ್ಡ್ ಕೌಂಟರ್‌ನಲ್ಲಿ ಕಾರ್ಡ್ ಸ್ಕ್ಯಾನ್ ಮಾಡದೇ ಭಕ್ತರನ್ನು ಒಳಗಡೆ ಬಿಡಲಾಗಿದೆ ಎಂಬ ಆರೋಪದ ಮೇಲೆ ನಾಲ್ವರು ಕಂದಾಯ ಇಲಾಖೆ ಸಿಬ್ಬಂದಿಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಆರ್‌ಐಗಳಾದ ಗೋವಿಂದ ರಾಜ್, ಯೋಗಾನಂದ್ ಮತ್ತು ಲೆಕ್ಕಾಧಿಕಾರಿಗಳಾದ ಸಂತೋಷ್ ಅಂಬಿಗರ, ಶಿರಾಜ್ ಮಹಿಮಾ ಪಟೇಲ್ ಅವರನ್ನು ತಕ್ಷಣದಿಂದ ಅಮಾನತು ಮಾಡುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಆದೇಶಿಸಿದ್ದಾರೆ. ಅಕ್ಟೋಬರ್ 23 ರಂದು ದೇವಿಯ ದರ್ಶನ ಮುಕ್ತಾಯವಾಗಲಿದೆ.

ಅಭಿನಂದನೆ



ಕರ್ನಾಟಕದ ಮೃಗಾಲಯ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರಂಗಸ್ವಾಮಿಯವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯರನ್ನು ಅಭಿನಂದಿಸಿದರು. ಈ ವೇಳೆ ವರುಣಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಮಹಿಳೆಯರಿಗಾಗಿ ಮಾಂಟೆಸರಿ ಶಿಕ್ಷಕರ ತರಬೇತಿ

ಮೈಸೂರು: ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಹಾಗೂ ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಸಹಯೋಗದೊಂದಿಗೆ ಎಸ್‌ಎಸ್‌ಐಟಿ ಟೀಚರ್ ಟ್ರೈನಿಂಗ್ ಅಕಾಡೆಮಿಯು 20ರಿಂದ 55ರ ವಯೋಮಾನದ ಪಿಯುಸಿ ನಂತರದ ವಿದ್ಯಾಭ್ಯಾಸ ಹೊಂದಿರುವ ಹೆಣ್ಣುಮಕ್ಕಳಿಗಾಗಿ ಮಾಂಟೆಸರಿ ಶಿಕ್ಷಕರ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ. ಮಕ್ಕಳ ಮಾನಸಿಕ ಬೆಳವಣಿಗೆ, ಬೌದ್ಧಿಕ ವಿಕಸನ, ನ್ಯುಟ್ರೀಷಿಯನ್, ಕಲಿಕಾ ಸ್ವಾವಲಂಬನೆ ಮುಂತಾದ ಪಠ್ಯಾಧಾರಿತ ಚಟುವಟಿಕೆಗಳನ್ನು ಹೊಂದಿರುವ ಈ ತರಬೇತಿಯ ಅವಧಿ 6 ತಿಂಗಳಿನದ್ದಾಗಿರುತ್ತದೆ. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕವೂ ತರಬೇತಿ ಇದ್ದು, ಅರ್ಜಿಗಾಗಿ 9686855470, 8310306882 ಸಂಪರ್ಕಿಸಿ.

ವಿದೇಶಿ ರಫ್ತಿಗೆ ಅಧಿಕ ಸುಂಕ ವಿಧಿಸಿದ ಪರಿಣಾಮ

ಬೊಂಬೆ ವ್ಯಾಪಾರ ಸೇರಿದಂತೆ ನಾನಾ ವಹಿವಾಟಿನಲ್ಲಿ ಭಾರೀ ಹಿನ್ನಡೆ

ದಸರಾ ಬೊಂಬೆ ಪ್ರದರ್ಶನ ಬಹುಮಾನ ವಿತರಣೆ ಸಮಾರಂಭದಲ್ಲಿ ರಾಮ್‌ಸನ್ಸ್ ಬೊಂಬೆಮನೆಯ ಆರ್.ಜಿ.ಸಿಂಗ್ ಬೇಸರ



ಮೈಸೂರಿನ ಇಟ್ಟಿಗೆಗೂಡಿನ ಮೈಸೂರು ಬೊಂಬೆ ರಂಗಮಂದಿರದಲ್ಲಿ ಶನಿವಾರ ಬೊಂಬೆ ಜೋಡಣಾ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ರಾಮ್‌ಸನ್ಸ್ ಬೊಂಬೆಮನೆಯ ಆರ್.ಜಿ.ಸಿಂಗ್, ಭಾರತ ವಿಕಾಸ ಪರಿಷದ್ ಭಾರದ್ವಾಜ ಶಾಖೆ ಮೈಸೂರು ಅಧ್ಯಕ್ಷ ಡಾ.ಬಿ.ಎನ್.ರಂಗನಾಥರಾವ್ ಇತರರು ಚಿತ್ರದಲ್ಲಿದ್ದಾರೆ.

ಮನೆಗಳಲ್ಲಿ ಬೊಂಬೆ ಜೋಡಣೆ ಮಾಡಿ ಬಹುಮಾನಕ್ಕೆ ಭಾಜನರಾದವರು

ಕಿರಿಯರ ವಿಭಾಗದಲ್ಲಿ ವಿನಯ್ ಗೋವಿಂದರಾಜ್ (ಪ್ರ), ನವ್ಯ ಯೋಗಾನಂದ್ (ದ್ವಿ), ಉಮಾನಂಜುಂಡಯ್ಯ (ತೃ), ಪೂಜಾ ದಿನೇಶ್ (ಪ್ರೋತ್ಸಾಹಕರ), ಮಧ್ಯಮ ವಿಭಾಗದಲ್ಲಿ ಅಕ್ಷಯ್ ಬಾಲಾಜಿ (ಪ್ರ), ಸುಮಶಿವಪ್ರಸಾದ್ (ದ್ವಿ), ಕಲ್ಪನಾ ಅರಸ್ (ತೃ), ಉಷಾನಾಗರಾಜ್ (ಪ್ರೋತ್ಸಾಹಕರ), ಹಿರಿಯ ವಿಭಾಗದಲ್ಲಿ ರಮಾಮಣಿ ಗುರುದತ್ತ (ಪ್ರ), ಗೀತಾ ರಘುರಾಮ್ (ದ್ವಿ), ಮಂಜುಳಾ ಮೂರ್ತಿ (ತೃ), ಪದ್ಮಶ್ರೀ ರವಿಶಂಕರ್ (ಪ್ರೋತ್ಸಾಹಕರ), ಬೃಹತ್ ವಿಭಾಗದಲ್ಲಿ ಗೀತಾ ಶ್ರೀಹರಿ (ಪ್ರ), ಶ್ರೀದೇವಿ ಶ್ರೀವತ್ಸ (ದ್ವಿ), ಹೇಮಲತಾ ಕುಮಾರಸ್ವಾಮಿ (ತೃ), ರಾಜೇಶ್ವರಿ ಗಣೇಶನ್ (ಪ್ರೋತ್ಸಾಹಕರ), ಸಂಘ ಸಂಸ್ಥೆಗಳ ವಿಭಾಗದಲ್ಲಿ ಕೇಂಬ್ರಿಡ್ಜ್ ವಿದ್ಯಾಶಾಲೆ, ಕನಕದಾಸನಗರ (ಪ್ರ), ಡಿಎವಿ ಪಬ್ಲಿಕ್ ಶಾಲೆ (ದ್ವಿ), ಅರಿವಿನ ಮನೆ ಮಹಿಳಾ ಬಳಗ (ತೃ), ಬೋನ್ಸಾಯ್ ಗಿಡಗಳ ಪೋಷಣೆಗಾಗಿ ಸುಮಕೃಷ್ಣ ಹಾಗೂ ಶ್ಯಾಮಲ ಪ್ರಸನ್ನ ಅವರಿಗೆ ವಿಶೇಷ ಬಹುಮಾನ.

ಮೈಸೂರು,ಅ.12(ಪಿಎಂ)– ಯಾವುದೇ ಪಾರ್ಸೆಲ್ 20 ಸಾವಿರ ರೂ. ಮೌಲ್ಯ ಹೊಂದಿದ್ದರೆ, ಅವುಗಳ ವಿದೇಶಿ ರಫ್ತಿನ ಮೇಲೆ ಶೇ.100ರಷ್ಟು ಸುಂಕ ವಿಧಿಸುತ್ತಿರುವ ಪರಿಣಾಮ ಈ ವರ್ಷ ನಾವು ಕೆನಡಾ ಹಾಗೂ ಅಮೇರಿಕಾಕ್ಕೆ ಪಾರ್ಸೆಲ್ ಕಳುಹಿಸಲು ಸಾಧ್ಯವಾಗಿಲ್ಲ. ಬೊಂಬೆಯಂತಹ ಸಣ್ಣ ವಹಿವಾಟಿಗೆ ಇಷ್ಟು ಪರಿಣಾಮ ಉಂಟು ಮಾಡಿದರೆ, ದೊಡ್ಡ ವಹಿವಾಟಿಗೆ ಎಷ್ಟು ತೊಂದರೆ ಆಗಿರಬಹುದು ಎಂದು ರಾಮ್‌ಸನ್ಸ್ ಬೊಂಬೆಮನೆಯ ಆರ್.ಜಿ.ಸಿಂಗ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಇಟ್ಟಿಗೆಗೂಡಿನ ರಾಮ್‌ಸನ್ಸ್ ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂನ ಮೈಸೂರು ಬೊಂಬೆ ರಂಗಮಂದಿರದಲ್ಲಿ ಭಾರತ ವಿಕಾಸ ಪರಿಷದ್‌ನ ಭಾರದ್ವಾಜ ಶಾಖೆ ಮೈಸೂರು ಹಾಗೂ ರಾಮ್‌ಸನ್ಸ್ ಬೊಂಬೆ ಮನೆ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ದಸರಾ ಬೊಂಬೆ ಪ್ರದರ್ಶನ ಸ್ಪರ್ಧೆ–2025ರ (ಮನೆಗಳಲ್ಲಿ ಬೊಂಬೆ ಪ್ರದರ್ಶನ) ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸರ್ಕಾರದ ನೀತಿಗಳು ವಹಿವಾಟಿನ ಮೇಲೆ ಪರಿಣಾಮ ಉಂಟು ಮಾಡುತ್ತವೆ. ಪ್ರತಿವರ್ಷ ನಾವು ಕೆನಡಾ ಮತ್ತು ಅಮೆರಿಕಾಗೆ 100 ಪಾರ್ಸೆಲ್ ಕಳುಹಿಸುತ್ತಿದ್ದೆವು. ಈ ವರ್ಷ ಒಂದೂ ಕಳಿಸಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಸರ್ಕಾರ ವಿಧಿಸಿರುವ ತಾರೀಫ್(ಸುಂಕ). ಯಾವುದೇ ಪಾರ್ಸೆಲ್ 20 ಸಾವಿರ ಮೌಲ್ಯ ಹೊಂದಿದ್ದರೆ, ಅದಕ್ಕೆ ಶೇ.100ರಷ್ಟು ಸುಂಕ ಹಾಕಲಾಗಿದೆ. ಹೀಗೆ ಸಣ್ಣ ಮಟ್ಟದ ಬೊಂಬೆ ವಹಿವಾಟಿನ ಮೇಲೆಯೇ ಈ ರೀತಿಯಾದರೆ, ದೇಶದ ದೊಡ್ಡ ವಹಿವಾಟಿಗೆ ಎಷ್ಟು ತೊಂದರೆ ಆಗಿರಬಹುದು ಎಂದು ಹೇಳಿದರು.

ಚೆನ್ನೈ ಹಾಗೂ ಪಾಂಡಿಚೇರಿಯಲ್ಲಿರುವ ನಮ್ಮ ಪೂರೈಕೆದಾರರು ಸಹ ಈ ವರ್ಷ ಪಾರ್ಸೆಲ್ ಹೆಚ್ಚು ಕಳುಹಿಸಲು ಸಾಧ್ಯವಾಗಿಲ್ಲವೆಂದು ಮಾಹಿತಿ ನೀಡಿದರು. ಈ ಕಾರಣಕ್ಕೆ ಗ್ರಾಹಕರಿಗೆ ಕಡಿಮೆ ದರದಲ್ಲಿ ಬೊಂಬೆಗಳು ದೊರೆಯದಾಗಿದೆ ಜಿಎಸ್‌ಟಿ ಹೊಸದಾಗಿ ಜಾರಿಯ ಸಂದರ್ಭದಲ್ಲಿ ಸರ್ಕಾರ ಪೂಜಾ ಸಾಮಗ್ರಿ ಸಂಬಂಧ ಯಾವುದೇ ತೆರಿಗೆ ವಿಧಿಸಿರಲಿಲ್ಲ. ಆದರೆ ಮೂರು ವರ್ಷಗಳ ಬಳಿಕ ಹಿಂಬಾಗಿಲಿನಿಂದ ಲೋಹದ ಸಾಮಗ್ರಿಗೆ ತೆರಿಗೆ ವಿಧಿಸಲಾಯಿತು. ದೇವರಿಗೆ ಹಚ್ಚುವ ದೀಪ ಸೇರಿದಂತೆ ಯಾವುದೇ ದೇವರ ಮೂರ್ತಿಗೂ ತೆರಿಗೆ ಹಾಕಲಾಯಿತು. ಮಹಾರಾಷ್ಟ್ರ ಸರ್ಕಾರವು ನಮ್ಮಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿ ಹೆಚ್ಚು ತಯಾರಾಗುತ್ತವೆ. ಹಾಗಾಗಿ ಅವುಗಳಿಗೆ ತೆರಿಗೆ ವಿನಾಯಿತಿ ನೀಡಬೇಕೆಂದು ಕೋರಿದರೆ, ಅವು ಪರಿಸರಕ್ಕೆ ಮಾರಕವೆಂದು ಶೇ.28ರಷ್ಟು ತೆರಿಗೆ ವಿಧಿಸಲಾಯಿತು ಎಂದು ವ್ಯಂಗ್ಯವಾಡಿದರು.

ಮೈಸೂರಿನ ಸಾಕಷ್ಟು ಉತ್ಪನ್ನಗಳನ್ನು ನಕಲು ಮಾಡಲಾಗಿದೆ ಎಂದರು. ಬೊಂಬೆ ಇಡುವುದು ವಿಜಯನಗರ ಆಸ್ಥಾನದಿಂದ ಮೈಸೂರಿಗೆ ಬಂತು ಎಂದು ಹೇಳಲಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಬಗ್ಗೆ ಸಾಕಷ್ಟು ಪುಸ್ತಕಗಳು ಬಂದಿವೆಯಾದರೂ ಬೊಂಬೆ ಕೂರಿಸುವ ಸಂಪ್ರದಾಯದ ಬಗ್ಗೆ ಉಲ್ಲೇಖ ಇಲ್ಲ ಎಂದರು.

ಬಳಿಕ ಬೊಂಬೆ ಜೋಡಣೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಭಾರತ ವಿಕಾಸ ಪರಿಷದ್ ಭಾರದ್ವಾಜ ಶಾಖೆ ಮೈಸೂರು ಅಧ್ಯಕ್ಷ ಡಾ.ಬಿ.ಎನ್. ರಂಗನಾಥರಾವ್, ಪರಿಷದ್ ಪ್ರಾಂತ್ಯಾಧ್ಯಕ್ಷ ಆರ್.ನಾಗಭೂಷಣ್, ಮಾಜಿ ಅಧ್ಯಕ್ಷ ಜಗದೀಶ್ ಮತ್ತಿತರರು ಹಾಜರಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಪ್ರಕರಣ ವಿಕೃತ ಮನಸ್ಥಿತಿಯ ಕೃತ್ಯ

ಮೈಸೂರು,ಅ.12(ಜಿಎ)–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಅವರಿದ್ದ ಪೀಠ ದತ್ತ ವಕೀಲ ರಾಕೇಶ್ ಕಿಶೋರ್ ಶೂ ಎಸೆಯುವ ಯತ್ನ ಮಾಡಿರುವುದು ಅವಮಾನವೀಯ ಹಾಗೂ ವಿಕೃತ ಮನಸ್ಥಿತಿಯ ಕೃತ್ಯವಾಗಿದೆ ಎಂದು ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದ್‌ಸ್ವಾಮಿ ಕಿಡಿಕಾರಿದರು.


ಆನಂದ್‌ಸ್ವಾಮಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಮನಸ್ಥಿತಿಯ ವಕೀಲರನ ವಿರುದ್ಧ ಪೊಲೀಸ್ ಇಲಾಖೆ ಈ ನೆಲದ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು. ಜಸ್ಟೀಸ್ ಗವಾಯಿ ಅವರಿಗೆ ಈ ರೀತಿಯ ಅಪಮಾನ ಮಾಡಲು ಅವರು ಮುಖ್ಯ ನ್ಯಾಯಮೂರ್ತಿಗಳಾಗಿ ಕೈಗೊಂಡ ಸಂವಿಧಾನಿಕ ನಿಲುವುಗಳೇ ಪ್ರಮುಖ ಕಾರಣವಾಗಿವೆ. ಬುಲ್ಡೋಜರ್ ಹರಿಸುವಿಕೆ ಕಾರ್ಯಾಂಗದ ಕೆಲಸವಲ್ಲ ಎಂಬುದರ ವಿರುದ್ಧ ಸನಾತನಿಗಳು ದ್ವೇಷ ಕಾರುತ್ತಲೇ ಇದ್ದರು. ಗವಾಯಿ ಬೌದ್ಧರೆಂಬ ಕಾರಣಕ್ಕೆ ಅವರನ್ನು ಅಪಮಾನಿಸುವುದು ಇವರ ಉದ್ದೇಶವಾಗಿತ್ತು ಎಂದರು.

ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ್ದ ನೆನಪಿನಾರ್ಥ ನಡೆದ ಸಮಾರಂಭಕ್ಕೆ ಜಸ್ಟೀಸ್ ಗವಾಯಿ ಅವರ ತಾಯಿಯನ್ನು ಆಹ್ವಾನಿಸಲಾಗಿತ್ತು. ಆದರೆ ಅವರು ಹಾಜರಾಗಲಿಲ್ಲ. ಇದರ ಬಗ್ಗೆಯೂ ಸನಾತನಿಗಳಿಗೆ ಕೋಪವಿತ್ತು. ಮಧ್ಯಪ್ರದೇಶದ ದೇವಾಲಯವೊಂದರಲ್ಲಿ ವಿಷ್ಣುವಿನ ಮೂರ್ತಿ ಭಗ್ನಗೊಂಡಿದ್ದು, ಪುನರ್ ಪ್ರತಿಷ್ಠಾಪಿಸಲು ಅನುಮತಿ ಕೋರಿ ಅರ್ಜಿ ಹಾಕಲಾಗಿತ್ತು. ಆದರೆ ದೇಗುಲವು ಪುರಾತತ್ವ ಇಲಾಖೆಗೆ ಸೇರಿದ್ದರಿಂದ ಪುರಾತತ್ವ ಇಲಾಖೆ ಅನುಮತಿ ಪಡೆಯುವಂತೆ ಬಿ.ಆರ್.ಗವಾಯಿ ಸಲಹೆ ನೀಡಿದ್ದನ್ನು ಒಪ್ಪದೆ ವಕೀಲ ಈ ಕೃತ್ಯ ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿ ವಕೀಲ ರಾಕೇಶ್ ಕಿಶೋರ್‌ನ ವಕೀಲಗಿರಿ ಶಾಶ್ವತವಾಗಿ ರದ್ದುಗೊಳಿಸಬೇಕು. ಸಂಬಂಧಪಟ್ಟ ಪೊಲೀಸ್ ಇಲಾಖೆ ಮತ್ತು ನ್ಯಾಯಾಲಯ ಉಗ್ರ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಿ.ಹರಕುಮಾರ್, ಸೋಮಯ್ಯ ಮಲೆಯೂರು, ಅಹಿಂದ ಜವರಪ್ಪ ಸತೀಶ್ ಪಡುವಾರಹಳ್ಳಿ ಉಪಸ್ಥಿತರಿದ್ದರು.

ನಾರಾಯಣ ಗುರುಗಳ ಆದರ್ಶ, ಸಿದ್ಧಾಂತ ಅಳವಡಿಸಿಕೊಳ್ಳಿ

ಸೋಲೂರು ಆರ್ಯ ಈಡಿಗ ಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಕರೆ

ಮೈಸೂರು, ಅ.12(ಜಿಎ)– ಪ್ರತಿಯೊಬ್ಬರೂ ನಾರಾಯಣ ಗುರುಗಳ ಆದರ್ಶ ಮತ್ತು ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವು ಜಾತಿ, ಧರ್ಮ ತಾರತಮ್ಯಗಳ ಭೇದಭಾವ ಮೀರಿದ ಸಾರ್ವತ್ರಿಕ ಮಾನವೀಯ ಮೌಲ್ಯ ಪ್ರತಿಪಾದಿಸುತ್ತವೆ ಎಂದು ಸೋಲೂರು ಆರ್ಯ ಈಡಿಗ ಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದ ಅಲ್ಯುಮ್ನಿ ಸಭಾಂಗಣದಲ್ಲಿ ನಾರಾಯಣ ಧರ್ಮ ಪರಿಪಾಲನಾ ಯೋಗ ಶಾಖೆ, ಬ್ರಹ್ಮಶ್ರೀ ನಾರಾಯಣ ಗುರು ಮಿಷನ್ ಮತ್ತು ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ 'ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾರಾಯಣ ಗುರುಗಳ ಸಿದ್ಧಾಂತ ಸಾರ್ವಕಾಲಿಕ ಎಂದರು.

ನಾರಾಯಣ ಗುರುಗಳು ಸಾತ್ವಿಕ ಮನೋಭಾವ ಹೊಂದಿ ಮೌನ ಕ್ರಾಂತಿಯ ಹೋರಾಟ ನಡೆಸಿದ್ದರು. ಸಮುದಾಯ ವಿದ್ಯೆಯಿಂದ ಪ್ರಬುದ್ಧರಾಗಿ, ಸಂಘಟನೆಯಿಂದ ಶಕ್ತರಾಗಿ ಎಂಬ ಸಂದೇಶ ಸಾರಿದ್ದರು. ಸಮಾಜದಲ್ಲಿದ್ದ ತಾರತಮ್ಯ ಹೋಗಲಾಡಿಸಿ, ಶೋಷಿತ ವರ್ಗದ ಜನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಜೀವನವನ್ನೇ ಮುಡಿಪಾಗಿಟ್ಟಿದ್ದ ಮಹಾನುಭಾವ ಎಂದು ತಿಳಿಸಿದರು.


ಮೈಸೂರಿನ ಜೆ.ಕೆ.ಮೈದಾನದ ಅಲ್ಯುಮ್ನಿ ಸಭಾಂಗಣದಲ್ಲಿ ನಾರಾಯಣ ಧರ್ಮ ಪರಿಪಾಲನಾ ಯೋಗ ಶಾಖೆ, ಬ್ರಹ್ಮಶ್ರೀ ನಾರಾಯಣ ಗುರು ಮಿಷನ್ ಮತ್ತು ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ 'ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮವನ್ನು ಸೋಲೂರು ಆರ್ಯ ಈಡಿಗ ಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಉದ್ಘಾಟಿಸಿದರು.

ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹೆಚ್ಚಿನ ಒತ್ತು ನೀಡಿದರೆ, ಸಮುದಾಯದ ಅಭಿವೃದ್ಧಿ ಸಾಧ್ಯ. ಎಲ್ಲಾ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕು. ಜೊತೆಗೆ ವಿದ್ಯೆಯೊಂದಿಗೆ ಸಂಸ್ಕಾರವೂ ಕಲಿಸಿ ಎಂದು ಸಲಹೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನಾರಾಯಣ ಗುರುಗಳು ಅಂದಿನ ಕಾಲಘಟ್ಟದಲ್ಲಿ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡುವ ಮೂಲಕ ಶಿಕ್ಷಣಕ್ಕೆ ಆದ್ಯತೆ ನೀಡಿದ್ದರು. ಜಾತಿ ಪದ್ಧತಿ ಮತ್ತು ಶೋಷಣೆ ವಿರುದ್ಧ ಹೋರಾಡಿ ಶೋಷಿತ ವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದ್ದರು ಎಂದು ತಿಳಿಸಿದರು.

ಎಸ್‌ಎನ್‌ಡಿಪಿ ಕೊಡಗು ಯೂನಿಯನ್ ಅಧ್ಯಕ್ಷ ವಿ.ಕೆ.ಲೋಕೇಶ್ ಮಾತನಾಡಿ, ಅಂದಿನ ಕಾಲದಲ್ಲಿದ್ದ ಅಸ್ಪೃಶ್ಯತೆಯ ವಿರುದ್ಧ ಸಿಡಿದೆದ್ದ ನಾರಾಯಣ ಗುರುಗಳು, ಅನಕ್ಷರತೆ ಹೋಗಲಾಡಿಸಲು ಶಿಕ್ಷಣಕ್ಕೆ ಒತ್ತು ನೀಡಿ ಸಾಮಾಜಿಕ ಸುಧಾರಣೆಗೆ ನಾಂದಿ ಹಾಡಿದ್ದರು ಎಂದರು.

ಕಾರ್ಯಕ್ರಮಕ್ಕೂ ಮುನ್ನ ಮಕ್ಕಳಿಗೆ ಹೂವಿನ ರಂಗೋಲಿ, ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಾಧಕರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ತಿರುವಾತಿರ ನೃತ್ಯ, ಜಾನು ಕಲಾತಂಡದಿಂದ ಹಾಸ್ಯ ಕಾರ್ಯಕ್ರಮ ನಡೆಯಿತು.

ನಾರಾಯಣ ಧರ್ಮ ಪರಿಪಾಲನಾ ಯೋಗ ಶಾಖೆ ಅಧ್ಯಕ್ಷ ಜಿ.ರಾಜೇಂದ್ರನ್, ಬ್ರಹ್ಮಶ್ರೀ ನಾರಾಯಣಗುರು ಮಿಷನ್ ಅಂಡ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸುಕುಮಾರನ್, ಮನೋಜ್‌ಕುಮಾರ್, ಸಂತೋಷ್‌ರಾವ್, ವಿದ್ಯಾಸಾಗರ ಕದಂಬ, ಬಿ.ವಿ.ವೆಂಕಪ್ಪ, ಪ್ರೇಮಾನಂದ್, ರಾಘವನ್, ಸತ್ಯನ್, ಆನಂದ್, ಸೂರ್ಯನಾರಾಯಣ ಉಪಸ್ಥಿತರಿದ್ದರು.

ಸಾಕ್ರಾ ವರ್ಲ್ಡ್ ಆಸ್ಪತ್ರೆಗೆ ಎಎಸಿಐ ಮಾನ್ಯತೆ

ಮೈಸೂರು,ಅ.12–ಅಮೆರಿಕನ್ ಅಕ್ರೆಡಿಟೇಶನ್ ಕಮಿಷನ್ ಇಂಟರ್‌ನ್ಯಾಷನಲ್ (ಎಎಸಿಐ) ಮಾನ್ಯತೆ ಪಡೆದ ಕರ್ನಾಟಕದ ಪ್ರಪ್ರಥಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಸಾಕ್ರಾ ವರ್ಲ್ಡ್ ಆಸ್ಪತ್ರೆ ಪಾತ್ರವಾಗಿದೆ. ಜಾಗತಿಕ ಮಟ್ಟದ ಮಾನ್ಯತಾ ಸಂಸ್ಥೆಗಳಲ್ಲಿ ಒಂದಾದ ಎಎಸಿಐನ ಈ ಪ್ರತಿಷ್ಠಿತ ಮಾನ್ಯತೆಯು, ವೈದ್ಯಕೀಯ ಶ್ರೇಷ್ಠತೆ, ರೋಗಿಗಳ ಸುರಕ್ಷತೆ ಮತ್ತು ಜಾಗತಿಕ ಮಟ್ಟದ ಆರೋಗ್ಯ ಸೇವಾ ಪದ್ಧತಿಗಳಿಗೆ ಸಾಕ್ರಾ ಆಸ್ಪತ್ರೆ ಹೊಂದಿರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ.

ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕ್ವಾಲಿಟಿ ಇನ್ ಹೆಲ್ತ್ ಕೇರ್ ಎಕ್ಸ್‌ಟರ್ನಲ್ ಇವ್ಯಾಲ್ಯುಯೇಷನ್ ಅಸೋಸಿಯೇಷನ್‌ನಿಂದ ಮಾನ್ಯತೆ ಪಡೆದಿರುವ ಎಎಸಿಐ, ತನ್ನ ಗುಣಮಟ್ಟದ ಮಾನದಂಡಗಳು ಅಂತಾರಾಷ್ಟ್ರೀಯ ಉತ್ತಮ ಪದ್ಧತಿಗಳೊಂದಿಗೆ ನಿರಂತರವಾಗಿ ವಿಕಸನಗೊಳ್ಳುತ್ತಾ, ಅತ್ಯುನ್ನತ ಜಾಗತಿಕ ಮಟ್ಟವನ್ನು ಖಚಿತಪಡಿಸುತ್ತದೆ. ಈ ಮಾನ್ಯತೆಯ ಅಡಿಯಲ್ಲಿ, ಆಸ್ಪತ್ರೆಯ ಆರೈಕೆ, ಸುರಕ್ಷತೆ ಮತ್ತು ಕಾರ್ಯಾಚರಣೆಯ ಪ್ರತಿಯೊಂದು ವಿಭಾಗವನ್ನೂ ಕಠಿಣ ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ ಎಂದು ಸಾಕ್ರಾ ವರ್ಲ್ಡ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಯುಚಿ ನಗಾನೊ, ಉಪ ವ್ಯವಸ್ಥಾಪಕ ನಿರ್ದೇಶಕ ಕೀ ಇಯಾಮಾ ತಿಳಿಸಿದ್ದಾರೆ.

ಪೊಲೀಸ್ ನಿರೀಕ್ಷಕ ಯೋಗ ನಂಜಪ್ಪಗೆ ಸನ್ಮಾನ...


ಮೈಸೂರಿನ ವಿದ್ಯಾರಣ್ಯಪುರಂನ ಠಾಣೆಯ ಪೊಲೀಸ್ ನಿರೀಕ್ಷಕರಾಗಿ ಅಧಿಕಾರ ಸ್ವೀಕರಿಸಿದ ಯೋಗ ನಂಜಪ್ಪ ಅವರನ್ನು ಜೆ.ಪಿ.ನಗರದ ನಾಗರಿಕ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಮಿತಿಯ ಎಂ.ಮಹಾದೇವ, ಆನಂದ, ನಾರಾಯಣ, ಪುನೀತ್, ಗಿರೀಶ್, ಪ್ರಸಾದ್ ಇತರರು ಉಪಸ್ಥಿತರಿದ್ದರು.

ಇಂದಿನಿಂದ 20ರವರೆಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಅ. 12– ವಿಶ್ವ ಸ್ತನ ಕ್ಯಾನ್ಸರ್ ಜಾಗೃತಿ ತಿಂಗಳಿನ ಅಂಗವಾಗಿ, ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆಯು ಸ್ತನ ಕ್ಯಾನ್ಸರ್‌ನ ಆರಂಭಿಕ ಪತ್ತೆ ಮತ್ತು ತಡೆಗಟ್ಟುವಿಕೆಯನ್ನು ಉತ್ತೇಜಿಸಲು ಉಚಿತ ಕ್ಲಿನಿಕಲ್ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಆಯೋಜಿಸಿದೆ. ಈ ಶಿಬಿರವು ಅ.13ರಿಂದ 20ರವರೆಗೆ ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆ ಆವರಣದಲ್ಲಿ ನಡೆಯಲಿದೆ.

ಆಸ್ಪತ್ರೆಯ ಅನುಭವಿ ಆಂಕಾಲಜಿಸ್ಟ್‌ಗಳು ಮತ್ತು ತಜ್ಞರು ಈ ಶಿಬಿರದಲ್ಲಿ ಉಚಿತ ಸಮಾಲೋಚನೆ, ಕ್ಲಿನಿಕಲ್ ಸ್ತನ ಪರೀಕ್ಷೆಗಳು ಮತ್ತು ಮ್ಯಾಮೋಗ್ರಫಿಯಂತಹ ತಪಾಸಣಾ ವಿಧಾನಗಳ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ. ಸ್ತನ ಕ್ಯಾನ್ಸರ್‌ನ ಲಕ್ಷಣಗಳು, ಅಪಾಯಕಾರಿ ಅಂಶಗಳು ಮತ್ತು ಕ್ಯಾನ್ಸರ್ ಬರುವ ಸಾಧ್ಯತೆಯನ್ನು ಕಡಿಮೆ ಮಾಡುವ ಜೀವನಶೈಲಿಯ ಬದಲಾವಣೆಗಳ ಬಗ್ಗೆ ಮಹಿಳೆಯರಿಗೆ ಅರ್ಥಮಾಡಿಸಲು ಶೈಕ್ಷಣಿಕ ಅಧಿವೇಶನಗಳನ್ನು ಸಹ ನಡೆಸಲಾಗುತ್ತದೆ. ಇದರ ಜೊತೆಗೆ, ಮ್ಯಾಮೋಗ್ರಫಿ (Mammography) ಮೇಲೆ ಶೇ.50 ರಿಯಾಯಿತಿ ಸಹ ನೀಡಲಾಗುತ್ತಿದೆ. ಎಲ್ಲಾ ವಯೋಮಾನದ ಮಹಿಳೆಯರು, ವಿಶೇಷವಾಗಿ 40 ವರ್ಷಕ್ಕಿಂತ ಮೇಲ್ಪಟ್ಟವರು, ಈ ಅವಕಾಶವನ್ನು ಬಳಸಿಕೊಂಡು ತಮ್ಮ ಆರೋಗ್ಯಕ್ಕೆ ಆದ್ಯತೆ ನೀಡುವಂತೆ ಆಸ್ಪತ್ರೆಯು ಉತ್ತೇಜಿಸುತ್ತದೆ. ಆರಂಭಿಕ ಪತ್ತೆ ಜೀವಗಳನ್ನು ಉಳಿಸಬಹುದು. ಇಂದಿನ ಒಂದು ಸರಳ ತಪಾಸಣೆ ನಾಳೆ ದೊಡ್ಡ ಬದಲಾವಣೆ ತರಬಲ್ಲದು. ವಿವರಗಳಿಗಾಗಿ 0821–2300600/2300606 ಸಂಪರ್ಕಿಸಬಹುದು.

ಮೈಸೂರಲ್ಲಿ ಆರ್ಯವೈಶ್ಯ ಸಮುದಾಯದ ಸಮಾವೇಶ

ಆರ್ಯವೈಶ್ಯ ಸಮಾಜದ ಹಿಂದಿನ ವೈಭವ ಮರುಕಳಿಸಬೇಕು

ಗ್ಲೋಬಲ್ ಆರ್ಯ ವೈಶ್ಯ ಸಮಿಟ್ ನಿರ್ದೇಶಕ ಅನಿಲ್‌ಕುಮಾರ್

ಮೈಸೂರು,ಅ.12(ಬಿಎಲ್‌ಯು)–ರಾಜ ಮಹಾರಾಜರ ಕಾಲದಿಂದಲೂ ವ್ಯಾಪಾರ, ವ್ಯವಹಾರಕ್ಕೆ ಪ್ರಖ್ಯಾತಿ ಗಳಿಸಿದ್ದ ಆರ್ಯ ವೈಶ್ಯ ಸಮುದಾಯದವರ ಹಿಂದಿನ ವೈಭವ ಮರುಕಳಿಸಬೇಕು ಎಂದು ಗ್ಲೋಬಲ್ ಆರ್ಯ ವೈಶ್ಯ ಸಮಿಟ್ ನಿರ್ದೇಶಕ ಅನಿಲ್‌ಕುಮಾರ್ ಅವರು ಕರೆ ನೀಡಿದರು.

ವಿಶ್ವೇಶ್ವರನಗರ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಮೈಸೂರು ಮತ್ತು ಮಂಡ್ಯ ಜಿಲ್ಲಾ ಸಮಾವೇಶದಲ್ಲಿ ಮಾತನಾಡಿದ ಅವರು, ನಮ್ಮ ಸಮುದಾಯ ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿ ಗಳಿಸಲು ಕರ್ನಾಟಕ ಆರ್ಯ ವೈಶ್ಯ ಮಹಾಸಭಾ ಹಲವು ಯೋಜನೆ ರೂಪಿಸಿದೆ ಎಂದರು.

ಹಿಂದೂ ಸಮಾಜದಲ್ಲಿರುವ ನಾಲ್ಕು ವರ್ಣಗಳಲ್ಲಿ ಆರ್ಯವೈಶ್ಯ ಸಮುದಾಯವನ್ನು ನಾವು ಪ್ರತಿನಿಧಿಸುತ್ತಿದ್ದೇವೆ. ನಮ್ಮ ಕುಲಕಸಬು ವ್ಯಾಪಾರವಾಗಿದೆ. ಆದರೆ ಇಂದು ವ್ಯಾಪಾರದಲ್ಲಿ ನಷ್ಟವಾಗುತ್ತಿದ್ದು, ನೈತಿಕತೆ ಇಲ್ಲದೆ ಮೋಸ ಮಿತಿಮೀರಿದೆ. ಇದರಿಂದ ಆರ್ಯವೈಶ್ಯ ಸಮುದಾಯ ಬಹಳಷ್ಟು ಸವಾಲುಗಳನ್ನು ಎದುರಿಸುತ್ತಿದೆ ಎಂದರು. ನಮ್ಮ ಸಮುದಾಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕಿದೆ. ಈ ಹಿನ್ನೆಲೆಯಲ್ಲಿ ಎಐ ಸೇರಿದಂತೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಈ ಮೊದಲು ನಮ್ಮ ಸಮುದಾಯದವರು ಬೇರೆಯವರಿಗೆ ಕೆಲಸ ನೀಡುತ್ತಿದ್ದರು. ಆದರೆ ಈಗ ನಾವೇ ಬೇರೆಯವರ ಬಳಿ ಕೆಲಸ ಕೇಳುವ ಅನಿವಾರ್ಯತೆ ಎದುರಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಮ್ಮ ಸಮಾಜದ ನಿಷ್ಠೆ ಮತ್ತು ಪ್ರಾಮಾಣಿಕತೆ ಬಗ್ಗೆ ಬೇರೆ ಸಮಾಜದವರಿಗೆ ತಿಳಿದಿದೆ. ಆದರೆ ನಮ್ಮ ಸಮಾಜ ಇದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ನಮ್ಮ ಸಮುದಾಯದ ಹಿರಿಮೆ, ಗರಿಮೆ, ಸಾಮರ್ಥ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆ ಬಗ್ಗೆ ನಾವು ಅರಿತುಕೊಳ್ಳಬೇಕು. ಜೊತೆಗೆ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.


ಮೈಸೂರಿನ ವಿಶ್ವೇಶ್ವರನಗರ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಭಾನುವಾರ ನಡೆದ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಮೈಸೂರು ಮತ್ತು ಮಂಡ್ಯ ಜಿಲ್ಲಾ ಸಮಾವೇಶವನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಮತ್ತು ಅಖಿಲ ಭಾರತ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ.ರವಿಶಂಕರ್ ಉದ್ಘಾಟಿಸಿದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ಮತ್ತು ಅಖಿಲ ಭಾರತ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ. ರವಿಶಂಕರ್, ಮಂಡ್ಯ ಆರ್ಯವೈಶ್ಯ ಮಂಡಳಿ ಅಧ್ಯಕ್ಷ ನಂಜುಂಡಸ್ವಾಮಿ, ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಸಂಘಟನಾ ಕಾರ್ಯದರ್ಶಿ ಎ.ಆರ್.ರವಿಕುಮಾರ್, ಎಕ್ಸಿಕ್ಯೂವ್ ಮೆಂಬರ್ ಗೌರವ್ ಸುಧಾ ಮುರುಳಿ, ಮೈಸೂರು ವಿಭಾಗದ ಅಧ್ಯಕ್ಷ ಪಾರ್ಥಸಾರಥಿ, ಮೈಸೂರು ಜಿಲ್ಲಾಧ್ಯಕ್ಷ ಕೆ.ಆನಂದ ಕೃಷ್ಣ, ಕಾರ್ಯದರ್ಶಿಗಳಾದ ರಶ್ಮಿ, ಇ.ಕೆ.ಅನಂತ, ಮೈಸೂರು–ಮಂಡ್ಯ ಜಿಲ್ಲಾ ಸಮಾವೇಶದ ಅಧ್ಯಕ್ಷ ಎಂ.ಎಸ್.ರಾಮಚಂದ್ರ, ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ರಸಾದ್, ಕಾರ್ಯದರ್ಶಿ ಕೃಷ್ಣ, ಮಂಡ್ಯ ಜಿಲ್ಲಾ ಸಮಿತಿಯ ಎಕ್ಸಿಕ್ಯೂಟಿವ್ ಮೆಂಬರ್ ಕೃಷ್ಣಮೂರ್ತಿ, ಕರ್ನಾಟಕ ವಾಸವಿ ದೇವಸ್ಥಾನಗಳ ಒಕ್ಕೂಟದ ನಿರ್ದೇಶಕ ಎಂ.ಎಸ್.ನಾಗರಾಜ ಗುಪ್ತ, ವಾಸವಿ ಯುವ ಜನ ಸಂಘದ ಅಧ್ಯಕ್ಷ ನಾಗೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಪ್ರಕರಣ ಘೋರ ಅಪರಾಧ

ಮೈಸೂರು,ಅ.12(ಜಿಎ)–ಸುಪ್ರೀಂ ಕೋರ್ಟ್ ನಾಯಮೂರ್ತಿಗಳ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿರುವ ಪ್ರಕರಣ ಘೋರ ಅಪರಾಧ ಎಂದು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಕೆ.ಮಹೇಶ್ ತಿಳಿಸಿದ್ದಾರೆ.

ವಕೀಲ ರಾಕೇಶ್ ಕಿಶೋರ್ ನಿಲುವನ್ನು ಬೆಂಬಲಿಸುವವರು ಯಾರು? ಯಾವ ಪಕ್ಷದವರು? ಅದರ ಹಿಂದೆ ಯಾರಿದ್ದಾರೆ ಎಂಬುದೆಲ್ಲಾ ಮುಚ್ಚಿಟ್ಟ ಸತ್ಯವಲ್ಲ. ಸನಾತನವಾದಿಗಳು ಮತ್ತು ಕೋಮುವಾದಿಗಳು ಈ ಕೃತ್ಯವನ್ನು ಬೆಂಬಲಿಸುತ್ತಿದ್ದಾರೆ. ರಾಕೇಶ್ ಕುಮಾರ್ ಬೆಂಬಲಿಸುವವರನ್ನು ಶಿಕ್ಷೆಗೆ ಒಳಪಡಿಸಬೇಕು.

ಮುಖ್ಯ ನ್ಯಾಯಮೂರ್ತಿಗಳನ್ನು ಅವಮಾನಿಸುವ ಪ್ರಯತ್ನ ಅಸಹನೆಯ ಪ್ರತಿ ಬಿಂಬ. ಈ ಘಟನೆಗೆ ದೇಶವ್ಯಾಪಿ ಆಕ್ರೋಶ ವ್ಯಕ್ತವಾಗುತ್ತಿದೆ. ಈಗಾಗಲೇ ನ್ಯಾಯಾಂಗ ತನಿಖೆಗೂ ಆದೇಶಿಸಲಾಗಿದೆ. ಆದರೆ, ರಾಕೇಶ್ ಕಿಶೋರ್ ತಾನು ಮಾಡಿದ್ದು ತಪ್ಪಲ್ಲ, ಅದಕ್ಕಾಗಿ ಕ್ಷಮೆ ಕೇಳುವುದಿಲ್ಲ ಎಂಬ ಉದ್ಧಟತನ ಸಹಿಸಲಾಗದು ಎಂದು ಹೇಳಿದ್ದಾರೆ. ಭಾರತದಲ್ಲಿ ಸುಪ್ರೀಂಕೋರ್ಟ್ ನ್ಯಾಯಾಮೂರ್ತಿಗಳು ಪರಮೋಚ್ಚ ಅಧಿಕಾರವನ್ನು ಹೊಂದಿದ್ದಾರೆ. ಸಂವಿಧಾನದ ರಕ್ಷಕರು. ಅವರ ಮೇಲೆ ದಾಳಿ ಮಾಡುವ ಯತ್ನವು ದೇಶದ ಮೇಲೆ ಮಾಡುವ ದಾಳಿಯಾಗಿದೆ. ಸಂವಿಧಾನ ಒಪ್ಪದ ಮನಸ್ಸುಗಳು ಈ ಕೃತ್ಯದ ಹಿಂದಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೂ ಎಸೆಯಲೆತ್ನಿಸಿದವನ ಸಮರ್ಥಿಸುವವರು ಈ ದೇಶದಲ್ಲಿ ಇರುವುದೇ ದುರಂತ

ಮೈಸೂರು, ಅ.12–ಇತ್ತೀಚೆಗೆ ನಡೆದಿರುವ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರ ಮೇಲಿನ ಶೂ ಎಸೆಯಲೆತ್ನ ಪ್ರಕರಣ ಇಡೀ ದೇಶವೇ ತಲೆ ತಗ್ಗಿಸುವಂತಹ ಕೆಲಸ. ದೇಶದ ಅತ್ಯುನ್ನತ ಸಂವಿಧಾನ ಬದ್ಧ ಪೀಠದಲ್ಲಿರುವವರಿಗೆ ಈ ರೀತಿಯ ಅಗೌರವ ತೋರುವುದು ಮನುವಾದಿಗಳ ಅಸಹಿಷ್ಣುತೆ ತೋರಿಸುತ್ತದೆ. ಈ ಘಟನೆಯನ್ನು ದೇಶದ ಪ್ರತಿಯೊಬ್ಬರು ಒಕ್ಕೊರಲಿನಿಂದ ಖಂಡಿಸಬೇಕಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದ್ದಾರೆ.


ಸೋಮಶೇಖರ್

ಭಾರತದ ಸಂವಿಧಾನ ವಿಶ್ವ ಭೂಪಟದಲ್ಲಿ ಭಾರತದ ಸ್ಥಾನವನ್ನು ಎತ್ತರಕ್ಕೆ ಕೊಂಡೊಯ್ದಿದೆ. ಅಂತಹ ಶ್ರೇಷ್ಠ ಸಂವಿಧಾನದಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಒಬ್ಬ ಅಗ್ರಗಣ್ಯ ಹುದ್ದೆಯಲ್ಲಿರುವ ವ್ಯಕ್ತಿ ದಲಿತ ಸಮುದಾಯ ಎಂಬುದನ್ನು ಸಹಿಸದ ಕಠೋರಹೀನ ಮನಃಸ್ಥಿತಿಯ ಜನ ಇಂತಹ ಕೆಲಸಗಳನ್ನು ಮಾಡುತ್ತಾರೆ. ಅಂತಹ ದೇಶದೊಳಗಿನ ದ್ರೋಹಿಗಳನ್ನು ಸಮರ್ಥಿಸಿಕೊಂಡು ಹೋಗಿದ್ದೆ ಆದರೆ ಸಮರ್ಥನೆ ಮಾಡಿಕೊಳ್ಳುತ್ತಿರುವ ವ್ಯಕ್ತಿಗಳಿಗೂ ಇಂತಹ ಪರಿಸ್ಥಿತಿ ಎದುರಾಗುವ ದಿನಗಳು ದೂರ ಇಲ್ಲ. ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕರ್ನಾಟಕ ಮಾಣಿಕ್ಯ ಪ್ರಶಸ್ತಿ ಪ್ರದಾನ, ಉಚಿತ ನೇತ್ರ ತಪಾಸಣೆ


ಮೈಸೂರಿನ ಪುರಭವನದಲ್ಲಿ ಏರ್ಪಡಿಸಿದ್ದ ಸಾಧಕರಿಗೆ ಪ್ರಶಸ್ತಿ ಪ್ರದಾನ, ಉಚಿತವಾಗಿ ನೇತ್ರ ತಪಾಸಣಾ ಶಿಬಿರವನ್ನು ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ಅ.12(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಭಾನುವಾರ ಉಚಿತ ನೇತ್ರ ತಪಾಸಣೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಕರ್ನಾಟಕ ಮಾಣಿಕ್ಯ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಮೇಲು ಕೋಟೆ ವೆಂಗಿಪುರ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ವಹಿಸಿದ್ದು, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಚಾಲನೆ ನೀಡಿದರು. ಇದೇ ವೇಳೆ ಸರ್ಕಾರಿ ಶಾಲೆಯ ಕೆಲ ಮಕ್ಕಳಿಗೆ ಉಚಿತವಾಗಿ ಶಾಲಾ ಬ್ಯಾಗ್ ವಿತರಿಸಲಾಯಿತು. ಬಳಿಕ ನಡೆದ ಉಚಿತ ನೇತ್ರ ತಪಾಸಣಾ ಶಿಬಿರದಲ್ಲಿ ಹಲವು ಮಂದಿ ತಪಾಸಣೆ ಮಾಡಿಸಿಕೊಂಡರು. ಕೆಲವರಿಗೆ ಅಗತ್ಯವಾದ ಕನ್ನಡಕ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ 'ಕರ್ನಾಟಕ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹೈಕೋರ್ಟ್ ವಕೀಲ ಹೆಚ್.ಆರ್.ನಾರಾಯಣ್, ಅಲೆಯನ್ಸ್ ಜಿಲ್ಲಾ ರಾಜ್ಯಪಾಲ ಎಸ್.ವೆಂಕಟೇಶ್, ಉದ್ಯಮಿಗಳಾದ ಉಮೇಶ್ ಸಿ.ಭಜರಂಗಿ, ಪಿ.ಪ್ರಶಾಂತ್, ಬಂಡೀಪುರ ಎಸಿಎಫ್ ಎನ್.ಪಿ. ನವೀನ್‌ಕುಮಾರ್, ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷೆ ಎಂ.ಸಿ.ಚೊಂದಮ್ಮ ಪೂನ್ನಚ್ಚ, ಹರೇ ಶ್ರೀನಿವಾಸ ಸಮಿತಿಯ ಗುಂಡು ವೆಂಕಟೇಶ್‌ಕುಮಾರ್, ವಕೀಲ ಎಸ್.ಉಮೇಶ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು ಸಂಸ್ಥಾಪಕ ರಾಜ್ಯಾಧ್ಯಕ್ಷ ಕಸ್ತೂರಿ ಚಂದ್ರು, ರಾಮನಗರದ ಗೋವಿಂದಸ್ವಾಮಿ, ಜಿಲ್ಲಾಧ್ಯಕ್ಷೆ ಅಮೀನಾ ಬೇಗಂ, ಎಚ್.ಪಿ.ನಟರಾಜು, ನಗರಾಧ್ಯಕ್ಷೆ ಮೌಲ್ಯಾ ಜೈಕುಮಾರ್, ಹಾಸನ ಜಿಲ್ಲಾಧ್ಯಕ್ಷೆ ಪಾರ್ವತಿ, ಕೊಡಗು ಜಿಲ್ಲಾಧ್ಯಕ್ಷೆ ನಯನ ಹರಿಶ್ಚಂದ್ರ, ಸಂಸ್ಥಾಪಕ ಕಾರ್ಯದರ್ಶಿ ತೇಜಸ್ ಪೃಥ್ವಿರಾಜ್ ಇದ್ದರು. ಹುಬ್ಬಳ್ಳಿ–ಧಾರವಾಡ ಜಿಲ್ಲಾಧ್ಯಕ್ಷೆ ಜಿ.ಪ್ರೇಮಾ ಕಾರ್ಯಕ್ರಮ ನಿರೂಪಿಸಿದರು.